Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–2 | ಜನವರಿ 8–14, 2024 | ಪುಟ 16 | ರೂ. 10/–
Volume-18 | Issue-2 | January 8-14, 2024 | Pages:16 | Price: 10/-

ಅಕ್ಷರದವ್ವನ ಆಶಯ ಮತ್ತು ಮಹಿಳಾ ಸಬಲೀಕರಣ





ಆಧಾರ್ ಜೋಡಣೆ ಉದ್ಯೋಗ ವಂಚನೆ



ಗಾಝಾದಲ್ಲಿ ಮುಗಿಯದ ಯುದ್ಧ

ರಾಮ ಮಂದಿರ: ರಾಜಕೀಯ ಕಾರ್ಯಕ್ರಮವೇ?

ಸಾಮಾನ್ಯವಾಗಿ, ದೇವಾಲಯದ ಉದ್ಘಾಟನೆಯು ಧಾರ್ಮಿಕ ವಿಷಯವಾಗಿದೆ. ಆದರೆ, ಅಯೋಧ್ಯೆಯ ರಾಮಮಂದಿರ ಉದ್ಘಾಟನೆಗೆ 'ಎಲ್ಲಾ' ರಾಜಕೀಯ ಪಕ್ಷಗಳಿಗೆ ಆಹ್ವಾನಗಳನ್ನು ನೀಡಲಾಗಿದೆ. ಮಾತ್ರವಲ್ಲ, ಆಹ್ವಾನಿತರ ಪಟ್ಟಿಯನ್ನು ವ್ಯಾಪಕವಾಗಿ ಪ್ರಚಾರ ಮಾಡತೊಡಗಿದ್ದಾರೆ. ಮನೆ–ಮನೆಗೆ ಅಕ್ಷತೆ ಹಂಚುವ ಕೆಲಸವನ್ನು ಸಂಘಪರಿವಾರದ ಕಾರ್ಯಕರ್ತರಿಗೆ ವಹಿಸಲಾಗಿದೆ. ಅಂದರೆ ಇದೊಂದು ಧಾರ್ಮಿಕ ಕಾರ್ಯಕ್ರಮಕ್ಕಿಂತ ಹೆಚ್ಚಾಗಿ ರಾಜಕೀಯ ಕಾರ್ಯಕ್ರಮದಂತಾಗಿದೆ ಎಂಬುದು ಎದ್ದು ಕಾಣುತ್ತಿದೆ.

ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ: ರಾಜಕೀಯ ಕಾರ್ಯಕ್ರಮನ್ನಾಗಿಸಿರುವ ಬಿಜೆಪಿ

ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಬಿಜೆಪಿ ಮಾಡುತ್ತಿರುವ ವಿನ್ಯಾಸದ ಭಾಗವಾಗಿ ಅಯೋಧ್ಯೆಯಲ್ಲಿ ಜನವರಿ 22 ರಂದು ವಿಶಾಲವಾದ ಮಂದಿರ ನಿರ್ಮಿಸಿ, ಅಬ್ಬರದ ಪ್ರಚಾರದೊಂದಿಗೆ ಶ್ರೀರಾಮ ಮೂರ್ತಿಗೆ "ಪ್ರಾಣ ಪ್ರತಿಷ್ಠೆ" ನಡೆಯಲಿದೆ. ರಾಮ ಮಂದಿರದ ಉದ್ಘಾಟನೆಗೆ ಹಲವಾರು ರಾಜಕೀಯ ಪಕ್ಷಗಳ ನಾಯಕರನ್ನು ಆಹ್ವಾನಿಸಲಾಗಿದೆ. ಆಹ್ವಾನಿತರಲ್ಲಿ ಕಾಂಗ್ರೆಸ್‌ನಿಂದ ಸೋನಿಯಾ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಸೇರಿದ್ದಾರೆ.

ಸೀತಾರಾಂ ಯೆಚೂರಿ ಆ ಕಾರ್ಯಕ್ರಮಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಧರ್ಮವು ವೈಯಕ್ತಿಕ ಆಯ್ಕೆಯಾಗಿದ್ದು, ರಾಜಕೀಯ ಲಾಭಕ್ಕಾಗಿ ಅದನ್ನು ಸಾಧನವಾಗಿ ಪರಿವರ್ತಿಸಬಾರದು, ಧಾರ್ಮಿಕ ಚಟುವಟಿಕೆಗಳಿಂದ ಸರಕಾರ ದೂರವಿರಬೇಕು ಎಂದು ಯೆಚೂರಿ ಹೇಳಿದ್ದಾರೆ. "ಸಿಪಿಐ(ಎಂ) ನೀತಿಯು ಧಾರ್ಮಿಕ ನಂಬಿಕೆಗಳನ್ನು ಗೌರವಿಸುವುದು ಮತ್ತು ಪ್ರತಿಯೊಬ್ಬ ವ್ಯಕ್ತಿಯ ನಂಬಿಕೆಯನ್ನು ಮುಂದುವರಿಸುವ ಹಕ್ಕನ್ನು ಕಾಪಾಡುವುದು. ಧರ್ಮವನ್ನು ರಾಜಕೀಯ ಲಾಭದ ಸಾಧನವಾಗಿ ಪರಿವರ್ತಿಸಬಾರದು. ಧರ್ಮ ಎಂಬುದು ವೈಯಕ್ತಿಕ ಆಯ್ಕೆಯಾಗಿದೆ ಎಂದು ಅದು ನಂಬುತ್ತದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ಧಾರ್ಮಿಕ ಸಮಾರಂಭವನ್ನು ಪ್ರಧಾನ ಮಂತ್ರಿ, ಉತ್ತರ ಪ್ರದೇಶದ ಮುಖ್ಯಮಂತ್ರಿ, ಸರ್ಕಾರಿ ಅಧಿಕಾರಿಗಳು ಮತ್ತು ಇತರರನ್ನು ನೇರವಾಗಿ ಒಳಗೊಂಡ ಪ್ರಭುತ್ವ ಪ್ರಾಯೋಜಿತ ಕಾರ್ಯಕ್ರಮವಾಗಿ ಪರಿವರ್ತಿಸಿರುವುದು ಅತ್ಯಂತ ದುರದೃಷ್ಟಕರ" ಎಂದು ಅವರು ಹೇಳಿದ್ದಾರೆ.

ಸಿಚಿ

ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ ಸರ್ಕಾರ ಮತ್ತು ಧರ್ಮವನ್ನು ಬೆರೆಸುವುದನ್ನು ವಿರೋಧಿಸಿದ್ದಾರೆ. ಪ್ರತಿ ಚುನಾವಣೆಗೂ ಮುನ್ನ ಬಿಜೆಪಿ ಧರ್ಮದ ಕಾರ್ಡ್ ಬಳಸುತ್ತಿದೆ. ನಿರ್ದಿಷ್ಟವಾಗಿಲ್ಲದಿದ್ದರೂ, ಮಮತಾ ಬ್ಯಾನರ್ಜಿ ಹೋಗುತ್ತಿಲ್ಲ ಎಂಬಂತೆ ಸುದ್ದಿಗಳು ಬರುತ್ತಿವೆ. ಆದರೆ ಹಿರಿಯ ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್, ರಾಹುಲ್ ಗಾಂಧಿ ಈ ಆಹ್ವಾನವನ್ನು "ಸಕಾರಾತ್ಮಕವಾಗಿ" ಪರಿಗಣಿಸುತ್ತಿದ್ದಾರೆ ಎಂದು ಖಚಿತಪಡಿಸಿದ್ದಾರೆ. ರಾಹುಲ್ ಗಾಂಧಿಯೇ ಹೋಗುತ್ತಾರೆ ಅಥವಾ ಪಕ್ಷದ ನಿಯೋಗ ರಾಮಮಂದಿರ ಶಂಕುಸ್ಥಾಪನೆ ಸಮಾರಂಭದಲ್ಲಿ ಪಾಲ್ಗೊಳ್ಳುತ್ತದೆ ಎಂದು ಕೂಡ ಹೇಳಲಾಗಿದೆ. ಇತರ ಆಹ್ವಾನಿತ ಪಕ್ಷಗಳು ಮತ್ತು ಅವರ ನಾಯಕರು ಏನು ಮಾಡುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮತ್ತೊಂದು ಆತ್ಮಹತ್ಯಾಕಾರಿ ಪ್ರಮಾದ?


ಕಾಂಗ್ರೆಸ್‌ನ ಉತ್ತರ ಪ್ರದೇಶ ರಾಜ್ಯ ಸರ್ಕಾರವು 1949 ರಲ್ಲಿ ಬಾಬರಿ ಮಸೀದಿಯಲ್ಲಿ ಕೆಲವು ವಿಗ್ರಹಗಳನ್ನು ಗುಟ್ಟಾಗಿ ಇರಿಸುವ 'ಅಪರಿಚಿತ ವ್ಯಕ್ತಿಗಳು' ಮಾಡಿದ ಅಪರಾಧವನ್ನು ನಿರ್ಲಕ್ಷಿಸಿದಾಗ ಕಾಂಗ್ರೆಸ್ ಮೊದಲ ಆತ್ಮಹತ್ಯಾಕಾರಿ ಪ್ರಮಾದ ಮಾಡಿತು. ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವ ಬದಲು, ಸರ್ಕಾರವು ಬಾಬರಿ ಮಸೀದಿಗೆ ಬೀಗ ಹಾಕಲು ಮತ್ತು ಅದರೊಳಗೆ ಮುಸ್ಲಿಮರ ಪ್ರವೇಶವನ್ನು ನಿಷೇಧಿಸಲು ನಿರ್ಧರಿಸಿತು. 1949 ರಲ್ಲಿ ಹಾಕಿದ ಬೀಗವನ್ನು 1986 ರಲ್ಲಿ ತೆಗೆಯಲು ಕಾಂಗ್ರೆಸ್ ಆಡಳಿತ ಅವಕಾಶ ಮಾಡಿಕೊಟ್ಟಿತು. ಇದು ಪಕ್ಷದ ಮತ್ತೊಂದು ಪ್ರಮಾದ ಎಂದು ಹೇಳಬೇಕು. ಒಂದು ಅಪರಾಧವು ಇನ್ನೊಂದಕ್ಕೆ ಕಾರಣವಾಯಿತು. 1992 ರಡಿಸೆಂಬರ್ 6 ರಂದು ಬಾಬರಿ ಮಸೀದಿಯನ್ನು ಧ್ವಂಸಗೊಳಿಸಲಾಯಿತು.

ಈ ಎರಡೂ ಕೃತ್ಯಗಳನ್ನು ಸುಪ್ರೀಂಕೋರ್ಟ್ ಅಪರಾಧ ಎಂದು ಘೋಷಿಸಿದೆ. ಇದರಲ್ಲಿ ಅಂದಿನ ಸರ್ಕಾರವೂ ಅಪರಾಧಿಯಾಗಿತ್ತು. ಅದೇ ಸುಪ್ರೀಂಕೋರ್ಟ್ ಇದರ ಲಾಭವನ್ನು (ಬಾಬರಿ ಮಸೀದಿ ಇದ್ದ ಭೂಮಿಯನ್ನು) ಈ ಎರಡೂ ಅಪರಾಧಗಳಲ್ಲಿ ಭಾಗಿಯಾದವರಿಗೆ ಅನುಭವಿಸಲು ಅವಕಾಶ ಮಾಡಿಕೊಟ್ಟಿತು ಎಂಬುದು ಬೇರೆ ವಿಷಯ. 2019 ರಲ್ಲಿ, ಅಪರಾಧ ಮತ್ತು ವಂಚನೆಯ ಕೃತ್ಯಗಳ ಮೂಲಕ ಬಾಬರಿ ಮಸೀದಿಯನ್ನು ಉರುಳಿಸಿ, ಖಾಲಿಯಾದ ಭೂಮಿಯಲ್ಲಿ ರಾಮ ಮಂದಿರವನ್ನು ನಿರ್ಮಿಸಲು ಸುಪ್ರೀಂಕೋರ್ಟ್ ಅವಕಾಶ ನೀಡಿತು.

ನೆಹರೂ ಅವರು ತಾಳಿದ್ದ ನಿಲುವು

ಈ ಸಂದರ್ಭದಲ್ಲಿ ಒಂದು ವಿಷಯವನ್ನು ನೆನಪಿಸಿಕೊಳ್ಳುವುದು ಅಗತ್ಯ. ಅಂದಿನ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು ಗುಜರಾತ್‌ನ ಸೋಮನಾಥ ದೇಗುಲದ ದುರಸ್ತಿ ನಂತರ ಪುನರಾರಂಭಕ್ಕೆ ಅಧಿಕೃತವಾಗಿ ಹೋಗಬೇಕು ಎಂದು ಇಚ್ಛಿಸಿದ್ದರು. ಆದರೆ ಆಗಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಇಚ್ಛೆಯನ್ನು ವಿರೋಧಿಸಿದರು. ಧಾರ್ಮಿಕ ಕಾರ್ಯಕ್ರಮಕ್ಕೆ ರಾಷ್ಟ್ರಪತಿಗಳು ಅಧಿಕೃತವಾಗಿ ತೆರಳುವಂತಿಲ್ಲ ಎಂದು ಸ್ಪಷ್ಟಪಡಿಸಿದರು. ತಮ್ಮ ರಾಜಕೀಯಕ್ಕಾಗಿ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಜಾತ್ಯತೀತ ಮೌಲ್ಯಗಳನ್ನು ನಾಶ ಮಾಡುತ್ತಿರುವ ಹಾಲಿ ಪ್ರಧಾನಿ ನರೇಂದ್ರ ಮೋದಿಯವರು "ಪ್ರಾಣ ಪ್ರತಿಷ್ಠಾ" ಕಾರ್ಯಕ್ರಮವನ್ನು ನೆರವೇರಿಸಲಿದ್ದಾರೆ. ಇವರೊಂದಿಗೆ ಆರ್‌ಎಸ್‌ಎಸ್ ಸರಸಂಘ ಚಾಲಕ್ ಮೋಹನ್ ಭಾಗವತ್ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಈಗ ರಾಮ ಮಂದಿರದ ವಿಷಯದಲ್ಲಿ ಕಾಂಗ್ರೆಸ್ ಏನು ಮಾಡಲಿದೆ ಎಂಬುದು ಪ್ರಶ್ನೆಯಾಗಿದೆ. ಕಾಂಗ್ರೆಸ್ ನ ಮೃದು ಹಿಂದುತ್ವ ಧೋರಣೆಯಿಂದ ಆ ಪಕ್ಷಕ್ಕೆ ಹೆಚ್ಚು ನಷ್ಟ ಆಗುತ್ತದೆ ಮಾತ್ರವಲ್ಲ, ಇದರಿಂದ ಬಿಜೆಪಿ ಮತ್ತು ಸಂಘಪರಿವಾರದ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಕಾಂಗ್ರೆಸ್ ಪಕ್ಷದ ಇಂದಿನ ಇದನ್ನು ಹೇಗೆ ನೋಡುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ರಾಮ ಮಂದಿರ ನಿರ್ಮಾಣ ಇನ್ನೂ ಪೂರ್ಣಗೊಂಡಿಲ್ಲ. ಇದು ರಾಮಮಂದಿರ ನಿರ್ಮಾಣದ ಎರಡನೇ ಹಂತವಷ್ಟೇ. 2025ರ ಜನವರಿ ವೇಳೆಗೆ ದೇವಾಲಯದ ನಿರ್ಮಾಣ ಪೂರ್ಣಗೊಳ್ಳಲಿದೆ.



ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಫೆಬ್ರವರಿ 2020 ರಿಂದ ಮಾರ್ಚ್ 31, 2023 ರವರೆಗೆ ದೇವಾಲಯದ ನಿರ್ಮಾಣಕ್ಕಾಗಿ ಅವರು 90 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಮತ್ತು ಅವರ ಬಳಿ ಇನ್ನೂ 3 ಸಾವಿರ ಕೋಟಿ ಮೀಸಲು ಇದೆ ಎಂದು ಟ್ರಸ್ಟ್ ಬಹಿರಂಗಪಡಿಸಿದೆ. ಈ ವರ್ಷ, ಉತ್ತರ ಪ್ರದೇಶ ಸರ್ಕಾರವು ಮಂದಿರ ನಿರ್ಮಾಣಕ್ಕಾಗಿ ಬಜೆಟ್‌ನಿಂದ 500 ಕೋಟಿ ರೂ. ಕೊಟ್ಟಿದೆ. ಅಯೋಧ್ಯೆ ಪ್ರವಾಸಿ ತಾಣವಾಗಲಿದ್ದು, ತುಳಸಿ ಸ್ಮಾರಕ ಭವನದ ಪುನಶ್ಚೇತನಕ್ಕೆ ಸರ್ಕಾರ ಇನ್ನೂ 95 ಕೋಟಿ ರೂ. ವೆಚ್ಚ ಮಾಡಲಿದೆ. ದೇಶಾದ್ಯಂತ ಐದು ಲಕ್ಷ ಗ್ರಾಮಗಳಲ್ಲಿ ಜನವರಿ 1 ರಿಂದ 15 ರವರೆಗೆ ತಾತ್ಕಾಲಿಕ ರಾಮನ ಮೂರ್ತಿ ಮುಂದೆ ಇಟ್ಟು ಪೂಜಿಸಿದ ಅಕ್ಷತೆಯನ್ನು ಹಂಚಿಕೊಳ್ಳುತ್ತಾರೆ. ಮನೆ ಮನೆಗೆ ಅಕ್ಷತೆ ಹಂಚುವ ಕೆಲಸವನ್ನು ಸಂಘಪರಿವಾರದ ಕಾರ್ಯಕರ್ತರಿಗೆ ವಹಿಸಲಾಗಿದೆ. ನಿರ್ಮಾಣ ಪೂರ್ಣಗೊಳ್ಳದೆ ಉದ್ಘಾಟನೆ ಮಾಡುತ್ತಿರುವುದು ಮುಂಬರುವ ಸಂಸತ್ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಎಂಬುದು ಸ್ಪಷ್ಟವಾಗಿದೆ.

ಕೇಂದ್ರ ಸರ್ಕಾರವು ವಿದೇಶಿ ದೇಣಿಗೆಗಾಗಿ ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಅಡಿಯಲ್ಲಿ ಅಯೋಧ್ಯೆ ಟ್ರಸ್ಟ್ ಅನ್ನು ಸಹ ನೋಂದಾಯಿಸಿದೆ. ಆದರೆ ಅದರ ಬ್ಯಾಂಕ್ ಖಾತೆ ದೆಹಲಿಯಲ್ಲಿರುವುದರಿಂದ ಅದಕ್ಕೆ ಎಷ್ಟು ಹಣ ಹೋಗಿದೆ ಎಂಬುದು ಇನ್ನೂ ತಿಳಿದಿಲ್ಲ ಎಂದು ಟ್ರಸ್ಟ್‌ನ ಪ್ರತಿನಿಧಿಯೊಬ್ಬರು ಅಯೋಧ್ಯೆಯಲ್ಲಿ ತಿಳಿಸಿದ್ದಾರೆ. ದೇಶಾದ್ಯಂತ ದೇಣಿಗೆ ಸಂಗ್ರಹಿಸಲು ಶ್ರೀ ರಾಮ ಜನ್ಮಭೂಮಿ ರಾಮಮಂದಿರ ನಿಧಿ ಸಮರ್ಪಣ ಅಭಿಯಾನವನ್ನು 15 ಜನವರಿ 2021 ರಿಂದ 44 ದಿನಗಳವರೆಗೆ ನಢೆಸಲಾಗಿತ್ತು.

ಬ್ರಿಟಿಷರ ಕಾಲದಲ್ಲಿ ಪ್ರಾರಂಭವಾದ ವಿವಾದ

ಬಾಬರಿ ಮಸೀದಿಯ ಬಗ್ಗೆ ವಿವಾದಗಳು ಪ್ರಾರಂಭವಾದ್ದು ಬ್ರಿಟಿಷರ ಕಾಲದಲ್ಲಿ. 1853 ರಲ್ಲಿ ನಿರ್ಮೋಹಿ ಎಂಬ ಹಿಂದೂ ಪಂಗಡವೊಂದು ಬಾಬರ್ ದೇವಾಲಯವನ್ನು ಕೆಡವಿ ಮಸೀದಿಯನ್ನು ನಿರ್ಮಿಸಲಾಗಿದೆ ಎಂದು ವಾದಿಸಿತು. ಆ ಸಮಯದಲ್ಲಿ ಮೊದಲ ಬಾರಿಗೆ ಅಲ್ಲಿ ಕೋಮು ಘರ್ಷಣೆಗಳು ನಡೆದವು. ಆರು ವರ್ಷಗಳ ನಂತರ, ಬ್ರಿಟಿಷ್ ಆಡಳಿತಗಾರರು ಬಾಬರಿ ಮಸೀದಿಯನ್ನು ಎರಡು ಭಾಗಗಳಾಗಿ ವಿಂಗಡಿಸಿದರು ಮತ್ತು ಮಸೀದಿ ಇರುವ ಭಾಗವನ್ನು ಪ್ರಾರ್ಥನೆಗಾಗಿ ಮುಸ್ಲಿಮರಿಗೆ ಮತ್ತು ಹೊರಭಾಗವನ್ನು ಹಿಂದೂಗಳಿಗೆ ಹಸ್ತಾಂತರಿಸಲಾಯಿತು.


ಬಾಬರಿ ಮಸೀದಿ ಧ್ವಂಸ ಅಭಿಯಾನದ ಪ್ರತಿ ಹಂತದಲ್ಲೂ ಹಿಂಸಾಚಾರ ನಡೆದಿದೆ. 1990ರಲ್ಲಿ ಬಿಜೆಪಿ ನಾಯಕ ಎಲ್‌ಕೆ ಅಡ್ವಾಣಿ

ಪುಟ 4 ಕ್ಕೆ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಫೇಸ್‌ಬುಕ್

ಸುಪ್ರಿಂ ಕೋರ್ಟಿನ ಅಯೋಧ್ಯಾ ತೀರ್ಪು ಪ್ರಕಟವಾದಾಗಿನ ವ್ಯಂಗ್ಯಚಿತ್ರ



ಕೃಪೆ: ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

"ಮತೀಯ ನಂಬಿಕೆಗಳನ್ನು ಗೌರವಿಸುವುದು ಮತ್ತು ತಮ್ಮ ನಂಬಿಕೆಯನ್ನು ಅನುಸರಿಸುವ ಪ್ರತಿಯೊಬ್ಬ ವ್ಯಕ್ತಿಯ ಹಕ್ಕನ್ನು ಕಾಪಾಡುವುದು ಸಿಪಿಐ(ಎಂ) ನೀತಿಯಾಗಿದ್ದು, ಮತಧರ್ಮವು ವೈಯಕ್ತಿಕ ಆಯ್ಕೆಯಾಗಿದೆ, ಅದನ್ನು ರಾಜಕೀಯ ಲಾಭದ ಸಾಧನವಾಗಿ ಪರಿವರ್ತಿಸಬಾರದು.ಸಂವಿಧಾನದ ಅಡಿಯಲ್ಲಿ ಭಾರತದಲ್ಲಿನ ಪ್ರಭುತ್ವವು ಯಾವುದೇ ಮತೀಯ ಸಂಬದ್ಧತೆಯನ್ನು ಹೊಂದಿರಬಾರದು ಎಂಬುದು ದೇಶ ಸರ್ವೋಚ್ಚ ನ್ಯಾಯಾಲಯ ಪುನರುಚ್ಚರಿಸಿರುವ ಭಾರತದಲ್ಲಿನ ಆಳ್ವಿಕೆಯ ಒಂದು ಮೂಲಭೂತ ತತ್ವವಾಗಿದೆ. ಈ ಸಮಾರಂಭದ ಆಯೋಜನೆಯಲ್ಲಿ ಆಳುವ ಸರಕಾರ ಇದನ್ನು ಉಲ್ಲಂಘಿಸುತ್ತಿದೆ"

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸಂಪಾದಕೀಯ

ಆಧಾರ್ ಜೋಡಣೆ: ಉದ್ಯೋಗ ವಂಚಿಸಲು ತಂತ್ರಜ್ಞಾನದ ದುರುಪಯೋಗ

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿ ಕೆಲಸ ಮಾಡುವವರಿಗೆ 'ಆಧಾರ್ ಆಧಾರಿತ ಉದ್ಯೋಗ ಖಾತರಿ ಕೂಲಿ ಪಾವತಿ ವ್ಯವಸ್ಥೆ(ಎಬಿಪಿಎಸ್)' ಯನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 2024ರ ಜನವರಿ ಒಂದರಿಂದ ಕಡ್ಡಾಯ ಮಾಡಿದೆ. ಇದರ ಪ್ರಕಾರ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿ ಕೆಲಸ ಮಾಡುವವರು ಕಡ್ಡಾಯವಾಗಿ ತಮ್ಮ ಜಾಬ್ ಕಾರ್ಡ್, ಬ್ಯಾಂಕ್ ಖಾತೆ ಮತ್ತು ಆಧಾರ್ ಲಿಂಕ್ ಮಾಡಲೇಬೇಕು. ಇದರೊಂದಿಗೆ ಬ್ಯಾಂಕ್ ಖಾತೆಯನ್ನು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಪ್ಲಾಟ್‌ಫಾರ್ಮ್‌ಗೆ ಲಿಂಕ್ ಮಾಡಬೇಕು. ಆಗ ಮಾತ್ರ ಆಧಾರ್ ಸಂಖ್ಯೆಯನ್ನು ಹಣಕಾಸಿನ ವಿಳಾಸವಾಗಿ ಬಳಸಬಹುದು. ಆಗ ಮಾತ್ರ ಮ್ಯಾಪಿಂಗ್ ಮಾಡಲು ಸಾಧ್ಯವಾಗುತ್ತದೆ. ಮ್ಯಾಪಿಂಗ್ ಮಾಡಿದ ನಂತರವೇ ಮಾಡಿದ ಕೆಲಸಕ್ಕೆ ವೇತನ ಪಾವತಿ ಸಾಧ್ಯ. ಸರ್ಕಾರದ ಈ ನೀತಿ ಬಡವರ ಮೇಲಿನ ದಾಳಿಯಾಗಿದೆ.

ಸಾವಿರಾರು ಕೋಟಿ ರೂಪಾಯಿ ಲೂಟಿ ಮಾಡಲು ಕಾರ್ಪೊರೇಟ್ ಸಂಸ್ಥೆಗಳಿಗೆ ಮುಕ್ತ ಅವಕಾಶ ಕೊಟ್ಟಿರುವ ನರೇಂದ್ರ ಮೋದಿ ಸರ್ಕಾರ ಜನ ಸಾಮಾನ್ಯರ ಬಗ್ಗೆ ಕಟುವಾಗಿ ವರ್ತಿಸುತ್ತಿದೆ. ಕಷ್ಟಕಾಲದಲ್ಲಿ ಬಡವರಿಗೆ ಒಂದಷ್ಟು ಆಸರೆಯಾಗಿರುವ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಮೇಲೆ ಮೋದಿ ಸರ್ಕಾರ ಪದೇ ಪದೇ ದಾಳಿಗಳನ್ನು ನಡೆಸುತ್ತಿದೆ. ಹೊಸ ವರ್ಷದ ಮೊದಲ ದಿನದಿಂದ ಜಾರಿಗೆ ತಂದಿರುವ ಆಧಾರ್ ಆಧಾರಿತ ಉದ್ಯೋಗ ಖಾತರಿ ಕೂಲಿ ಪಾವತಿ ವ್ಯವಸ್ಥೆಯು ಈ ದಾಳಿಯ ಸರಣಿಯಲ್ಲಿ ಇತ್ತೀಚಿನದು. ಈ ಯೋಜನೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ದೇಶಾದ್ಯಂತ ಸುಮಾರು ವರ್ಷಗಳಿಂದ ಜನತೆ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಆದರೂ ಕೇಂದ್ರ ಸರ್ಕಾರ ಇವರ ಧ್ವನಿಗೆ ಕಿವಿಗೊಡುತ್ತಿಲ್ಲ. ಎಡಪಂಥೀಯರ ಹೋರಾಟಗಳ ಫಲವಾಗಿ ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದ ಉದ್ಯೋಗ ಖಾತ್ರಿ ಕಾಯ್ದೆಯ ಕತ್ತು ಹಿಸುಕುವ ಕೆಲಸವನ್ನು ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗಿಂದಲೂ ಮಾಡುತ್ತಲೇ ಬಂದಿದೆ. ನರೇಗಾ ಯೋಜನೆಗೆ ಪ್ರತಿ ವರ್ಷ ನಿಧಿ ಹಂಚಿಕೆ ಕಡಿಮೆಯಾಗುತ್ತಿದೆ. ಕಳೆದ ಹಣಕಾಸು ವರ್ಷದಲ್ಲಿ ಈ ಕಾಯಿದೆಯಡಿ 60 ಸಾವಿರ ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದರೆ, ಪರಿಷ್ಕೃತ ಅಂದಾಜಿನಲ್ಲಿ ಶೇ.33ರಷ್ಟು ಹಂಚಿಕೆ ಕಡಿತಗೊಳಿಸಿರುವುದು ಕಂಡು ಬಂದಿದೆ.

ಹೆಚ್ಚುತ್ತಿರುವ ಬೇಡಿಕೆ

ಕೇಂದ್ರ ಸರ್ಕಾರದ ನೀತಿಯಿಂದಾಗಿ ಕೈಗಾರಿಕೆಗಳು ಮುಚ್ಚುತ್ತಿವೆ. ಉದ್ಯೋಗ ಮತ್ತು ಉದ್ಯೋಗ ಕ್ಷೇತ್ರ ಹಿಂದೆಂದೂ ಕಾಣದಷ್ಟು ಕುಗ್ಗುತ್ತಿದೆ. ಇದರಿಂದ ಗ್ರಾಮೀಣ ಉದ್ಯೋಗ ಖಾತ್ರಿ ಕಾಮಗಾರಿಗೆ ಬೇಡಿಕೆ ಹೆಚ್ಚುತ್ತಿದೆ. ಈ ಸಂದರ್ಭದಲ್ಲಿ ಉದ್ಯೋಗ ಖಾತ್ರಿ ಕಾಯಿದೆ ಅನುಷ್ಠಾನಕ್ಕೆ ಅಪಾರ ಪ್ರಮಾಣದ ಹಣ ಮೀಸಲಿಡುವುದರ ಜತೆಗೆ ನಗರ ಪ್ರದೇಶಕ್ಕೂ ವಿಸ್ತರಿಸಿದರೆ, ಸಂಕಷ್ಟದಲ್ಲಿರುವ ಜನಸಾಮಾನ್ಯರಿಗೆ ಪರಿಹಾರ ಸಿಗುತ್ತಿತ್ತು. ಆದರೆ, ಮೋದಿ ಸರ್ಕಾರಕ್ಕೆ ಸಾಮಾನ್ಯ ಜನರ ಕಷ್ಟ, ಕಣ್ಣೀರಿನ ಬಗ್ಗೆ ಕಾಳಜಿ ಇಲ್ಲ.

ಆಧಾರ್ ಆಧಾರಿತ ಉದ್ಯೋಗ ಖಾತರಿ ಕೂಲಿ ಪಾವತಿ ವ್ಯವಸ್ಥೆಯ ಈ ಪ್ರಕ್ರಿಯೆಯು ಸುಗಮವಾಗಿ ನಡೆಯುವಂತೆ ಮಾಡಲು, ನಿರ್ಣಾಯಕ ಮೂಲಸೌಕರ್ಯದೊಂದಿಗೆ ಕ್ಷೇತ್ರ ಮಟ್ಟಕ್ಕೆ ಇಳಿದು ಕಾರ್ಯನಿರ್ವಹಿಸುವ ಅಧಿಕಾರಿಗಳ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿಲ್ಲ. ಇದರಿಂದ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಅನರ್ಹಕ್ಕೆ ಒಳಗಾಗುತ್ತಾರೆ. ಅಧಿಕೃತ ಅಂಕಿಅಂಶಗಳ ಪ್ರಕಾರ, ದೇಶಾದ್ಯಂತ 25.2 ಕೋಟಿ ಜನರು ಉದ್ಯೋಗ ಖಾತ್ರಿ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ ಸುಮಾರು 10 ಕೋಟಿ ಜನರನ್ನು ಕೇಂದ್ರ ಸರ್ಕಾರ ಅನರ್ಹರೆಂದು ಘೋಷಿಸಿದೆ. ವಾಸ್ತವವಾಗಿ, ಯುಪಿಎ ಸರ್ಕಾರದ ಅವಧಿಯಲ್ಲಿ ರಚಿಸಲಾದ ಉದ್ಯೋಗ ಖಾತ್ರಿ ಕಾಯ್ದೆಯ ಪ್ರಕಾರ, ಅರ್ಜಿ ಸಲ್ಲಿಸಿದ ಎಲ್ಲರಿಗೂ 100 ದಿನಗಳ ಕೆಲಸ ತೋರಿಸುವುದು ಸರ್ಕಾರದ ಜವಾಬ್ದಾರಿ. ಒಬ್ಬರನ್ನೂ ಅನರ್ಹಗೊಳಿಸಲು ಅವಕಾಶವಿಲ್ಲ.

ಆದರೆ, ಕೆಲಸ ಕೇಳಿ ಬರುವ ಕೂಲಿ ಕಾರ್ಮಿಕರಿಗೆ ವಿವಿಧ ನಿಬಂಧನೆಗಳನ್ನು ಸೇರಿಸಲಾಯಿತು. ವಿವಿಧ ಕಾರಣಗಳನ್ನು ನೀಡಿ ಉದ್ಯೋಗ ಪಡೆಯುವದರಿಂದ ಹಲವರನ್ನು ಅನರ್ಹಗೊಳಿಸಲಾಯಿತು. ಅವರು ಅರ್ಹರೆಂದು ಕಂಡುಬಂದರೆ ಇತರರಿಗೆ ಉದ್ಯೋಗ ನೀಡುತ್ತಿದ್ದಾರೆ ಎಂದರ್ಥವಲ್ಲ. ಕೇಂದ್ರ ಸರ್ಕಾರವು ಅರ್ಹರೆಂದು ಘೋಷಿಸಿದ 14.35 ಕೋಟಿ ಜನರಲ್ಲಿ ಸುಮಾರು 12.7 ಶೇಕಡಾ (ಸುಮಾರು 1.80 ಕೋಟಿ) ಜನರು ತಮ್ಮ ಬ್ಯಾಂಕ್ ಖಾತೆಗಳನ್ನು ಆಧಾರ್‌ನೊಂದಿಗೆ ಲಿಂಕ್ ಮಾಡಿಲ್ಲ. ಹಾಗಾಗಿ ಹೊಸ ವ್ಯವಸ್ಥೆಯಲ್ಲಿ ಅವರನ್ನೂ ಅನರ್ಹರೆಂದು ಪರಿಗಣಿಸಲಾಗಿದೆ! ಅವರಿಗೆ ಕೆಲಸದ ಕಾಮಗಾರಿ ತೋರಿಸುವ ಹೊಣೆಗಾರಿಕೆಯಿಂದ ಕೇಂದ್ರ ಸರ್ಕಾರ ನುಣುಚಿಕೊಳ್ಳಲಿದೆ. ಇವರ ಬದುಕು ಹೇಗಿದೆ ಎಂಬ ಪ್ರಶ್ನೆಗೆ ಉತ್ತರ ನೀಡಲು ಕೇಂದ್ರ ಸರ್ಕಾರ ಸಿದ್ಧವಿಲ್ಲ. ಬಡವರ ಮೇಲೆ ದಾಳಿ ನಡೆಸಿ ಅವರ ಜೀವನೋಪಾಯವನ್ನು ಕಸಿದುಕೊಳ್ಳಲು ಮೋದಿ ಸರ್ಕಾರ ಹೊಸ ತಂತ್ರಜ್ಞಾನವನ್ನು ಬಳಸುತ್ತಿದೆ. ಹೊಸ ತಂತ್ರಜ್ಞಾನವನ್ನು ಮನುಷ್ಯರ ಬದುಕನ್ನು ಉತ್ತಮಗೊಳಿಸು ಬಳಕೆ ಮಾಡಿಕೊಳ್ಳಬೇಕೇ ವಿನಃ ಅವರ ಉದ್ಯೋಗವನ್ನು ಕಸಿದುಕೊಳ್ಳಲು ಬಳಕೆಯಾಗಬಾರದು. ಉದ್ಯೋಗ ಖಾತ್ರಿಗೆ ಆಧಾರ್ ಲಿಂಕ್ ಮಾಡುವುದನ್ನು ಕೂಡಲೇ ಹಿಂಪಡೆಯಬೇಕು. ಇದಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಎಲ್ಲರೂ ಸಿದ್ಧರಾಗಬೇಕು.

'ಕ್ರಿಮಿನಲ್'ಗಳು ಪವಿತ್ರ ಆಗುವ ಮಂತ್ರದಂಡ!?

ಈ ವಾರ

ಎಸ್.ವೈ.ಗುರುಶಾಂತ್

'ನನ್ನನ್ನು ಬಂಧಿಸಿ, ನಾನು ಕರಸೇವಕ ನಾನು ರಾಮ ಭಕ್ತ'

ಅರೇ! ಇದೇನಿದು? ಕೈಯ್ಯಲ್ಲಿ ಹೀಗೆ ಬರೆದುಕೊಂಡ ಬೋರ್ಡ್ ಗಳನ್ನು ಹಿಡಿದು ಪೊಲೀಸ್ ಸ್ಟೇಷನ್ ಗಳ ಮುಂದೆ ಬಿ.ಜೆ.ಪಿ. ನಾಯಕರು, ಶಾಸಕರುಗಳು ಕುಳಿತೇ ಬಿಟ್ಟಿದ್ದಾರೆ! ಮಾಜಿ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ಅಧಿಕೃತ ನಾಯಕರು, ಪಕ್ಷಾಧ್ಯಕ್ಷರು, ಕೇಂದ್ರ ಸಚಿವರು, ಶಾಸಕರು, ಹೀಗೆ ಸಾಲು ಸಾಲಾಗಿ ದಶ ದಿಕ್ಕುಗಳಿಂದಲೂ ಘರ್ಜಿಸುತ್ತಿದ್ದಾರೆ! ಹೀಗೆ ಡಿಮಾಂಡ್ ಮಾಡಿಕೊಂಡು ಜೈಲು ಸೇರಿದರೆ ರಾಮನ ಪ್ರಾಣ ಪ್ರತಿಷ್ಠೆಗೆ ಯಾರು ಹೋಗ ಬೇಕು? ಅಂದರೆ ಅಲ್ಲಿಗೆ ಹೋಗದೇ ಕೃಷ್ಣನ ಜನ್ಮ ಸ್ಥಾನ ಸೇರುವ ಬಯಕೆ ಇವರಿಗ್ಯಾಕೆ ಬಂತು!? ಇದೇನು ಕೃಷ್ಣ ಜನ್ಮಭೂಮಿ ವಿಮೋಚನಾ ಸಮರವೋ? ಎಂದು ಪ್ರಶ್ನೆಗಳು ಎದ್ದರೆ ತಪ್ಪು ಅವರದ್ದಲ್ಲ!

ಅದೇನಿದ್ದರೂ ಕಾಂಗ್ರೆಸ್ ನವರದ್ದು! ಯಾಕೆಂದರೆ ಹಳೇ ಕೇಸ್‌ಗಳನ್ನು ಇತ್ಯರ್ಥ ಮಾಡುವ ಹೆಸರಿನಲ್ಲಿ ಕೆಲವು 'ರಾಮಭಕ್ತ'ರನ್ನು ಹಳೇ ಕೇಸ್ ಗಳಲ್ಲಿ ಜೈಲಿಗೆ ಕಳಿಸುತ್ತಿದ್ದಾರಂತೆ!

ಇದನ್ನು ಪ್ರತಿಭಟಿಸಿ ಸಿ.ಟಿ.ರವಿ, ಬಿ.ವೈ.ವಿಜಯೇಂದ್ರ, ಸುನೀಲ್ ಕುಮಾರ ರಂಥವರು ನಮ್ಮನ್ನು ಬಂಧಿಸಿ ಎಂದು ಕುಂತಿದ್ದಾರೆ. ಹೌದು! ಇವರು ನಿಜಕ್ಕೂ ಬಂಧನಕ್ಕೆ ಒಳಗಾಗಬೇಕಾದವರೇ. ಸುನೀಲ್‌ಕುಮಾರ್ ಪರಶುರಾಮನ ಪುಥ್ಥಳಿ ಹಗರಣದಲ್ಲಿ ವಂಚನೆಯ ಆರೋಪ ಎದುರಿಸುತ್ತಿದ್ದಾರೆ. ವಿಜಯೇಂದ್ರ ರವರು ಚೆಕ್ ಮೂಲಕ ಲಂಚ ಪಡೆದ ಆರೋಪ ಎದುರಿಸಿದ್ದಾರೆ. ಸಿ.ಟಿ.ರವಿಯವರ ಮೇಲೂ ಕ್ರಿಮಿನಲ್ ಆರೋಪಗಳಿವೆ. ಅಲ್ಲಿ ಸಿಟಿ ರವಿ, ಲೂಟಿ ರವಿ ಎಂಬ ಗಾದೆಯೇ ಹುಟ್ಟಿಕೊಂಡಿದೆ! ಈ ಮೂವರಲ್ಲದೇ ಹಲವಾರು ಬಿ.ಜೆ.ಪಿ ನಾಯಕರು ಇಂತಹುದೇ ಆರೋಪಗಳಲ್ಲಿದ್ದಾರೆ. ಈಗ ಬಿಜೆಪಿ ಇಡೀ ರಾಜ್ಯದಲ್ಲಿ 'ನನ್ನನ್ನು ಬಂಧಿಸಿ' ಎಂಬ 'ಸುರಕ್ಷಾ' ಅಭಿಯಾನವನ್ನು ಬಿಜೆಪಿ ನಡೆಸುತ್ತಿದೆ!!



ಈ ಅಭಿಯಾನಕ್ಕೆ ಪ್ರೇರಣೆ ಎಂದರೆ ಹುಬ್ಬಳ್ಳಿಯಲ್ಲಿ ಶ್ರೀಕಾಂತ ಪೂಜಾರಿ ಎನ್ನುವ ವ್ಯಕ್ತಿಯನ್ನು ಬಂಧಿಸಲಾಗಿರುವುದು. ಬಿಜೆಪಿ ಪ್ರಕಾರ ಆತ ರಾಮ ಭಕ್ತನಾಗಿರುವುದೇ ಇದಕ್ಕೆ ಕಾರಣವಂತೆ. ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಉರುಳಿಸಿ ರಾಮ ಮಂದಿರ ಕಟ್ಟಬೇಕೆಂದು 'ಹೋರಾಡಿದ 'ಕರಸೇವಕ' ಆತ ರಾಮಭಕ್ತನಾಗಿರುವುದರಿಂದಲೇ ಕಾಂಗ್ರೆಸ್ ಸರಕಾರ ಬಂಧಿಸಿದೆ ಎನ್ನುವುದು ಬಿಜೆಪಿ ನಾಯಕರ ಆರೋಪ! ಹಾಗಾಗಿ ಆತನನ್ನು 48 ಗಂಟೆಯೊಳಗೆ ಬಿಡುಗಡೆ ಮಾಡಬೇಕು, ಇಲ್ಲದಿದ್ದರೆ ನೆಟ್ಟಗಿರುವುದಿಲ್ಲ ಎಂಬ ಧಮ್ಕಿ ಬೇರೆ. ಅದಕ್ಕಾಗಿ ಪ್ರತಿಭಟನೆ!

ಹಾಗೇ ನೋಡಿದರೆ ಹುಬ್ಬಳ್ಳಿಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಶ್ರೀಕಾಂತ ಪೂಜಾರಿ ಎನ್ನುವವನ ಮೇಲೆ 16 ಕ್ರಿಮಿನಲ್ ಮೊಕದ್ದಮೆಗಳಿವೆ ಎನ್ನುವುದು ಇದೀಗ ಬಹಿರಂಗವಾಗಿದೆ. 1992 ರಲ್ಲಿ ಬಾಬ್ರಿಮಸೀದಿ ಧ್ವಂಸದ ಸುಮಾರಿನಲ್ಲಿ ಡಿಸೆಂಬರ್ 5 ರಂದು ಹಳೆ ಹುಬ್ಬಳ್ಳಿಯ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತ ವ್ಯಕ್ತಿಯೊಬ್ಬರ ಅಂಗಡಿಗೆ ಬೆಂಕಿ ಹಚ್ಚಿದ ಪ್ರಕರಣವೂ ಒಂದು. ಅದೇ ರೀತಿ 2001 ಮತ್ತು 2014 ರಲ್ಲಿ ದೊಂಬಿ ನಡೆಸಿದ ಪ್ರಕರಣಗಳೂ ಇವೆ. ಅಕ್ರಮ ಮದ್ಯ ಮಾರಾಟದ ಹಲವು ಕೇಸ್ ಗಳು 1998 ರಿಂದ 2013 ರವರೆಗೂ, ದೊಂಬಿ ಪ್ರಕರಣಗಳು 1992– 2014 ರ ನಡುವೆಯೂ, ಮಟ್ಕಾ ಜೂಜಾಟದ ಕ್ರಿಮಿನಲ್ ಪ್ರಕರಣ 2014 ರಲ್ಲಿಯೂ ದಾಖಲಾಗಿದೆ. ಕೆಲವು ಪ್ರಕರಣಗಳಲ್ಲಿ ಜಾಮೀನು ಬಾಂಡ್ ಗಳ ಮೇಲೆ ಇದ್ದರೆ ಕೆಲವಕ್ಕೆ ನ್ಯಾಯಾಲಯವು ನೀಡಿದೆ. ಈಗಲೂ ಬಂಧನದ ಆದೇಶ ಹೊರಡಿಸಿರುವುದು ಸರ್ಕಾರದ ಪೊಲೀಸರಲ್ಲ, ಬದಲಾಗಿ ನ್ಯಾಯಾಲಯ. ಈತನೊಟ್ಟಿಗೆ ಕೋರ್ಟಿಗೆ ಹಾಜರಾಗಿದ್ದ ಸುಮಾರು 32 ಜನರಲ್ಲಿ ಬಹುತೇಕರಿಗೆ ಜಾಮೀನು ಸಿಕ್ಕಿದೆ. ಆದರೆ ಈ ಪೂಜಾರಿಯ ಮೇಲಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ಅನುಸರಿಸಿ ಬಂಧನಕ್ಕೆ ಆದೇಶ ನೀಡಿದೆ.



ವಿಚಿತ್ರವೆಂದರೆ, ಬಿಜೆಪಿ ನಾಯಕರ ರಾಜ್ಯದಾದ್ಯಂತ ಹಾರಾಟ–ಹೋರಾಟಕ್ಕೆ ಕಾರಣ ಈ ಕ್ರಿಮಿನಲ್ ಆರೋಪಿ ರಾಮಭಕ್ತನಾಗಿರುವುದರಿಂದ ಬಿಡುಗಡೆ ಮಾಡಬೇಕು ಎಂಬುದು, ಹೇಗಿದೆ ತರ್ಕ!? ಇವರ ನ್ಯಾಯಶಾಸ್ತ್ರದಂತೆ ಹೋದರೆ ರಾಮನ ಭಕ್ತರಾದರೆ ಸಾಕು, ಮಟ್ಕಾ ಜೂಜಾಟ, ಅಕ್ರಮ ಮದ್ಯ ವ್ಯಾಪಾರ, ಕಳ್ಳ ಸಾಗಾಣಿಕೆ ಮಾಡುತ್ತಿದ್ದರೂ, ಕರಸೇವೆಯಂತಹ ಕಾನೂನು ಬಾಹಿರ ಕೃತ್ಯಗಳನ್ನು ಎಸಗಿದ್ದರೂ ಅವರು ಮುಕ್ತರು! ಲೋಕ ಮಾನ್ಯರು! ಬಹುತೇಕ ಇಂತಹ ಕ್ರಿಮಿನಲ್ ಗಳಿಗೆ 'ಹಿಂದೂ' ಐಡೆಂಟಿಟಿ ಕೊಟ್ಟು ಸಂರಕ್ಷಣೆ ಮಾಡುವುದರಲ್ಲಿ ಇವರಿಗೆ ಬೇರಾರೂ ಸಾಟಿ ಇಲ್ಲ.

ಇದೇ ಹೊತ್ತಿನಲ್ಲಿ ಹೊರ ಬಂದ ಇನ್ನೊಂದು ವಿಷಯಯವೆಂದರೆ ಪುಟ 4 ಕ್ಕೆ

ಅಯೋಧ್ಯೆಯಲ್ಲಿ ರಾಮ ಮಂದಿರ ಉದ್ಘಾಟನೆ: ರಾಜಕೀಯ ಕಾರ್ಯಕ್ರಮನ್ನಾಗಿಸಿರುವ ಬಿಜೆಪಿ..... ಪುಟ 2 ರಿಂದ

ಅವರು ರಾಮ ಮಂದಿರದ ಹೆಸರಿನಲ್ಲಿ ರಾಷ್ಟ್ರವ್ಯಾಪಿ ರಥಯಾತ್ರೆ ನಡೆಸಿದರು. ಈ ರಥಯಾತ್ರೆ ಉತ್ತರ ಭಾರತದಲ್ಲಿ ರಕ್ತಪಾತವನ್ನು ಉಂಟುಮಾಡಿತು. ಈ ಸಂಪೂರ್ಣ ಅಭಿಯಾನದಲ್ಲಿ ಎಷ್ಟು ಮಂದಿಯ ರಕ್ತ ಬೀದಿಗಳಲ್ಲಿ ಹರಿಯಿತು ಎಂದು ಇಲ್ಲಿಯವರೆಗೆ ಲೆಕ್ಕ ಹಾಕಲಾಗಿಲ್ಲ. ಆ ನಂತರ ಲೋಕಸಭೆಯಲ್ಲಿ ಬಿಜೆಪಿಯ ಬಲ ಎರಡು ಸ್ಥಾನಗಳಿಂದ 80 ಸ್ಥಾನಗಳಿಗೆ ಏರಿತು. ರಾಜಕೀಯದಲ್ಲಿ ಧರ್ಮವನ್ನು ಬೆರಿಸಿ ಬಿಜೆಪಿ ಅಂದು ರಾಜಕೀಯ ಲಾಭ ಗಳಿಸಿತು. 2014ರಲ್ಲಿ ಕಾಂಗ್ರೆಸಿನ ವಿಫಲತೆ ಅದಕ್ಕೆ ಚುನಾವಣೆ ಗೆಲ್ಲಲು ಸಾಕಾಯಿತು.ಇದೀಗ ಲೋಕಸಭೆ ಚುನಾವಣೆ ಗೆಲ್ಲಲು ಈ 'ಧಾರ್ಮಿಕ' ಹೊದಿಕೆ ಬೇಕಾಗಿದೆ.

ದೇವಾಲಯ ಕೆಡವಿ ಮಸೀದಿ ನಿರ್ಮಾಣ ಪುರಾವೆಗಳಿಲ್ಲ

ಸುಪ್ರೀಂ ಕೋರ್ಟ್ ಪೀಠವು ಸ್ವತಃ ತೀರ್ಮಾನಿಸಿದ್ದು ಹೀಗೆ: (1) ಬಾಬರಿ ಮಸೀದಿಯು ಆ ಸ್ಥಳದಲ್ಲಿ 500 ವರ್ಷಗಳಿಗೂ ಹೆಚ್ಚು ಕಾಲ ನಿಂತಿದೆ, (2) ಯಾವುದೇ ದೇವಾಲಯವನ್ನು ಕೆಡವಿ ಮಸೀದಿಯನ್ನು ನಿರ್ಮಿಸಲಾಗಿದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ ಮತ್ತು (3) ಮುಸ್ಲಿಮರು 1949 ರವರೆಗೆ ಅದರಲ್ಲಿ ಪೂಜಿಸುತ್ತಿದ್ದರು, ಹಿಂದೂ ದೇವರು ಮತ್ತು ದೇವತೆಗಳ ವಿಗ್ರಹಗಳನ್ನು ಅದರೊಳಗೆ ಕಳ್ಳಸಾಗಣೆ ಮಾಡಲಾಯಿತು. ಅದನ್ನು ಅಪರಾಧ ಎಂದು ಕರೆಯಲಾಯಿತು. ಡಿಸೆಂಬರ್ 6, 1992 ರಂದು ಮಸೀದಿಯನ್ನು ಧ್ವಂಸಗೊಳಿಸುವುದು ಘೋರ ಅಪರಾಧ ಎಂದು ನ್ಯಾಯಾಲಯವು ನಿಸ್ಸಂದಿಗ್ಧವಾಗಿ ಹೇಳಿದೆ. ಸುಪ್ರೀಂ ಕೋರ್ಟ್ ಪೀಠವು ಇದೆಲ್ಲವನ್ನು ಹೇಳಿದಾಗ, ಶತಮಾನಗಳಿಂದ ಇದ್ದ, ಕ್ರಿಮಿನಲ್ ಆಗಿ ಕೆಡವಲ್ಪಟ್ಟ ಮಸೀದಿಯ ಮರುನಿರ್ಮಾಣಕ್ಕೆ ಆದೇಶ ನೀಡುವುದು ತಾರ್ಕಿಕ ನಿರ್ಧಾರವಾಗಬೇಕಿತ್ತು. ಆದರೆ ಹಾಗಾಗಲಿಲ್ಲ. ಕೆಲವು ಹಿಂದೂಗಳು ವರ್ಷಗಳಿಂದ ಹಂಬಲದಿಂದ ನೋಡುತ್ತಿರುವುದರಿಂದ ಈ ಭೂಮಿಯನ್ನು ರಾಮಮಂದಿರ ನಿರ್ಮಿಸಲು ಅವರಿಗೆ ನೀಡಬೇಕು ಎಂದು ನ್ಯಾಯಾಲಯ ನಿರ್ಧರಿಸಿತು.

ನ್ಯಾಯಾಲಯದ ಆಳವಾದ ದೋಷಪೂರಿತ ಕಾನೂನು ತರ್ಕವನ್ನು ಬಿಟ್ಟು, ಅಪರಾಧ, ಹೇಡಿತನ ಮತ್ತು ಕುತಂತ್ರದ ಮೂಲಕ ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಯಾವುದೇ ಪವಿತ್ರ ಭಾವನೆ ನಿಜವಾಗಿಯೂ ಉದ್ಭವಿಸಬಹುದೇ ಎಂದು ಪ್ರಶ್ನಿಸುವುದು ಯೋಗ್ಯವಾಗಿದೆ. ಜನವರಿ 22, 2024 ರಂದು ಉದ್ಘಾಟನೆಗೊಳ್ಳಲಿರುವ ರಾಮಮಂದಿರವು ಅದರ ನಿರ್ಮಾಣಕ್ಕೆ ಕಾರಣವಾದ ದುಷ್ಟ ಮಾನವ ಕೃತ್ಯಗಳ ಸ್ಮರಣೆಯಿಂದ ಮುಕ್ತವಾಗುವುದು ಸಾಧ್ಯವೇ? ಅದು ಭಕ್ತರಿಗೆ ಆಧ್ಯಾತ್ಮಿಕ ಶಾಂತಿಯನ್ನು ನೀಡುವ ಸ್ಥಳವಾಗಲು ಸಾಧ್ಯವೇ? ಅದು ಬಹುಶಃ ಈ ಆಂದೋಲನ ನಡೆಸಿದವರ ಆಶಯವೂ ಆಗಿರಲಿಲ್ಲ.

ಧಾರ್ಮಿಕವೂ ಅಲ್ಲ, ಆಧ್ಯಾತ್ಮಿಕವೂ ಅಲ್ಲ

ಈ ರಾಮಮಂದಿರ ನಿರ್ಮಾಣದ ಉದ್ದೇಶ ಧಾರ್ಮಿಕವೂ ಅಲ್ಲ, ಆಧ್ಯಾತ್ಮಿಕವೂ ಅಲ್ಲ ಎಂಬುದೀಗ ಸ್ಪಷ್ಟವಾಗಿ ಕಾಣುತ್ತದೆ. ರಾಮಮಂದಿರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಇತ್ತೀಚಿನ ಟಿಪ್ಪಣಿಗಳಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ. ಜನವರಿ 22 ರ ದಿನಾಂಕವು ಆಗಸ್ಟ್ 15, 1947 ರ ದಿನಾಂಕದಷ್ಟೇ ಮಹತ್ವದ್ದಾಗಿದೆ ಎಂದು ಚಂಪತ್ ರಾಯ್ ಹೇಳಿದರು. "1971 ರಲ್ಲಿ ಸುಮಾರು ಒಂದು ಲಕ್ಷ ಪಾಕಿಸ್ತಾನಿ ಸೈನಿಕರು ನಮ್ಮ ಸೇನೆಯ ಮುಂದೆ ಶರಣಾದ ದಿನದಂತೆ ಈ ದಿನವೂ ಮುಖ್ಯವಾಗಿದೆ ಎಂದರು. ಈ ದಿನವು 1999 ರಲ್ಲಿ ನಮ್ಮ ದೇಶವು ಕಾರ್ಗಿಲ್ ಮೇಲಿನ ಹಕ್ಕನ್ನು ಮರುಪಡೆದುಕೊಂಡ ದಿನಕ್ಕೆ ಸಮನಾಗಿದೆ ಎಂದು ರಾಯ್ ಹೇಳಿದರು. ಇವರ ಈ ಮಾತುಗಳೇ ಇದರ ರಾಜಕೀಯ ಉದ್ದೇಶಗಳು ಏನೆಂಬುದನ್ನು ತಿಳಿಸುತ್ತವೆ.

ಭಾರತೀಯರನ್ನು ಧಾರ್ಮಿಕ ನೆಲೆಯಲ್ಲಿ ಒಡೆದು ಆಳಲು ಬ್ರಿಟಿಷ್ ಆಡಳಿತಗಾರರು ಹೊತ್ತಿಸಿದ ಕೋಮುದ್ವೇಷದ ಜ್ವಾಲೆ ಇನ್ನೂ ಉರಿಯುತ್ತಿದೆ. ಅನೇಕ ಭಾರತೀಯರು ಆ ಬೆಂಕಿಯಲ್ಲಿ ಪ್ರಾಣ ಕಳೆದುಕೊಂಡರು. ಇಂದಿಗೂ ಪ್ರಾಣ ಕಳೆದುಕೊಳ್ಳುತ್ತಲೇ ಇದ್ದಾರೆ. ಆದರೆ, ಆ ಬೆಂಕಿ ಆರಿಸದೆ ಮತೀಯ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಅದರ ಜ್ವಾಲೆಯನ್ನು ಏರಿಸುತ್ತಲೇ ಇವೆ. ಮುಸ್ಲಿಮರ ಮೇಲೆ, ಕ್ರಿಶ್ಚಿಯನ್ನರ ಮೇಲೆ, ಜಾತ್ಯತೀತ ಪ್ರಜಾಪ್ರಭುತ್ವವಾದಿಗಳ ಮೇಲೆ ದಾಳಿಗಳು ನಡೆಯುತ್ತಿವೆ. ಅವು ದೈಹಿಕ ದಾಳಿಯಾಗಿರಬಹುದು ಅಥವಾ ಡೀಪ್‌ಫೇಕ್ ದಾಳಿಗಳೇ ಇರಬಹುದು. ಮುಸ್ಲಿಂ ಮೂಲಭೂತವಾದಿ ಪಕ್ಷಗಳು ಮತ್ತು ಸಂಘಟನೆಗಳೂ ಅದನ್ನೇ ಮಾಡುತ್ತಿವೆ. ಇಂತಹ ಮತೀಯ ರಾಜಕೀಯ ಪಕ್ಷಗಳ ತಂತ್ರ, ಕುತಂತ್ರಗಳಿಗೆ ಬೀಳದಂತೆ ಜನತೆ ಎಚ್ಚರವಹಿಸಬೇಕಿದೆ.



ರಾಮಮಂದಿರ ಸೈಟಿನಲ್ಲಿ...
"ನಮಗೆ ಉದ್ಘಾಟನೆಗೆ ಆಹ್ವಾನ ಇದೆಯೇ?"
ವ್ಯಂಗ್ಯಚಿತ್ರ: ಪೊನ್ನಪ್ಪ, ದಿ ಫೆಡರಲ್, ಕಾಂ

ನರೇಗಾ ಯೋಜನೆಯಲ್ಲಿ ಆಧಾರ್ ಕಡ್ಡಾಯ; ಕೃಷಿ ಕಾರ್ಮಿಕರ ಸಂಘದ ಖಂಡನೆ: ಪ್ರತಿಭಟನೆಯ ಕಾರ್ಯಗಳನ್ನು ಹಮ್ಮಿಕೊಳ್ಳಲು ಕರೆ

ಕಡ್ಡಾಯವಾಗಿ ಆಧಾರ್ ಪಾವತಿ ವ್ಯವಸ್ಥೆ (ಎಬಿಪಿಎಸ್) ಹೇರುವ ಮೂಲಕ ನರೇಗಾ (MGNREGA) ಅಡಿಯಲ್ಲಿ ಕೆಲಸ ಮಾಡುವ ಹಕ್ಕಿನ ಮೇಲಿನ ದಾಳಿ ಎಂದಿರುವ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯು, ಇದನ್ನು ತಕ್ಷಣವೇ ನಿಲ್ಲಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಎಬಿಪಿಎಸ್ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರವು ಡೇಟಾಬೇಸ್ ಅನ್ನು ನವೀಕರಿಸುವ ಗಡುವು ಡಿಸೆಂಬರ್ 31, 2023, ಕೊನೆಗೊಂಡಿತು. ಮತ್ತು ಕೇಂದ್ರ ಸರ್ಕಾರವು ದಿನಾಂಕವನ್ನು ಮತ್ತಷ್ಟು ವಿಸ್ತರಿಸಿಲ್ಲ. ಇದರಿಂದ ನರೇಗಾ ಅಡಿಯಲ್ಲಿ ನೊಂದಾಯಿಸಲಾದ ಕೋಟಿಗಟ್ಟಲೆ ಕಾರ್ಮಿಕರಿಗೆ ಕೆಲಸ ಮಾಡುವ ಹಕ್ಕನ್ನು ನಿರಾಕರಿಸಿದಂತಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರವು ಮೊದಲು ಎಬಿಪಿಎಸ್ ಅನ್ನು ಜನವರಿ 30, 2023 ರಂದು ವಿಧಿಸಿತು. ಈ ವ್ಯವಸ್ಥೆಗೆ ನರೇಗಾ ಕಾರ್ಯಕರ್ತರು ಮತ್ತು ಅವರ ಸಂಘಟನೆಗಳಿಂದ ಪ್ರತಿರೋಧವಿತ್ತು. ಆದರೆ, ಸರ್ಕಾರವು ತನ್ನ ನಿರ್ಧಾರಗಳನ್ನು ಮುಂದುವರಿಸಿತು. ವರ್ಷವಿಡೀ ವಿಸ್ತರಣೆಗಳನ್ನು ನೀಡಲಾಯಿತು. ಆದರೆ, ಕೋಟಿಗಟ್ಟಲೆ ಕಾರ್ಮಿಕರು ಇನ್ನೂ ಎಬಿಪಿಎಸ್ ಗೆ ಅನರ್ಹರಾಗಿದ್ದಾರೆ. ಕೇಂದ್ರ ಸರ್ಕಾರದ ಇಂತಹ ಕ್ರಮ ಖಂಡನೀಯ ಎಂದು ಕೃಷಿ ಕಾರ್ಮಿಕರ ಸಂಘ ಹೇಳಿದೆ.

ನಿಷ್ಕ್ರಿಯ ಜಾಬ್ ಕಾರ್ಡ್ ಹೊಂದಿರುವವರನ್ನು ಅನರ್ಹರೆಂದು ಕೇಂದ್ರ ಸರ್ಕಾರ ಪರಿಗಣಿಸುತ್ತಿದೆ ಎಂದು ವಿವಿಧ ಮಾಧ್ಯಮಗಳು ಸೂಚಿಸುತ್ತವೆ. ನರೇಗಾ ಅಡಿಯಲ್ಲಿ 25.25 ಕೋಟಿ ನೊಂದಾಯಿತ ಕಾರ್ಮಿಕರಲ್ಲಿ 14.35 ಕೋಟಿ ಸಕ್ರಿಯ ಕಾರ್ಮಿಕರು ಎಂದು ವರ್ಗೀಕರಿಲಾಯಿತು. ಅನರ್ಹರನ್ನು ಘೋಷಿಸುವುದು ಭಾರತದ ಸಂಸತ್ತು ಅಂಗೀಕರಿಸಿದ ನರೇಗಾ ಕಾಯಿದೆಯಲ್ಲಿ ಪ್ರತಿಪಾದಿಸಿರುವ ಕಾರ್ಮಿಕರ ಹಕ್ಕುಗಳಿಗೆ ವಿರುದ್ಧವಾಗಿದೆ. ಸಕ್ರಿಯ ಕೆಲಸಗಾರರಲ್ಲಿ 12.7 ಶೇ. ಜನರು ಇನ್ನೂ ಎಬಿಪಿಎಸ್ ಗೆ ಅರ್ಹರಾಗಿಲ್ಲ.

ಕೇಂದ್ರದಿಂದ ಎಬಿಪಿಎಸ್ ಜಾರಿಗೊಳಿಸಲು ಮತ್ತು ಶೇ. 100 ರಷ್ಟು ಗುರಿ ಸಾಧಿಸಲು ರಾಜ್ಯಗಳ ಮೇಲೆ ಒತ್ತಡ ತರಲಾಗುತ್ತಿದೆ. ಆಧಾರ್ ಪಾವತಿಗೆ ಅರ್ಹರಲ್ಲದ ಕೋಟಿಗಟ್ಟಲೆ ಕಾರ್ಡ್ ಗಳನ್ನು (7.6 ಕೋಟಿ ಕಾರ್ಮಿಕರು) ರಾಜ್ಯಗಳು ಅಳಿಸಿಹಾಕಿವೆ ಎಂದು ಭೂ ವರದಿಗಳು ಬಹಿರಂಗಪಡಿಸಿವೆ. ಜೀವನೋಪಾಯ ಮತ್ತು ಗ್ರಾಮೀಣ ಆರ್ಥಿಕತೆಗೆ ತನ್ನ ಮೌಲ್ಯವನ್ನು ಸಾಬೀತುಪಡಿಸಿರುವ ನರೇಗಾ ಮೂಲ ಸ್ವರೂಪದ ವಿರುದ್ಧ ಮೋದಿ ಸರ್ಕಾರ ನಿರಂತರವಾಗಿ ಕೆಲಸ ಮಾಡುತ್ತಿದೆ. ಈ ಯೋಜನೆಯು ಗ್ರಾಮೀಣ ಜನತೆಯ ಬಡ ಮತ್ತು ತುಳಿತಕ್ಕೊಳಗಾದ ವರ್ಗಗಳಿಗೆ ಬದುಕಲು ಸಹಾಯ ಮಾಡಿದೆ. ಅದೇ ಸಮಯದಲ್ಲಿ ಕೃಷಿ ಕಾರ್ಮಿಕರ ಮತ್ತು ಗ್ರಾಮೀಣ ಕಾರ್ಮಿಕರ ಸಾಮಾನ್ಯ ವೇತನಗಳು ಕುಸಿಯುವಂತೆ ತಡೆಯುತ್ತದೆ ಮತ್ತು ಹೆಚ್ಚಿನ ಪ್ರದೇಶಗಳಲ್ಲಿ ವೇತನವು ಸ್ಥಿರವಾಗಿದೆ ಅಥವಾ ಹಣದ ವಿಷಯದಲ್ಲಿ ಹೆಚ್ಚಳವನ್ನು ತೋರಿಸಿದೆ ಎಂದು ಹೇಳಿರುವ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯು, ಗ್ರಾಮೀಣ ಭಾರತದಲ್ಲಿನ ಕೆಲಸದ ಹಕ್ಕಿನ ಮೇಲಿನ ಕೇಂದ್ರ ಸರ್ಕಾರದ ದಾಳಿಯನ್ನು ವಿರೋಧಿಸಿ ಮತ್ತು ಎಬಿಪಿಎಸ್ ಗೆ ಸಂಪರ್ಕವನ್ನು ಹಿಂಪಡೆಯಲು ಒತ್ತಾಯಿಸಿ, ಪ್ರತಿಭಟನೆಯ ಕಾರ್ಯಗಳನ್ನು ಹಮ್ಮಿಕೊಳ್ಳಲು ತನ್ನ ಘಟಕಗಳಿಗೆ ಕರೆ ನೀಡಿದೆ.

'ಕ್ರಿಮಿನಲ್'ಗಳು ಪವಿತ್ರ ಆಗುವ ಮಂತ್ರದಂಡ....... ಪುಟ 3 ರಿಂದ

ಬಿ.ಜೆ.ಪಿಯು ಕುಮಾರಸ್ವಾಮಿಯವರ ಸಮಿಶ್ರ ಸರ್ಕಾರವನ್ನು ಉರುಳಿಸಿ ಅಕ್ರಮ ಮಾರ್ಗದಿಂದ ಅಧಿಕಾರ ಹಿಡಿದ ನಂತರ ಯಡ್ಯೂರಪ್ಪನವರ ಆರಂಭದ ಅವಧಿಯಲ್ಲೇ ಶ್ರೀಕಾಂತ ಪೂಜಾರಿಯಂತಹ ಹಾಗೂ ಕಾನೂನು ಬಾಹೀರ ಕೃತ್ಯಗಳ ಸಾವಿರಾರು ಕೇಸ್ ಗಳನ್ನು ಹಿಂಪಡೆದಿರುವುದು. ಅಂದರೆ ಯಾವುದೇ ನ್ಯಾಯಾಲಯದ ವಿಚಾರಣೆ-ಕಾನೂನು ಪ್ರಕ್ರಿಯೆಗಳು ಪೂರ್ಣಗೊಳ್ಳದೇ ಸರ್ಕಾರದ ಅಧಿಕಾರ ಬಳಸಿ ಖುಲಾಸೆ ಮಾಡಿ ಕೇಸ್ ಗಳನ್ನು ಕ್ಲೋಸ್ ಮಾಡಿರುವುದು.

ಇತ್ತೀಚೆಗೆ ಕರ್ನಾಟಕ ಸರ್ಕಾರ ಹಲವಾರು ದಶಕಗಳಿಂದ ನೆನಗುದಿಗೆ ಬಿದ್ದಿರುವ ಪೊಲೀಸ್ ಕೇಸ್ ಗಳನ್ನು ವಿಲೇವಾರಿ ಮಾಡಬೇಕೆಂದು ಕ್ರಮ ವಹಿಸಿರುವಾಗ ಇವೆಲ್ಲಾ ಕಾನೂನು ಜಾರಿ ಪ್ರಕ್ರಿಯೆಗೆ ಒಳಗಾಗಿವೆ. ಇದನ್ನೇ ಬಿಜೆಪಿ ರಾಮಂದಿರದಲ್ಲಿ ರಾಮಲಲ್ಲಾನ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆಯ ಪ್ರಸಂಗವನ್ನೂ ಪೂರ್ತಿಯಾಗಿ ತನ್ನ ಸಂಕುಚಿತ ರಾಜಕೀಯ ಹಿತಾಸಕ್ತಿಗೆ ಬಳಸಲು ಮುಂದಾಗಿದೆ. ಇದು ದೇವರನ್ನೂ, ಧರ್ಮವನ್ನೂ ದುರ್ಬಳಕೆ ಮಾಡಿಕೊಳ್ಳಲು ಎಳ್ಳಷ್ಟೂ ಹೇಸದ ಅದರ ಸರ್ವ ರೀತಿಯ ದಿವಾಳಿತನಕ್ಕೆ ಸಾಕ್ಷಿ. ಕ್ರಿಮಿನಲ್ ಕೃತ್ಯಗಳನ್ನು ವಿರೋಧಿಸಿದರೆ ಹಿಂದೂ ವಿರೋಧಿಗಳು ಎಂದು ಬ್ರಾಂಡ್ ಮಾಡುವುದು ಅದರ ಎಂದಿನ ಬಿಡದ ಚಾಳಿ.

ಇನ್ನೂ ವಿಶೇಷವೆಂದರೆ, ವಿರೋಧ ಪಕ್ಷದ ನಾಯಕರು ಪೊಲೀಸ್ ಠಾಣೆ ಮುಂದೆ ಹೋಗಿ ತಾಕತ್ತಿದ್ದರೆ ತನ್ನನ್ನು ಬಂಧಿಸಿ ಎಂದು ವಿನಾಕಾರಣ ಆಹ್ವಾನ ನೀಡುತ್ತಿದ್ದುದು ಹಾಸ್ಯಾಸ್ಪದವಾಗಿದೆ. ಹುಬ್ಬಳ್ಳಿಯ ಆರೋಪಿಯನ್ನು ಬಂಧಿಸಲು ಸೋನಿಯಾ ಗಾಂಧಿ, ರಾಹುಲಗಾಂಧಿಗಳೇ ಸಿದ್ಧರಾಮಯ್ಯ ನವರಿಗೆ ಹೇಳಿದ್ದಾರಂತೆ! ಹೇಗಿದೆ ಗಲ್ಲಿಯ ಗಲೀಜು 'ರಾಜಕಾರಣ'!

ಈ ವಿರೋಧ ಪಕ್ಷದ ನಾಯಕರಿಗೆ ಜನರು ಎದುರಿಸುವ ಬರ, ಬೆಲೆ ಏರಿಕೆ, ಇತ್ಯಾದಿ ಹಲವು ಸಮಸ್ಯೆಗಳು ಕಾಣುವುದಿಲ್ಲ.

ಅಂತೂ ಇಂತಹ ಪ್ರಸಂಗಗಳನ್ನು ಬಳಸಿ ಬೇರೆಯವರು ಹಿಂದೂ ವಿರೋಧಿಗಳೆಂದೂ, ತಾವು ಮಾತ್ರ ರಾಮ ಭಕ್ತರು, ಹಿಂದೂಗಳ ಪರ ಎಂದು ಬಿಂಬಿಸಿಕೊಳ್ಳಲು ಬಿಜೆಪಿ-ಸಂಘಪರಿವಾರದ ನಾಯಕರು ಪರದಾಡುತ್ತಿರುವುದನ್ನು ಕಂಡು ಏನು ಹೇಳ ಬೇಕೋ!



ದೇಶದಲ್ಲಿ ಹೆಚ್ಚುತ್ತಿರುವ ಆದಾಯದ ಅಸಮಾನತೆಯು ಈ ಮಾರುಕಟ್ಟೆಯ ಏರಿಳಿತಕ್ಕೆ ಮುಖ್ಯ ಕಾರಣವಾಗಿದೆ. ದೇಶದ ಶೇಕಡ ಒಂದರಷ್ಟು ಶ್ರೀಮಂತರು ಲಕ್ಷ ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಶ್ರೀಮಂತರ ಸಂಪತ್ತು ಪ್ರತಿ ವರ್ಷ ಅತಿವೇಗವಾಗಿ ಹೆಚ್ಚುತ್ತಿದೆ. ದೇಶದಲ್ಲಿ ಶ್ರೀಮಂತ ಕುಟುಂಬಗಳು 2022–23ರಲ್ಲಿ 20 ಲಕ್ಷ ಕೋಟಿ ರೂ.ಗಳನ್ನು ವೈಯಕ್ತಿಕ ಸಂಪತ್ತನ್ನು ಗಳಿಸಿದ್ದಾರೆ ಎಂದು ತಜ್ಞರು ಹೇಳುತ್ತಾರೆ. ಅದರ ಸ್ವಲ್ಪಭಾಗವು ದೇಶೀಯ ಷೇರು ಮಾರುಕಟ್ಟೆಯನ್ನು ಪ್ರವೇಶಿಸಿದೆ. ಅದಕ್ಕಾಗಿಯೇ ಕಳೆದ ವರ್ಷ ದೇಶೀಯ ನಿಧಿಗಳಿಂದ 20 ಬಿಲಿಯನ್ ಡಾಲರ್ ಮತ್ತು 15 ಬಿಲಿಯನ್ ಡಾಲರ್ ವಿದೇಶಿ ಹೂಡಿಕೆಗಳು ನಮ್ಮ ದೇಶೀಯ ಷೇರು ಮಾರುಕಟ್ಟೆಗೆ ಬಂದಿವೆ.

ಷೇರು ಮಾರುಕಟ್ಟೆ ಗೂಳಿಗಳ ಓಟ: ದೇಶದ ಆರ್ಥಿಕತೆಯ ಪ್ರವೃತ್ತಿಯನ್ನು ಪ್ರತಿಬಿಂಬಿಸುತ್ತದೆಯೇ

ನಮ್ಮ ದೇಶೀಯ ಸೆನ್ಸೆಕ್ಸ್ ನಲ್ಲಿ ಸೂಚ್ಯಂಕ 72,000 ದಾಟಿರುವುದನ್ನು, ಇದು ಸರ್ಕಾರಕ್ಕೆ ಶ್ರೇಯಸ್ಸು ಎಂದು ಕೆಲವು ಪತ್ರಿಕೆಗಳು ಮತ್ತು ಸರ್ಕಾರದ ಪರ ಅರ್ಥಶಾಸ್ತ್ರಜ್ಞರು ಹೇಳತೊಡಗಿದ್ದಾರೆ. ಈ ವೇಗದಲ್ಲಿ ಸೂಚ್ಯಂಕ ಒಂದು ಲಕ್ಷ ದಾಟಿದರೂ ಆಶ್ಚರ್ಯವೇನೂ ಇಲ್ಲ ಎನ್ನುತ್ತಿದ್ದಾರೆ!! ಆಳವಾದ ನೋಟದಲ್ಲಿ, ಸೆನ್ಸೆಕ್ಸ್‌ನಲ್ಲಿರುವ 30 ಕಂಪನಿಗಳಲ್ಲಿ, ಆರು ಕಂಪನಿಗಳು ಸುಮಾರು 48 ಪ್ರತಿಶತದಷ್ಟು ಮೌಲ್ಯವನ್ನು ಹೊಂದಿವೆ. RIL, ITC, Infosys, ICICI Bank, HDFC ಈ ಷೇರುಗಳ ಬೆಲೆಗಳನ್ನು ಅವಲಂಬಿಸಿ ಸೆನ್ಸೆಕ್ಸ್ ಏರುತ್ತದೆ ಮತ್ತು ಇಳಿಯುತ್ತದೆ.

ಸೆನ್ಸೆಕ್ಸ್‌ನ ಏರಿಕೆ ಮತ್ತು ಕುಸಿತವು ಆರು ಕಂಪನಿಗಳ ಮೇಲೆ ಆಧಾರಿತವಾಗಿದ್ದರೆ, ಅದು ಆರ್ಥಿಕತೆಯ ಪ್ರವೃತ್ತಿಯನ್ನು ಹೇಗೆ ಪ್ರತಿಬಿಂಬಿಸುತ್ತದೆ? ದೇಶದ ಆರ್ಥಿಕತೆಯು ಅತ್ಯುತ್ತಮವಾಗಿದ್ದರೆ, ನಮ್ಮ ದೇಶವು ಎಲ್ಲಾ ಅಭಿವೃದ್ಧಿ ಸೂಚಕಗಳಲ್ಲಿ ಏಕೆ ಹಿಂದುಳಿದಿದೆ? 80 ಕೋಟಿ ಜನರು ತಿಂಗಳಿಗೆ ಸರ್ಕಾರ ನೀಡುವ ಐದು ಕೆಜಿ ಆಹಾರಧಾನ್ಯದ ಮೇಲೆ ಏಕೆ ಅವಲಂಬಿತರಾಗಿದ್ದಾರೆ? ಜನರ ಆದಾಯ ಮತ್ತು ಜೀವನ ಮಟ್ಟ ಏಕೆ ಕುಸಿಯುತ್ತಿದೆ ಮತ್ತು ಕುಟುಂಬದ ಸಾಲ ಏಕೆ ಹೆಚ್ಚುತ್ತಿದೆ? ದೇಶದಲ್ಲಿ ನಿರುದ್ಯೋಗ ಏಕೆ ತಾಂಡವವಾಡುತ್ತಿದೆ? ಹಾಗಾಗಿ ಆರ್ಥಿಕತೆಯ ಕಾರ್ಯಕ್ಷಮತೆ ಮತ್ತು ಸೆನ್ಸೆಕ್ಸ್‌ನ ಓಟದ ನಡುವೆ ಯಾವುದೇ ಸಂಬಂಧವಿಲ್ಲ ಎಂದು ನಮಗೆ ತಿಳಿದಿದೆ.

ದೇಶದಲ್ಲಿ ಹೆಚ್ಚುತ್ತಿರುವ ಆದಾಯದ ಅಸಮಾನತೆಯು ಈ ಮಾರುಕಟ್ಟೆಯ ಏರಿಳಿತಕ್ಕೆ ಮುಖ್ಯ ಕಾರಣವಾಗಿದೆ. ದೇಶದ ಶೇಕಡ ಒಂದರಷ್ಟು ಶ್ರೀಮಂತರು ಲಕ್ಷ ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ. ಶ್ರೀಮಂತರ ಸಂಪತ್ತು ಪ್ರತಿ ವರ್ಷ ಅತಿವೇಗವಾಗಿ ಹೆಚ್ಚುತ್ತಿದೆ. ದೇಶದಲ್ಲಿ ಶ್ರೀಮಂತ ಕುಟುಂಬಗಳು 2022–23ರಲ್ಲಿ 20 ಲಕ್ಷ ಕೋಟಿ ರೂ.ಗಳನ್ನು ವೈಯಕ್ತಿಕ ಸಂಪತ್ತನ್ನು ಗಳಿಸಿದ್ದಾರೆ ಎಂದು ತಜ್ಞರು ಹೇಳುತ್ತಾರೆ. ಅದರ ಸ್ವಲ್ಪಭಾಗವು ದೇಶೀಯ ಷೇರು ಮಾರುಕಟ್ಟೆಯನ್ನು ಪ್ರವೇಶಿಸಿದೆ. ಅದಕ್ಕಾಗಿಯೇ ಕಳೆದ ವರ್ಷ ದೇಶೀಯ ನಿಧಿಗಳಿಂದ 20 ಬಿಲಿಯನ್ ಡಾಲರ್ ಮತ್ತು 15 ಬಿಲಿಯನ್ ಡಾಲರ್ ವಿದೇಶಿ ಹೂಡಿಕೆಗಳು ನಮ್ಮ ದೇಶೀಯ ಷೇರು ಮಾರುಕಟ್ಟೆಗೆ ಬಂದಿವೆ.

ಕಳೆದ ವರ್ಷ ಅವರು ಸೆನ್ಸೆಕ್ಸ್‌ನಲ್ಲಿ ತಮ್ಮ ಹೂಡಿಕೆಯ ಮೇಲೆ 20 ಪ್ರತಿಶತದಷ್ಟು ಲಾಭವನ್ನು ಪಡೆದಿದ್ದಾರೆ ಎಂಬುದು ಗಮನಾರ್ಹವಾಗಿದೆ!! 2024ರಲ್ಲಿಯೂ ಶ್ರೀಮಂತ ಹೂಡಿಕೆದಾರರಿಗೆ ಲಾಭದ ಅವಕಾಶಗಳಿವೆ. ಯುಎಸ್ ಫೆಡರಲ್ ರಿಸರ್ವ್ ಬಡ್ಡಿದರಗಳನ್ನು ಕಡಿತಗೊಳಿಸುವ ಸೂಚನೆಗಳಿವೆ. ಇದು ನಮ್ಮ ದೇಶದ ಮೇಲೂ ಪರಿಣಾಮ ಬೀರುತ್ತದೆ. ಅಮೆರಿಕದಲ್ಲಿರುವ ಹೂಡಿಕೆದಾರರು ಅಲ್ಲಿ ಅಗ್ಗದ ಸಾಲಗಳನ್ನು ಪಡೆದು ಅಮೆರಿಕ ಮತ್ತು ಭಾರತೀಯ ಷೇರು ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡುವ ಸಾಧ್ಯತೆ ಹೆಚ್ಚು. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕೂಡ ಬಡ್ಡಿದರ ಕಡಿತಗೊಳಿಸಿದರೆ, ಷೇರು ಮಾರುಕಟ್ಟೆಗಳಲ್ಲಿ ದೇಶೀಯ ಹೂಡಿಕೆದಾರರ ಪ್ರಮಾಣ ಮತ್ತಷ್ಟು ಹೆಚ್ಚಲಿದೆ.

ಕಳವಳಕಾರಿಯಾಗಿರುವ ದೊಡ್ಡ ಊಹಾತ್ಮಕ ಹೂಡಿಕೆ

ಷೇರು ಮಾರುಕಟ್ಟೆಗಳು ಭರ್ತಿಯಾಗುತ್ತಲೇ ಇರುತ್ತವೆ. ಆದಾಗ್ಯೂ, ಚಿಲ್ಲರೆ ಹೂಡಿಕೆದಾರರು ಷೇರು ಮಾರುಕಟ್ಟೆಗಳಲ್ಲಿ ದೊಡ್ಡ ಊಹಾತ್ಮಕ ಹೂಡಿಕೆಗಳನ್ನು ಮಾಡುತ್ತಿರುವುದು ಕಳವಳಕಾರಿಯಾಗಿದೆ. ಭವಿಷ್ಯದ ಮಾರುಕಟ್ಟೆಯಲ್ಲಿ ಲಾಭ ಗಳಿಸಲು, ಒಬ್ಬರು ಹೆಚ್ಚಿನ ಸಂಖ್ಯೆಯ ಷೇರುಗಳನ್ನು ಖರೀದಿಸಬೇಕು. ಉದಾಹರಣೆಗೆ ನಗದು ಮಾರುಕಟ್ಟೆಯಲ್ಲಿ 100 ಮುಖಬೆಲೆಯ 20,000 ಷೇರುಗಳನ್ನು ಖರೀದಿಸಲು 20 ಲಕ್ಷ ರೂಪಾಯಿ ಖರ್ಚು ಮಾಡಬೇಕು. ಅದೇ ಉತ್ಪನ್ನ ಮಾರುಕಟ್ಟೆಯಲ್ಲಿ, ಹತ್ತು ಶೇಕಡಾ ಮಾರ್ಜಿನ್ ಮೊತ್ತವು ಸಾಕಾಗುತ್ತದೆ. ಆದಾಗ್ಯೂ, ಷೇರುಗಳ ಬೆಲೆ ಕುಸಿದರೆ, ಭಾರಿ ನಷ್ಟದ ಸಾಧ್ಯತೆಯಿದೆ. ಇತರ ದೇಶಗಳಲ್ಲಿ ನಗದು ಮಾರುಕಟ್ಟೆಯಲ್ಲಿ ಉತ್ಪನ್ನ ಮಾರುಕಟ್ಟೆಯ ಪಾಲು 5 ರಿಂದ 10 ಪ್ರತಿಶತ. ನಮ್ಮ ದೇಶದಲ್ಲಿ ಇದು 400 ಪಟ್ಟು ಹೆಚ್ಚು. ಒಂದುವೇಳೆ, ಮಾರುಕಟ್ಟೆಗಳು ಈ ರೀತಿ ಕುಸಿದರೆ, ಅದರ ಪರಿಣಾಮವು ಸಾಲದ ಮೇಲೆ ಮತ್ತು ಪಾವತಿಗಳ ಮೇಲೆ ಬೀಳುತ್ತದೆ. ಆಗ ಸಾಲದ ಬಾಕಿಯ ಹೊರೆ ಹೆಚ್ಚುತ್ತದೆ. ಅಂದರೆ ಕಾರ್ಪೊರೇಟ್ ಗಳು ಮತ್ತು ದೊಡ್ಡ ಹೂಡಿಕೆದಾರರು ಜನರ ಹಣದಿಂದ ಷೇರುಪೇಟೆಯಲ್ಲಿ ಭಾರಿ ಲಾಭ ಗಳಿಸುತ್ತಿದ್ದಾರೆ. ನಷ್ಟವಾದರೆ ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳನ್ನು ದೂಷಿಸಲಾಗುತ್ತಿದೆ.

ಟ್ರ್ಯಾಕ್ಟರ್ ಖರೀದಿಸಲು ರೈತರಿಗೆ ಶೇ.14ರಿಂದ ಶೇ.16ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಆದರೆ ಷೇರು ದಲ್ಲಾಳಿಗಳು ಮತ್ತು ಹೂಡಿಕೆದಾರರು ಕಾಲ್ ಮನಿ ಮತ್ತು ಅಲ್ಪಾವಧಿ ಸಾಲದ ಹೆಸರಿನಲ್ಲಿ ಅಗ್ಗದ ಸಾಲ ಪಡೆಯುತ್ತಿದ್ದಾರೆ. ನಿಜವಾದ ಆರ್ಥಿಕತೆಗಿಂತ ಷೇರು ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲು ಸರ್ಕಾರಗಳು ಕೆಲಸ ಮಾಡುತ್ತಿರುವುದರಿಂದ ಇದೆಲ್ಲವೂ ನಡೆಯುತ್ತಿದೆ

ಮುಳುಗಿದ ಎನ್ರಾನ್ ಕಂಪನಿ

1996 ರಲ್ಲಿ, ಎನ್ರಾನ್ ಕಂಪನಿಯು ವಿದ್ಯುತ್ ಉತ್ಪಾದಿಸಲು ಸರ್ಕಾರಿ ಬ್ಯಾಂಕುಗಳಿಂದ ಸಾಲವನ್ನು ಪಡೆದುಕೊಂಡಿತು ಮತ್ತು ಆಗಿನ ಮಹಾರಾಷ್ಟ್ರ ಸರ್ಕಾರದೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿತು ಮತ್ತು ಅಂತಿಮವಾಗಿ ವಿದ್ಯುತ್ ಉತ್ಪಾದಿಸದೆ ನಮ್ಮ ದೇಶದಿಂದ ಹಾರಿತು. ಅದಕ್ಕೆ ಸಾಲ ನೀಡಿದ ಬ್ಯಾಂಕುಗಳು ದಿವಾಳಿಯಾದವು. ಆ ಕಂಪನಿಯಲ್ಲಿ ಷೇರುಗಳನ್ನು ಖರೀದಿಸಿದ ಸಾಮಾನ್ಯ ಹೂಡಿಕೆದಾರರು ಮುಳುಗಿದರು. ಕೊನೆಗೆ ಆ ಕಂಪನಿಯ ಉದ್ಯೋಗಿಗಳೂ ನೀರಿನಲ್ಲಿ ಮುಳುಗಿದರು. ಎನ್ರಾನ್ ಉದ್ಯೋಗಿಗಳಿಗೆ ಸ್ಟಾಕ್ ಆಯ್ಕೆಗಳ ಹೆಸರಿನಲ್ಲಿ ನೀಡಲಾದ ಷೇರುಗಳು ಸ್ಕ್ರ್ಯಾಪ್ ಪೇಪರ್‌ಗಳಾಗಿ ಉಳಿದಿವೆ. ಕಿಂಗ್ ಫಿಶರ್ ಮತ್ತು ನೀರವ್ ಮೋದಿಯ ಕಥೆಗಳು ಇದೇ ಅಲ್ಲವೇ!!

ಎಫ್.ಡಿ.ಐ.

2021–22 ರಲ್ಲಿ, ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ರೂಪದಲ್ಲಿ ರೂ. 4.37 ಲಕ್ಷ ಕೋಟಿಗಳು ನಮ್ಮ ದೇಶದ ಆರ್ಥಿಕತೆಯನ್ನು ಪ್ರವೇಶಿಸುತ್ತವೆ. ಆದರೆ 2022–23 ರಲ್ಲಿ ನಮ್ಮ ದೇಶಕ್ಕೆ ವಿದೇಶಿ ಹೂಡಿಕೆಗಳು ಕೇವಲ ರೂ. 3.67 ಲಕ್ಷ ಕೋಟಿಗಳಿಗೆ ತೀವ್ರವಾಗಿ ಇಳಿಯುತ್ತವೆ. ನಮ್ಮ ದೇಶಕ್ಕೆ ಬಂದಿರುವ ಎಫ್ ಡಿಐ ಸೇವಾ ವಲಯ ಮತ್ತು ಸಾಫ್ಟ್ ವೇರ್ ಕ್ಷೇತ್ರಕ್ಕೂ ಬಂದಿದೆ. ಉತ್ಪಾದನಾ ವಲಯ, ನಿರ್ಮಾಣ ಕ್ಷೇತ್ರ ಮತ್ತು ಕೌಶಲ್ಯ ಸುಧಾರಣೆ ವಲಯದಲ್ಲಿ ಎಫ್‌ಡಿಐ ನಾಮಮಾತ್ರಕ್ಕೆ ಬಂದಿದೆ. ಇದು ದೇಶದ ಅಭಿವೃದ್ಧಿಗೆ ಹೇಗೆ ಕೊಡುಗೆ ನೀಡುತ್ತದೆ? ಅಸ್ಥಿರವಾದ ವಿದೇಶಿ ಹೂಡಿಕೆಗಾಗಿ ಒತ್ತಾಯಿಸುತ್ತಿದ್ದಾರೆ. ವಿದೇಶಿ ಬಂಡವಾಳ ಹೂಡಿಕೆಗಳು ದೇಶದ ಆರ್ಥಿಕತೆಯನ್ನು ಹೇಗೆ ಹಾನಿಗೊಳಿಸುತ್ತವೆ ಎಂಬುದನ್ನು 80 ಮತ್ತು 90 ರ ದಶಕಗಳಲ್ಲಿ ದಕ್ಷಿಣ ಏಷ್ಯಾದ ದೇಶಗಳ ಆರ್ಥಿಕತೆಯ ಕುಸಿತದಿಂದ ನೋಡಬಹುದಾಗಿದೆ. ದಶಕಗಳ ಅನುಭವವಿದ್ದರೂ ವಿದೇಶಿ ಹೂಡಿಕೆಗಾಗಿ ಸರಕಾರಗಳು ಹಪಹಪಿಸುವುದರಿಂದಲೇ ಮಾಡಲು ಕೆಲಸವಿಲ್ಲ.

ನಿಯಂತ್ರಕ ವ್ಯವಸ್ಥೆಗಳ ವ್ಯಾಪ್ತಿಗೆ ಅಡ್ಡಿ

ದೇಶದಲ್ಲಿನ ನಿಯಂತ್ರಕ ವ್ಯವಸ್ಥೆಗಳ ನಿರ್ವಹಣಾ ಸಾಮರ್ಥ್ಯದಿಂದಾಗಿ ನಮ್ಮ ದೇಶವು 2008 ರ ಜಾಗತಿಕ ಆರ್ಥಿಕ ಬಿಕ್ಕಟ್ಟನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಯಿತು. ಬ್ಯಾಂಕ್‌ಗಳಲ್ಲಿ ಎಷ್ಟು ಹಣ ಇರಬೇಕು, ಎಷ್ಟು ಸಾಲ ನೀಡಬೇಕು ಮತ್ತು ಎಷ್ಟು ಬಂಡವಾಳ ಇರಬೇಕು ಎಂಬುದಕ್ಕೆ ನಮ್ಮ ದೇಶದಲ್ಲಿ ಕಠಿಣ ಕಾನೂನುಗಳಿವೆ. ಆದಾಗ್ಯೂ, ಅಂತರರಾಷ್ಟ್ರೀಯ ಹಣಕಾಸು ಹೂಡಿಕೆಯ ಒತ್ತಡದಲ್ಲಿ, ಅವುಗಳನ್ನು ಕಿತ್ತುಹಾಕುವ ಪ್ರಯತ್ನಗಳು ವೇಗಗೊಂಡಿವೆ. ಆದ್ದರಿಂದಲೇ ದೇಶದಲ್ಲಿ ನಿಯಂತ್ರಕ ವ್ಯವಸ್ಥೆಗಳ ವ್ಯಾಪ್ತಿಗೆ ದಿನದಿಂದ ದಿನಕ್ಕೆ ಅಡ್ಡಿಯಾಗುತ್ತಿದೆ.

ಜನರ ಹಣದಲ್ಲಿ ಜೂಜು

ಸಾರ್ವಜನಿಕ ವಲಯದ ಬ್ಯಾಂಕ್‌ಗಳು ನೀಡುವ ಹತೋಟಿ ಸಾಲಕ್ಕೆ ಕತ್ತರಿ ಬೀಳುತ್ತಿದೆ. ಕಾರ್ಪೊರೇಟ್ ಸಾಲಗಳು ಹೆಚ್ಚುತ್ತಿವೆ. ಕಾರ್ಪೊರೇಟ್‌ಗಳು ಜನರ ಹಣದಲ್ಲಿ ವ್ಯವಹಾರ ಮಾಡಿ ಸಾವಿರಾರು ಕೋಟಿ ಗಳಿಸುವುದು, ಸಾಲ ಮಾಡಿ ಬ್ಯಾಂಕ್‌ಗಳನ್ನು ಮುಳುಗಿಸುವುದು, ಬ್ಯಾಂಕ್‌ಗಳನ್ನು ಉಳಿಸಲು ಸರ್ಕಾರ ಸಾರ್ವಜನಿಕ ಹಣವನ್ನು ಬ್ಯಾಂಕ್‌ಗಳಿಗೆ ಬಂಡವಾಳವಾಗಿ ಮತ್ತೆ ನೀಡುವುದು ಸಾಮಾನ್ಯವಾಗಿದೆ. ಕಾರ್ಪೊರೇಟ್ ಕಂಪನಿಗಳ ಬಾಕಿಯನ್ನು ಮನ್ನಾ ಮಾಡುತ್ತಿರುವುದೇಕೆ? ಅವರ ಸಾಲವನ್ನು ಏಕೆ ವಸೂಲಿ ಮಾಡಬಾರದು? ಬ್ಯಾಂಕ್‌ಗಳನ್ನು ಏಕೆ ಖಾಸಗೀಕರಣಗೊಳಿಸಲಾಗುತ್ತಿದೆ? ಜನರು ಪ್ರಜ್ಞಾಪೂರ್ವಕವಾಗಿ ಈ ಪ್ರಶ್ನೆಗಳನ್ನು ಕೇಳಿ, ಇದನ್ನು ನಿಲ್ಲಿಸುವಂತೆ ಸರ್ಕಾರಗಳ ಮೇಲೆ ಒತ್ತಡ ತರುವವರೆಗೆ, ಈ ಶೋಷಣೆಯು ವಿಪರೀತವಾಗಿ ನಡೆಯುತ್ತಲೇ ಇರುತ್ತದೆ!! ಪ್ರಜೆಗಳ ಹಣದಿಂದ ಕೆಲವೇ ಮಂದಿ 'ದೊಡ್ಡವರು' ಷೇರುಪೇಟೆಯಲ್ಲಿ ಜೂಜಾಡುತ್ತಲೇ ಇರುತ್ತಾರೆ!! ಷೇರುಪೇಟೆಯ ಅಬ್ಬರವನ್ನು ಕಂಡು ನಿಜವಾದ ಆರ್ಥಿಕತೆ ಬೆಳೆಯುತ್ತಿದೆ ಎಂಬ ಭ್ರಮೆಯಲ್ಲಿರುವವರು ಈ ಸತ್ಯಗಳನ್ನು ಅರಿತುಕೊಳ್ಳಬೇಕು.

ಕೃಪೆ: ಪ್ರಜಾಶಕ್ತಿ

ಸೌಹಾರ್ದ ಪರಂಪರೆ ಮತ್ತು ಸಮಕಾಲೀನತೆ

ರಾಜ್ಯ ಸಮಾವೇಶ

2024 ಜನವರಿ 11 – ಬೆಳಿಗ್ಗೆ 10.30 ಗಂಟೆಗೆ

ಸ್ಥಳ: ಮೇರಿ ದೇವಾಸಿಯಾ ಸಭಾಂಗಣ, ಎನ್.ಜಿ.ಒ ಹಾಲ್, ಕಬ್ಬನ್ ಪಾರ್ಕ್, ಬೆಂಗಳೂರು

ಆಶಯ ನುಡಿ: **ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ,** ಹಿರಿಯ ಸಾಹಿತಿಗಳು

ಮಾತನಾಡುವವರು: **ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್,** ವಿಶ್ರಾಂತ ನ್ಯಾಯಮೂರ್ತಿ
ನಾ.ಡಿಸೋಜಾ, ಹಿರಿಯ ಸಾಹಿತಿಗಳು
ಪ್ರೊ.ಅರವಿಂದ ಮಾಲಗತ್ತಿ, ಮಾಜಿ ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ
ಸಲೀಂ ಅಹಮದ್, ಶಾಸಕರು, ಮುಖ್ಯ ಸಚೇತಕರು
ಪ್ರೊ.ಹೆಚ್.ಎಲ್.ಪುಷ್ಪಾ, ಅಧ್ಯಕ್ಷರು, ಕರ್ನಾಟಕ ಲೇಖಕಿಯರ ಸಂಘ
ಬಡಗಲಪುರ ನಾಗೇಂದ್ರ, ರೈತ ಮುಖಂಡರು, ಸಂಯುಕ್ತ ಹೋರಾಟ ಕರ್ನಾಟಕ–ಸಂಯೋಜಕರು
ಯು.ಬಸವರಾಜ, ಉಪಾಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ

ಅಧ್ಯಕ್ಷತೆ: **ಡಾ.ಕೆ.ಮರುಳಸಿದ್ದಪ್ಪ,** ಹಿರಿಯ ಚಿಂತಕರು, ಮಾಜಿ ಅಧ್ಯಕ್ಷರು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ವ್ಯವಸ್ಥೆ: ಸೌಹಾರ್ದ ಕರ್ನಾಟಕ, ವಿವಿಧ ಪ್ರಗತಿಪರ, ಜನ ಸಂಘಟನೆಗಳು, ಸಮಾನ ಮನಸ್ಕರು.

ಬನ್ನಿ–ಭಾಗವಹಿಸಿ, ಇತರರನ್ನು ಪಾಲ್ಗೊಳಿಸಿ

ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನ ಮೇಲೆ ಸರಕಾರದ ಅಕ್ರಮ ದಾಳಿ ಕಾರ್ಮಿಕರ ಕಾನೂನು ಹಕ್ಕಿನ ಮೇಲೆ ಕಾನೂನುಬಾಹಿರ ಕ್ರಮ

ಬೇಡಿಕೆ ಆಧಾರಿತ ಗ್ರಾಮೀಣ ಉದ್ಯೋಗ ಖಾತರಿ ಕಾನೂನಾಗಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ(ಮನರೇಗ) ಯಲ್ಲಿ ಆಧಾರ್ ಆಧಾರಿತ ಪಾವತಿ ವ್ಯವಸ್ಥೆ(ಎಬಿಪಿಎಸ್)ಯ ಹೇರಿಕೆ ಈ ಕಾಯ್ದೆ ಬಗ್ಗೆ ಮೋದಿ ಸರ್ಕಾರದ ಸಕ್ರಿಯ ಹಗೆತನದ ಹೊಚ್ಚಹೊಸ ಅಭಿವ್ಯಕ್ತಿ ಯಾಗಿದೆ, ಅದರ ಅನುಷ್ಠಾನಕ್ಕೆ ಇದ್ದ ಗಡುವು ಡಿಸೆಂಬರ್ 31 ರಂದು ಮುಕ್ತಾಯಗೊಂಡಿದೆ. ಮನರೇಗ ಪ್ರಕಾರ, ಪ್ರತಿಯೊಬ್ಬ ಗ್ರಾಮೀಣ ಕಾರ್ಮಿಕರಿಗೆ ಒಂದು ಜಾಬ್ ಕಾರ್ಡ್‌ನ ಹಕ್ಕಿದೆ ಮತ್ತು ಪ್ರತಿಯೊಬ್ಬ ಜಾಬ್ ಕಾರ್ಡ್ ಹೊಂದಿರುವವರಿಗೆ ಕನಿಷ್ಠ 100 ದಿನಗಳ ಕೆಲಸದ ಹಕ್ಕಿದೆ. ಎಬಿಪಿಎಸ್ ನ ಹೇರಿಕೆ ಕೋಟಿಗಟ್ಟಲೆ ಕಾರ್ಮಿಕರ ಹಕ್ಕನ್ನು ಕಿತ್ತುಕೊಳ್ಳುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕ್ರಮವನ್ನು ಬಲವಾಗಿ ಖಂಡಿಸಿದೆ.

ಜಾಬ್ ಕಾರ್ಡ್ ಹೊಂದಿರುವವರನ್ನು ಎಬಿಪಿಎಸ್‌ಗೆ ಅರ್ಹರು ಮತ್ತು ಅನರ್ಹರು ಎಂದು ವಿಂಗಡಿಸುವುದು ಒಕ್ಕೂಟ ಸರ್ಕಾರ ಈ ಕಾನೂನಿಗೆ ಸಂಬಂಧಪಟ್ಟಂತೆ ಮಾಡಿರುವ ಮೊದಲ ಉಲ್ಲಂಘನೆಯಾಗಿದೆ. ಸರ್ಕಾರದ ಪ್ರಕಾರ, 25.25 ಕೋಟಿ ನೋಂದಾಯಿತ ಕಾರ್ಮಿಕರಲ್ಲಿ 14.35 ಕೋಟಿ ಜನರು ಮಾತ್ರ ಅರ್ಹರಾಗಿದ್ದಾರೆ, ಏಕೆಂದರೆ ಅವರು ಕಳೆದ ಮೂರು ವರ್ಷಗಳಲ್ಲಿ ಕನಿಷ್ಠ ಒಂದು ದಿನದ ಕೆಲಸವನ್ನು ಮಾಡಿದ್ದಾರೆ. ಜಾಬ್ ಕಾರ್ಡ್ ಹೊಂದಿರುವವರು, ಈ ಹಿಂದೆ ಇದರಡಿಯಲ್ಲಿ ಕೆಲಸ ಮಾಡಿರದವರು, ಈಗ ತಾನು ಒಓಖಇಉಂ ಸೈಟ್‌ನಲ್ಲಿ ಕೆಲಸ ಮಾಡಬೇಕೆಂದು ನಿರ್ಧರಿಸಿದರೆ, ಅವರು ಹಾಗೆ ಮಾಡಲು ಸಾಧ್ಯವಿಲ್ಲ, ಏಕೆಂದರೆ ಈಗ ಅವರು ಅನರ್ಹರು ಎಂದು ಘೋಷಿಸಲ್ಪಟ್ಟಿದ್ದಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಈ ಕಾನೂನಿನ ಅಡಿಯಲ್ಲಿ ಜಾಬ್ ಕಾರ್ಡ್ ಹೊಂದುವ ಎಲ್ಲ ಹಕ್ಕನ್ನು ಹೊಂದಿರುವ 10 ಕೋಟಿಗೂ ಹೆಚ್ಚು ಕಾರ್ಮಿಕರನ್ನು ಎಬಿಪಿಎಸ್ ಪಡೆಯಲು ಅನರ್ಹರೆಂದು ಘೋಷಿಸಲಾಗಿದೆ ಮತ್ತು ಅದರಿಂದಾಗಿ ಮನರೇಗ ಸೈಟ್‌ನಲ್ಲಿ ಕೆಲಸ ಮಾಡುವ ಹಕ್ಕನ್ನು ಅವರಿಗೆ ನಿರಾಕರಿಸಲಾಗಿದೆ.

ಅರ್ಹ ಜಾಬ್ ಕಾರ್ಡ್‌ದಾರರು ಎನ್ನಲಾದ 14.35 ಕೋಟಿ ಜನರಲ್ಲೂ 12.7 ಪ್ರತಿಶತದಷ್ಟು, ಅಂದರೆ ಸುಮಾರು 1.8 ಕೋಟಿ ಕಾರ್ಮಿಕರು ಎಬಿಪಿಎಸ್ ಹೊಂದಿಲ್ಲ , ಅದರಿಂದಾಗಿ ಮನರೇಗ ನಲ್ಲಿ ಕೆಲಸ ಮಾಡಲು ಅರ್ಹರಾಗಿರುವುದಿಲ್ಲ. ಈ ಹಿಂದೆ ಸರ್ಕಾರವು ಆನ್‌ಲೈನ್ ನೋಂದಣಿ ವ್ಯವಸ್ಥೆಯನ್ನು ಹೇರಿತ್ತು, ಇದರ ಫಲಿತಾಂಶವಾಗಿ ಕಳಪೆ ಸಂಪರ್ಕವನ್ನು ಹೊಂದಿರುವ ಗ್ರಾಮೀಣ ಭಾರತದ ಹೆಚ್ಚಿನ ಭಾಗಗಳಲ್ಲಿ, ಕೆಲಸದ ಸ್ಥಳದಲ್ಲಿ ಕಾರ್ಮಿಕರ ಉಪಸ್ಥಿತಿಯನ್ನು ಸ್ವೀಕರಿಸಿಲ್ಲ. ಆನ್‌ಲೈನ್ ನೋಂದಣಿ ಇಲ್ಲದ್ದರಿಂದ ಅವರಿಗೆ ಕೂಲಿಯನ್ನು ನಿರಾಕರಿಸಲಾಗುತ್ತಿತ್ತು ಮತ್ತು ನಿರಾಕರಿಸಲಾಗುತ್ತಿದೆ.

ಇದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಮೇಲಿನ ನೇರ ದಾಳಿಯಾಗಿದೆ. ಕೆಲಸದ ಮೇಲೆ 100 ದಿನಗಳ ಮಿತಿಯಿಂದಾಗಿ ಇದೇನೂ ಸಮರ್ಪಕವಾದ ಕಾಯ್ದೆಯಾಗಿಲ್ಲವಾದರೂ, ಗ್ರಾಮೀಣ ಬಡವರ ಒಂದು ಜೀವನಾಡಿ ಎಂದು ಸಾಬೀತಾಗಿದೆ, ವಿಶೇಷವಾಗಿ ನಿರುದ್ಯೋಗದಿಂದ ಉಂಟಾದ ಹೆಚ್ಚಿನ ಗ್ರಾಮೀಣ ಸಂಕಷ್ಟದ ಸಮಯದಲ್ಲಿ. ಮೋದಿ ಸರ್ಕಾರ ಒಂದು ಕಾನೂನಾತ್ಮಕ ಅಧಿಕಾರದ ಮೇಲೆ ದಾಳಿ ಮಾಡಲು ತಂತ್ರಜ್ಞಾನವನ್ನು ಬಳಸುತ್ತಿದೆ ಎಂದು ಸಿಪಿಐ(ಎಂ) ಟಿಪ್ಪಣಿ ಮಾಡಿದೆ.

ಇದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯು ಖಾತರಿಪಡಿಸಿರುವ ಕಾರ್ಮಿಕರ ಹಕ್ಕುಗಳ ಮೇಲಿನ ಅಕ್ರಮ ದಾಳಿ ಎಂದು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಧಾರ್ ಆಧಾರಿತ ಪಾವತಿ ವ್ಯವಸ್ಥೆಗೆ ಕಡ್ಡಾಯವಾಗಿ ತಳುಕು ಹಾಕಬೇಕು ಎಂಬ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದೆ.

ನಿರ್ವಸಾಹತೀಕರಣದ ಹೆಸರಿನಲ್ಲಿ ಮೋಸ

ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ನಿರ್ವಸಾಹತೀಕರಣದ ಹೆಸರಿನಲ್ಲಿ, ಈ ಶಾಸನಗಳನ್ನು ಪಾಸುಮಾಡಿಸಿಕೊಳ್ಳಲಾಗಿದೆ. ಆದರೆ ಯಾವುದೇ ರೀತಿಯ ನಿರ್ವಸಾಹತೀಕರಣದ ಪ್ರಕ್ರಿಯೆಯಲ್ಲಿ ಜನಗಳಿಗೆ ವಸಾಹತುಶಾಹಿ ಆಡಳಿತದಲ್ಲಿ ಇದ್ದುದಕ್ಕಿಂತ ಹೆಚ್ಚಿನ ಅಧಿಕಾರ ಸಿಗಬೇಕು. ಏಕೆಂದರೆ, ವಸಾಹತುಶಾಹಿ ಆಡಳಿತದ ಅಡಿಯಲ್ಲಿ ಅವರು ಪ್ರಜೆಗಳಷ್ಟೇ, ನಾಗರಿಕರಲ್ಲ. ಆದರೆ ಕೇಂದ್ರ ಸರ್ಕಾರವು ವಂಚನೆಯ ಮಾತುಗಳನ್ನಾಡುತ್ತಲೇ, ಇದಕ್ಕೆ ವಿರುದ್ಧವಾಗಿ ಮಾಡಿದೆ. ರಾಜದ್ರೋಹದ ಕಾನೂನು ಎಂದು ಜನಜನಿತವಾಗಿರುವ ಐಪಿಸಿಯ ಸೆಕ್ಷನ್ 124(a) ಅನ್ನು ತೆಗೆದುಹಾಕಿರುವುದು ನಿರ್ವಸಾಹತೀಕರಣದ ಒಂದು ಮುಖ್ಯ ಅಂಶ ಎಂದು ಸರಕಾರ ಹೇಳಿಕೊಂಡಿದೆ. ಆದರೆ, ನಾವು ಭಾರತೀಯ ನ್ಯಾಯ ಸಂಹಿತ (ಬಿಎನ್‌ಎಸ್) ವನ್ನು ನಿಕಟವಾಗಿ ಪರಿಶೀಲಿಸಿದರೆ, ಅದರ ವಿಭಾಗ 150 ರಲ್ಲಿ ಐಪಿಸಿಯ ಸೆಕ್ಷನ್ 124(a) ರಲ್ಲಿನ ಅದೇ ಕರಾಳ ಅಂಶ ಮತ್ತು ಆಶಯವನ್ನು ಉಳಿಸಿಕೊಳ್ಳಲಾಗಿದೆ. ಇಂತಹ ಮೋಸಗೊಳಿಸುವ ದಾವೆಗಳ ಅನೇಕ ಉದಾಹರಣೆಗಳು ಈ ಶಾಸನಗಳಲ್ಲಿ ಇವೆ ಎಂದು ಸಿಐಟಿಯು ಹೇಳಿದೆ.

ಇದಲ್ಲದೆ, ಇದು ಪೊಲೀಸ್ ಮತ್ತು ಕಾರ್ಯಾಂಗದ ಅಧಿಕಾರವನ್ನು ನಿರಂಕುಶವಾಗಿ ಮತ್ತು ಅಸಹಜವಾಗಿ ವಿಸ್ತರಿಸಿದೆ. ಅಂತಹ ಹೆಚ್ಚು ಎದ್ದುಕಾಣುವ ನಿದರ್ಶನಗಳಲ್ಲಿ ಒಂದೆಂದರೆ, ರಸ್ತೆ ಅಪಘಾತಗಳು ಮತ್ತು ಇತರ ಅತಿರೇಕದ ಮತ್ತು ನಿರ್ಲಕ್ಷ್ಯದ ಕೃತ್ಯಗಳು/ಚಾಲನೆಗೆ ಸಂಬಂಧಿಸಿದ ಐಪಿಸಿ ನಿಬಂಧನೆಗಳನ್ನು ತಿದ್ದುಪಡಿ ಮಾಡಿರುವುದು, ಒಬ್ಬ ವ್ಯಕ್ತಿಯು ಅತಿರೇಕದ ಚಾಲನೆಯಲ್ಲಿ ಭಾಗಿಯಾಗಿರುವುದು ಕಂಡುಬಂದರೆ, ಆತ ಅಪರಾಧದ ಸ್ಥಳದಿಂದ (ಹೆಚ್ಚಾಗಿ ಭಯದಿಂದ) ಓಡಿಹೋದರೆ ಮತ್ತು ಘಟನೆಯನ್ನು ಪೊಲೀಸರಿಗೆ ವರದಿ ಮಾಡಲು ವಿಫಲವಾದರೆ, 10 ವರ್ಷಗಳ ಜೈಲು ಶಿಕ್ಷೆ ಮತ್ತು/ಅಥವಾ ದಂಡವನ್ನು ವಿಧಿಸಲಾಗಿದೆ.

ಪ್ರಸ್ತುತ, ಹಿಟ್–ಅಂಡ್–ರನ್ ಘಟನೆಗಳನ್ನು ಐಪಿಸಿ ಯ 279 (ಅತಿರೇಕದ ಅಥವಾ ಅಜಾಗರೂಕ ಚಾಲನೆ), 304ಎ (ನಿರ್ಲಕ್ಷ್ಯದಿಂದ ಸಾವಿಗೆ ಕಾರಣವಾಗುವುದು) ಮತ್ತು 338 (ಇತರರ ಜೀವ ಅಥವಾ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನುಂಟುಮಾಡುವುದು) ಅಡಿಯಲ್ಲಿ ದಾಖಲಿಸಲಾಗುತ್ತದೆ. 304ಎ ಅಡಿಯಲ್ಲಿ ಅತಿರೇಕ ಮತ್ತು ನಿರ್ಲಕ್ಷ್ಯದ ಚಾಲನೆಯಿಂದ ಮರಣವನ್ನು ಉಂಟುಮಾಡಿದಲ್ಲಿ ಶಿಕ್ಷೆಯು ಎರಡು ವರ್ಷಗಳು.

ಸಾಮೂಹಿಕ ವಿವೇಕಕ್ಕೆ ಗೌರವ ನೀಡದ ಆಳ್ವಿಕೆ

11ನೇ ಆಗಸ್ಟ್ 2023 ರಂದು ಲೋಕಸಭೆಯಲ್ಲಿ ಮೊದಲ ಬಾರಿಗೆ ಇದನ್ನು ಪರಿಚಯಿಸಿದ ನಂತರ, ಅದನ್ನು ಗೃಹ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಗೆ ಒಪ್ಪಿಸಲಾಯಿತು, ಸ್ಥಾಯಿ ಸಮಿತಿಯು ಈ ಪರಿಚ್ಛೇದ 104(2) ಅನ್ನು ಮರುಪರಿಶೀಲಿಸುವಂತೆ ಶಿಫಾರಸು ಮಾಡಿತ್ತು ಎಂದು ನೆನಪಿಸಿಕೊಳ್ಳಬೇಕಾಗಿದೆ. ಸ್ಥಾಯಿ ಸಮಿತಿಯ ಶಿಫಾರಸಿನ ಪ್ಯಾರಾ 3.20.5 ಹೀಗೆ ಹೇಳುತ್ತದೆ, “104(2) ನೇ ವಿಧಿಯು ಭಾರತದ ಸಂವಿಧಾನದ 20(3) ನೇ ವಿಧಿಗೆ ವಿರುದ್ಧವಾಗಿರಬಹುದು ಎಂದು ಸಮಿತಿಯು ಅಭಿಪ್ರಾಯಪಟ್ಟಿದೆ – 'ಯಾವುದೇ ಅಪರಾಧದ ಆರೋಪಕ್ಕೆ ಒಳಗಾದ ವ್ಯಕ್ತಿಯನ್ನು ತನ್ನ ವಿರುದ್ಧವೇ ಒಬ್ಬ ಸಾಕ್ಷಿಯಾಗಲು ಒತ್ತಾಯಿಸಬಾರದು' ಎಂದು ಅದು ಹೇಳುತ್ತದೆ. ಸರ್ವೋಚ್ಚ ನ್ಯಾಯಾಲಯವು 'ಸಾಕ್ಷಿ' ಎಂಬ ಪದವನ್ನು ಮೌಖಿಕ ಮತ್ತು ದಸ್ತಾವೇಜುಗಳ ಸಾಕ್ಷ್ಯಗಳನ್ನು ಕೂಡ ಒಳಗೊಳ್ಳುತ್ತದೆ ಎಂದು ವ್ಯಾಖ್ಯಾನಿಸುವ ಮೂಲಕ ಈ ವಿನಾಯಿತಿಯ ವ್ಯಾಪ್ತಿಯನ್ನು ವಿಸ್ತರಿಸಿದೆ, ಇದರಿಂದಾಗಿ ಯಾವುದೇ ವ್ಯಕ್ತಿಯು ತನ್ನ ವಿರುದ್ಧದ ಪ್ರಾಸಿಕ್ಯೂಷನ್ ಅನ್ನು ಬೆಂಬಲಿಸಲು ಸಾಕ್ಷಿಯಾಗಲು ಒತ್ತಾಯಿಸುವಂತಿಲ್ಲ. ಆದ್ದರಿಂದ, ಸರ್ಕಾರವು ಇನ್ನೂ ಈ ಹೊಸ ನಿಬಂಧನೆಯನ್ನು ಉಳಿಸಿಕೊಳ್ಳಲು ಬಯಸಿದರೆ ಹೆಚ್ಚಿನ ಚಿಂತನೆಯ ಅಗತ್ಯವಿದೆ”

ಈ ಬಗ್ಗೆ ಟಿಪ್ಪಣಿ ಮಾಡುತ್ತ, ಸಿಐಟಿಯು, ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಸರ್ಕಾರಗಳ ಅತ್ಯಲ್ಪ ಗೌರವವನ್ನು ಗಮನಿಸಿದರೆ, ಇಂತಹ ಯಾವುದೇ ಸಾಮೂಹಿಕ ವಿವೇಕಕ್ಕೆ ಅವರು ಕಿವಿಗೊಡುತ್ತಾರೆ ಎಂದು ನಾವು ನಿರೀಕ್ಷಿಸುವಂತಿಲ್ಲವಾದ್ದರಿಂದ, ಅವರು ಮೊಂಡುತನದಿಂದ ಮೇಲಿನ ಸಂವಿಧಾನದ ಅನುಚ್ಛೇದ ಮತ್ತು ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸಿನ ವಿರುದ್ಧ ಹೊಸ ನಿಬಂಧನೆ 104 (2) ರೊಂದಿಗೆ ಅದೇ ಹತ್ತು ವರ್ಷಗಳ ಜೈಲುವಾಸವನ್ನು ಉಳಿಸಿಕೊಂಡಿದ್ದಾರೆ ಮತ್ತು ಅದರಲ್ಲಿ 'ಅತಿರೇಕದ ಮತ್ತು ನಿರ್ಲಕ್ಷ್ಯದ ಕೃತ್ಯ' ಎಂಬ ಪದವನ್ನು ಸೇರಿಸಿದ್ದಾರೆ, ಎಂದು ಹೇಳಿದೆ.

ಈ ಹಿನ್ನೆಲೆಯಲ್ಲಿ, ಮೂರು ದಿನಗಳಿಂದ ದೇಶಾದ್ಯಂತ ಮೋಟಾರು ಕಾರ್ಮಿಕರು ಈ ಕರಾಳ ನಿಬಂಧನೆಗಳ ವಿರುದ್ಧ ಹೋರಾಟ ನಡೆಸಿದ್ದಾರೆ. ರಸ್ತೆ ಸಾರಿಗೆ ನೌಕರರ ಈ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿರುವ ಸಿಐಟಿಯು, ಈ ಮುಷ್ಕರಕ್ಕೆ ವಾಹನ ಚಾಲನೆ ಮಾಡುವ ಸಾರ್ವಜನಿಕರು ಮತ್ತು ಕಾರ್ಮಿಕರಲ್ಲಿ ಮುಷ್ಕರಕ್ಕೆ ಎದ್ದು ಬರುತ್ತಿರುವ ಬೆಂಬಲವನ್ನು ಗ್ರಹಿಸಿದ ಸರ್ಕಾರವು ಆ ದಂಡನೆಯ ನಿಬಂಧನೆಯನ್ನು ಜಾರಿಗೊಳಿಸುವುದಿಲ್ಲ ಎಂದು ಭರವಸೆ ನೀಡಿದರೂ, ಅದನ್ನು ಪರಿಷ್ಕರಿಸುವ ಯಾವುದೇ ಮಾತನ್ನು ಹೇಳಿಲ್ಲವಾದ್ದರಿಂದ, ಈ ಸೆಕ್ಷನ್ 104(2) ಅನ್ನು ತೆಗೆದು ಹಾಕಬೇಕು ಮತ್ತು ಮುಂದೆ ಯಾವುದೇ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳುವ ಮುಂಚೆ ರಸ್ತೆ ಸಾರಿಗೆ ಕಾರ್ಮಿಕರ ಸಂಘಗಳು ಮತ್ತು ಮತ್ತು ರಸ್ತೆ ಸಾರಿಗೆಗೆ ಸಂಬಂಧಪಟ್ಟ ಎಲ್ಲರೊಡನೇ ಸಮಾಲೋಚನೆ ನಡೆಸಬೇಕು ಎಂದು ಆಗ್ರಹಿಸಿದೆ.

'ಭಾರತೀಯ ನ್ಯಾಯ ಸಂಹಿತ'ದ ಸೆಕ್ಷನ್ 104(1) ಮತ್ತು 104(2)ನ್ನು ಹಿಂತೆಗೆದುಕೊಳ್ಳಿ'

ಎ.ಐ.ಆರ್.ಟಿ.ಡಬ್ಲ್ಯುಎಫ್. ಆಗ್ರಹ

ಇದಕ್ಕೆ ಮೊದಲು ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ (ಎ.ಐ.ಆರ್.ಟಿ.ಡಬ್ಲ್ಯು.ಎಫ್)ವು ಭಾರತೀಯ ನ್ಯಾಯ ಸನ್ನಿಹಿತ 2023 ರ ಸೆಕ್ಷನ್ 104(1) & (2) ಅನ್ನು ತಕ್ಷಣವೇ ಜಾರಿಗೆ ಬರುವಂತೆ ಹಿಂಪಡೆಯಲು ಭಾರತ ಸರ್ಕಾರವನ್ನು ಒತ್ತಾಯಿಸಿದೆ.ಸರಕಾರ ಮೊಂಡುತನ ತೋರಿದರೆ ರಸ್ತೆ ಸಾರಿಗೆ ವಲಯ ಅದರಲ್ಲೂ ಚಾಲಕರು ರಾಷ್ಟ್ರಮಟ್ಟದಲ್ಲಿ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ ಎಂದೂ ಅದು ಎಚ್ಚರಿಸಿದೆ.

ಜನವರಿ 3 ರಂದು ಪ್ರತಿಭಟನಾ ಪ್ರದರ್ಶನಗಳನ್ನು ಆಯೋಜಿಸಲು ತನ್ನ ಎಲ್ಲಾ ಅಂಗಸಂಸ್ಥೆಗಳು ಮತ್ತು ಎಲ್ಲಾ ರಾಜ್ಯ ಘಟಕಗಳಿಗೆ ಮನವಿ ಮಾಡಿದ್ದ ಎ.ಐ.ಆರ್.ಟಿ.ಡಬ್ಲ್ಯು.ಎಫ್. ಹೋರಾಟಕ್ಕಿಳಿದ ಚಾಲಕರಿಗೆ ಬೆಂಬಲವನ್ನು ವ್ಯಕ್ತಪಡಿಸಿದೆ. ರಸ್ತೆ ಸಾರಿಗೆ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಒಕ್ಕೂಟಗಳು ಮತ್ತು ಇತರ ಎಲ್ಲಾ ಪಾಲುದಾರರು ಸಾಮಾನ್ಯ ವೇದಿಕೆಗೆ ಬರಬೇಕು ಮತ್ತು ಕಾಯಿದೆಯಲ್ಲಿನ ಕರಾಳ ನಿಬಂಧನೆಗಳ ವಿರುದ್ಧ ಹೋರಾಡಬೇಕು ಎಂದು ಅದು ಮನವಿ ಮಾಡಿದೆ.

ಮಾರಣಾಂತಿಕ ಅಪಘಾತಗಳಲ್ಲಿ ಚಾಲಕರಿಗೆ 10 ವರ್ಷಗಳ ವರೆಗೆ ಜೈಲು ಶಿಕ್ಷೆ ಮತ್ತು 10 ಲಕ್ಷ ರೂಪಾಯಿಗಳ ವರೆಗೆ ದಂಡ ವಿಧಿಸಲಾಗುತ್ತದೆ. ಅಪಘಾತವು ಅಪಘಾತವಾಗಿದೆ. ಅದು ಯಾವುದೇ ಉದ್ದೇಶದಿಂದ ಸಂಭವಿಸುವುದಿಲ್ಲ. ವಾಸ್ತವವಾಗಿ ಅಪಘಾತಗಳ ಬಗ್ಗೆ ಸ್ವತಃ ಚಾಲಕರು ತುಂಬಾ ಚಿಂತಿತರಾಗಿರುತ್ತಾರೆ. ಯಾವುದೇ ಅಪಘಾತ ಸಂಭವಿಸಬಾರದು ಎಂದು ಬಹುತೇಕ ಎಲ್ಲಾ ಚಾಲಕರು ಪ್ರತಿದಿನ ವಾಹನವನ್ನು ಪ್ರಾರಂಭಿಸುವ ಮೊದಲು ತಮ್ಮ ದೇವರನ್ನು ಪ್ರಾರ್ಥಿಸುತ್ತಾರೆ. ದೋಷಪೂರಿತ ರಸ್ತೆ ನಿರ್ಮಾಣಗಳು, ಹದಗೆಟ್ಟ ರಸ್ತೆಯ ಸ್ಥಿತಿ, ರಸ್ತೆ–ವಿಭಜಕಗಳ ಕೊರತೆ, ಹವಾಮಾನ ವೈಪರೀತ್ಯ ಇತ್ಯಾದಿಗಳಿಂದ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ. ಅಪಘಾತಗಳಿಗೆ ಕಾರಣವಾಗುವ ನೈಜ ಸಮಸ್ಯೆಗಳನ್ನು ಪರಿಹರಿಸದೆ, ಚಾಲಕರನ್ನು ಶಿಕ್ಷಿಸುವುದು ಫಲಿತಾಂಶವನ್ನು ನೀಡುವುದಿಲ್ಲ ಮತ್ತು ಇದು ಅಮಾನವೀಯವಾಗಿದೆ ಎಂದು ಎ.ಐ.ಆರ್.ಟಿ.ಡಬ್ಲ್ಯು.ಎಫ್ ಪ್ರಧಾನ ಕಾರ್ಯದರ್ಶಿ ಪ್ರಕಟಿಸಿರುವ ಹೇಳಿಕೆ ತಿಳಿಸಿದೆ.



ಗಾಜಾದಲ್ಲಿ ಮುಗಿಯದ ಯುದ್ಧ

ಪ್ರಕಾಶ್ ಕಾರತ್

ಗಾಜಾದಲ್ಲಿ ಮಿಲಿಟರಿ ಕಾರ್ಯಾಚರಣೆ 2024ರ ಉದ್ದಕ್ಕೂ ಮುಂದುವರಿಯಲಿದೆ ಎಂದು ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಘೋಷಿಸಿದೆ. ಹಮಾಸ್ ಸಂಘಟನೆಯನ್ನು ಸಂಪೂರ್ಣವಾಗಿ ನಾಶ ಮಾಡುವವರೆಗೆ ಗಾಜಾದಲ್ಲಿನ ಯುದ್ಧ ಮುಂದುವರಿಯಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಪದೇ ಪದೇ ಹೇಳಿದ್ದಾರೆ. ಈಜಿಪ್ಟ್ ಜೊತೆಗಿನ ಗಾಜಾ ಗಡಿಯನ್ನು ಇಸ್ರೇಲ್ ನಿಯಂತ್ರಿಸಲಿದೆ ಎಂದೂ ನೆತನ್ಯಾಹು ಹೇಳಿದ್ದಾರೆ. ಇಡೀ ಗಾಜಾ ಪಟ್ಟಿ ಮೇಲೆ ಇಸ್ರೇಲ್ ವಾಸ್ತವವಾಗಿ ನಿಯಂತ್ರಣ ಸಾಧಿಸಲಿದೆ ಎನ್ನುವುದು ಇದರ ಅರ್ಥವಾಗಿದೆ.

ಗಾಜಾ ಪಟ್ಟಿಯಲ್ಲಿ ಮೂರು ತಿಂಗಳ ಭೂ, ವಾಯು ಹಾಗೂ ನೌಕಾ ಪಡೆ ಕಾರ್ಯಾಚರಣೆ ನಂತರವೂ ಹಮಾಸ್‌ಅನ್ನು ನಿರ್ಮೂಲ ಮಾಡಲು ಇಸ್ರೇಲಿ ಸಶಸ್ತ್ರ ಪಡೆಗಳಿಗೆ ಇನ್ನೂ ಸಾಧ್ಯವಾಗಿಲ್ಲ. ಅಥವಾ ಹಮಾಸ್ ಹೋರಾಟಗಾರರ ಪ್ರತಿರೋಧವನ್ನು ಮುಗಿಸಲೂ ಸಾಧ್ಯವಾಗಿಲ್ಲ. ಹಮಾಸ್‌ಅನ್ನು ಮುಗಿಸಲು ಮಿಲಿಟರಿ ಶಕ್ತಿಗೆ ಸಾಧ್ಯವಾಗದು ಎನ್ನುವುದು ವಾಸ್ತವ ಸಂಗತಿ. ಒಂದು ವೇಳೆ ಮಿಲಿಟರಿ ನೆಲೆಯಲ್ಲಿ ಹಮಾಸ್‌ಅನ್ನು ಮುಗಿಸಿದರೂ ಅದು ಒಂದಲ್ಲ ಒಂದು ರೂಪದಲ್ಲಿ ಮತ್ತೆ ಪುಟಿದೆದ್ದು ಬರಲಿದೆ.

ಕಿರಿದಾದ ಭೂಪ್ರದೇಶವಾದ ಗಾಜಾ ಪಟ್ಟಿಯನ್ನು ಜನಾಂಗೀಯವಾಗಿ ಶುದ್ಧೀಕರಿಸಿ ಅದನ್ನು ವಾಸಯೋಗ್ಯವಲ್ಲದ್ದನ್ನಾಗಿ ಮಾಡುವುದು ಇಸ್ರೇಲ್‌ನ ಅಂತ್ಯಕಾಣದ ಯುದ್ಧದ ನಿಜವಾದ ಉದ್ದೇಶವಾಗಿದೆ. ಪ್ಯಾಲೆಸ್ತೀನಿ ಜನರನ್ನು ಕೊಂದು, ಹಸಿವಿನ ದವಡೆಗೆ ನೂಕಿ ಪ್ಯಾಲೆಸ್ತೀನಿ ಜನರನ್ನು ಗಾಜಾದಿಂದ ಹೊರದಬ್ಬುವುದು ಇಸ್ರೇಲ್ ಗುರಿಯಾಗಿದೆ. 1948ರಲ್ಲಿ ಆರಂಭವಾಗಿದ್ದ ನಕ್ಬಾ (ಮಹಾದುರಂತ) ಪ್ಯಾಲೆಸ್ತೀನಿ ಜನರ ಪಾಲಿಗೆ ಇನ್ನೂ ಮುಂದುವರಿದಿದೆ.

29,000 ಬಾಂಬ್

ಅಕ್ಟೋಬರ್ 7ರಿಂದೀಚೆಗೆ ಡಿಸೆಂಬರ್ ಮೂರನೇ ವಾರದವರೆಗೆ ಗಾಜಾ ಮೇಲೆ ಇಸ್ರೇಲ್ ಸುಮಾರು 29,000 ಬಾಂಬ್‌ಗಳನ್ನು ಎಸೆದಿದೆ. ಇರಾಕ್ ಯುದ್ಧದ ವೇಳೆ ಇರಾಕ್ ಮೇಲೆ ಅಮೆರಿಕ ಎಸೆದಿದ್ದ ಬಾಂಬ್‌ಗಳಿಗೆ ಇದನ್ನು ಹೋಲಿಸೋಣ. 2004 ಮತ್ತು 2010ರ ನಡುವೆ ಇರಾಕ್ ಮೇಲೆ ಅಮೆರಿಕ 3,678 ಬಾಂಬ್‌ಗಳಿಂದ ದಾಳಿ ಮಾಡಿತ್ತು. ಗಾಜಾದ ಶೇಕಡ 85ರಷ್ಟು ಜನಸಂಖ್ಯೆ ಮನೆ ಮಠ ಕಳೆದುಕೊಂಡು ಸ್ಥಳಾಂತರಗೊಂಡಿದ್ದಾರೆ. ವಿಶ್ವ ಬ್ಯಾಂಕ್ ಡಿಸೆಂಬರ್ 12ರಂದು ಪ್ರಕಟಿಸಿರುವ ವರದಿ ಪ್ರಕಾರ ಶೇಕಡ 77ರಷ್ಟು ಆರೋಗ್ಯಕಾಳಜಿ ವ್ಯವಸ್ಥೆಗಳು, ಪಾರ್ಕ್, ಕೋರ್ಟ್ ಮತ್ತು ಗ್ರಂಥಾಲಯಗಳ ಸಹಿತ ಶೇ. 72ರಷ್ಟು ಸಾರ್ವಜನಿಕ ಕಟ್ಟಡಗಳು, ಶೇ. 68 ಸಂವಹನ ಮೂಲಸೌಕರ್ಯ ಮತ್ತು ಗಾಜಾದ ಸಂಪೂರ್ಣ ಕೈಗಾರಿಕಾ ವಲಯ ಇಸ್ರೇಲ್ ಆಕ್ರಮಣದಿಂದ ಸಂಪೂರ್ಣವಾಗಿ ನಾಶವಾಗಿದೆ.

ಇಸ್ರೇಲ್‌ನ ನರಹತ್ಯಾ ಆಕ್ರಮಣದಿಂದಾಗಿ 88 ದಿನಗಳಲ್ಲಿ 22,000ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಅಂದರೆ ಪ್ರತಿದಿನ ಸರಾಸರಿ ಸುಮಾರು 250 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಅಲ್ಲದೆ ಪ್ರತಿದಿನ ಸುಮಾರು 90 ಮಕ್ಕಳು ಸಾಯುತ್ತಿರುವುದು ಇನ್ನೂ ಆಘಾತಕಾರಿ ವಿಚಾರವಾಗಿದೆ.

ಒಟ್ಟಿನಲ್ಲಿ, ಇಸ್ರೇಲ್‌ನ ಸಶಸ್ತ್ರ ಪಡೆಗಳು ಗಾಜಾದಿಂದ ಪ್ಯಾಲೆಸ್ತೀನಿ ಜನಸಂಖ್ಯೆಯನ್ನು ನಿರ್ಮೂಲ ಮಾಡುವ ಘೋಷಿತ ಉದ್ದೇಶದೊಂದಿಗೆ ನಡೆಸುತ್ತಿರುವ ನರಮೇಧದ ಹತ್ಯಾಕಾಂಡವನ್ನು ಜಗತ್ತು ಕಾಣುತ್ತಿದೆ. ಇದೊಂದು ಉತ್ಪ್ರೇಕ್ಷಿತ ಹೇಳಿಕೆಯಲ್ಲ. ಅತಿ–ಬಲಪಂಥೀಯ ಸರಕಾರದ ಅನೇಕ ಸಚಿವರು ಇದನ್ನು ಬಹಿರಂಗವಾಗಿಯೇ ಹೇಳಿದ್ದಾರೆ. ಪ್ಯಾಲೆಸ್ತೀನಿ ನಾಗರಿಕರು ವಲಸೆ ಹೋಗುವುದೇ ಸಂಘರ್ಷಕ್ಕೆ ಪರಿಹಾರ ಎಂದು ಯಹೂದಿ ಉಗ್ರವಾದಿ ರಾಷ್ಟ್ರೀಯ ಭದ್ರತಾ ಸಚಿವ ಬೆನ್–ಗ್ವಿರ್ ಮತ್ತು ಹಣಕಾಸು ಸಚಿವ ಸ್ಮಾಟ್ರಿಚ್ ಕರೆ ನೀಡಿದ್ದಾರೆ. 'ಗಾಜಾದ ನಿವಾಸಿಗಳು ವಲಸೆ ಹೋಗುವುದಕ್ಕೆ ಪ್ರೋತ್ಸಾಹ ನೀಡಲು ಗಮನ ಕೇಂದ್ರೀಕರಿಸುವುದಕ್ಕೆ ಈ ಯುದ್ಧ ಒಂದು ಅವಕಾಶ ಒದಗಿಸಿದೆ' ಎಂದು ಸ್ಮಾಟ್ರಿಚ್ ಹೇಳಿದ್ದಾರೆ.

> **ಕೃಷಿ ಚಟುವಟಿಕೆಗಳನ್ನು ನಡೆಸದಂತೆ ಪ್ಯಾಲೆಸ್ತೀನಿ ರೈತರನ್ನು ತಡೆಯಲಾಗುತ್ತಿದೆ. ಆಲಿವ್ ಮರಗಳ ಕಟಾವು ಮಾಡದಂತೆ ತಡೆಯಲಾಗಿದೆ. ಅವರ ಭೂಮಿ ಮತ್ತು ಮನೆಗಳನ್ನು ವಶಪಡಿಸಿಕೊಳ್ಳಲಾಗಿದೆ.**

ಒಂದೆಡೆ, ಗಾಜಾ ನಿವಾಸಿಗಳು ಸ್ವಯಂಪ್ರೇರಣೆಯಿಂದ ವಲಸೆ ಹೋಗಲು ಪ್ರೋತ್ಸಾಹ ನೀಡುವ ಬಗ್ಗೆ ಮತ್ತು 'ವಸಾಹತುಗಳನ್ನು ಸ್ಥಾಪಿಸುವುದು ಸೇರಿದಂತೆ ಗಾಜಾ ಪಟ್ಟಿಯ ಇಡೀ ಪ್ರದೇಶವನ್ನು ಕಾಯಂ ಆಗಿ ಇಸ್ರೇಲ್ ನಿಯಂತ್ರಣಕ್ಕೆ ತೆಗೆದುಕೊಳ್ಳುವ' ವಿಚಾರವನ್ನು ಸ್ಮಾಟ್ರಿಚ್ ಹೇಳುತ್ತಿದ್ದರೆ ಇನ್ನೊಂದೆಡೆ ಪ್ಯಾಲೆಸ್ತೀನಿಯರಿಗೆ ಆಶ್ರಯ ಪಡೆಯಲು ನೆರೆಯ ಈಜಿಪ್ಟ್‌ನಲ್ಲಿರುವ ಉತ್ತರ ಸಿನಾಯ್ ಹೇಗೆ ಸೂಕ್ತ ಜಾಗವಾಗಲಿದೆ ಎಂಬ ಚರ್ಚೆಯೊಂದು ಇಸ್ರೇಲಿ ಮಾಧ್ಯಮದಲ್ಲಿ ಚರ್ಚೆ ನಡೆಯುತ್ತಿದೆ.

ನೆತನ್ಯಾಹುರ ಅತಿ–ಬಲಪಂಥೀಯ ಸರಕಾರವು 2023 ಅಕ್ಟೋಬರ್ 7ರಂದು ನಡೆದ ಹಮಾಸ್ ದಾಳಿಯನ್ನು ಪ್ಯಾಲೆಸ್ತೀನ್–ವಿರೋಧಿ ವ್ಯಾಪಕ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದೆ. ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸಲೇಂನಲ್ಲಿ ಪ್ಯಾಲೆಸ್ತೀನಿ ಜನರ ಮೇಲೆ ಹೆಚ್ಚಿದ ದಾಳಿಯೇ ಇದಕ್ಕೆ ಪುರಾವೆಯಾಗಿದೆ. ಇಸ್ರೇಲಿ ಸೇನೆಯ ಆಕ್ರಮಣ ಮತ್ತು ವಸಾಹತುಗಾರರಿಂದ ನಡೆದ ದಾಳಿಗಳಿಂದ ಪಶ್ಚಿಮ ದಂಡೆಯಲ್ಲಿ 300ಕ್ಕೂ ಅಧಿಕ ಪ್ಯಾಲೆಸ್ತೀನಿಯರು ಹತರಾಗಿದ್ದಾರೆ. 4,700ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ ಅಥವಾ ವಶಕ್ಕೆ ಪಡೆಯಲಾಗಿದೆ.

> **ಕಿರಿದಾದ ಭೂಪ್ರದೇಶವಾದ ಗಾಜಾ ಪಟ್ಟಿಯನ್ನು ಜನಾಂಗೀಯವಾಗಿ ಶುದ್ಧೀಕರಿಸಿ ಅದನ್ನು ವಾಸಯೋಗ್ಯವಲ್ಲದ್ದನ್ನಾಗಿ ಮಾಡುವುದು ಇಸ್ರೇಲ್‌ನ ಅಂತ್ಯಕಾಣದ ಯುದ್ಧದ ನಿಜವಾದ ಉದ್ದೇಶವಾಗಿದೆ. ಪ್ಯಾಲೆಸ್ತೀನಿ ಜನರನ್ನು ಕೊಂದು, ಹಸಿವಿನ ದವಡೆಗೆ ನೂಕಿ ಪ್ಯಾಲೆಸ್ತೀನಿ ಜನರನ್ನು ಗಾಜಾದಿಂದ ಹೊರದಬ್ಬುವುದು ಇಸ್ರೇಲ್ ಗುರಿಯಾಗಿದೆ.**

ಕೃಷಿ ಚಟುವಟಿಕೆಗಳನ್ನು ನಡೆಸದಂತೆ ಪ್ಯಾಲೆಸ್ತೀನಿ ರೈತರನ್ನು ತಡೆಯಲಾಗುತ್ತಿದೆ. ಆಲಿವ್ ಮರಗಳ ಕಟಾವು ಮಾಡದಂತೆ ತಡೆಯಲಾಗಿದೆ. ಅವರ ಭೂಮಿ ಮತ್ತು ಮನೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಪಶ್ಚಿಮ ದಂಡೆಯಾದ್ಯಂತ ಇರುವ ಅಕ್ರಮ ವಸಾಹತುಗಳಲ್ಲಿ ಏಳು ಲಕ್ಷಕ್ಕೂ ಹೆಚ್ಚು ಜನರು ನೆಲೆಸಿದ್ದು ಪ್ಯಾಲೆಸ್ತೀನಿಯರು ವರ್ಣಭೇದ–ರೀತಿಯ ಬಂಟುಸ್ತಾನ್‌ಗಳಲ್ಲಿ ವಾಸಿಸುವಂತೆ ಬಲವಂತಪಡಿಸಲಾಗಿದೆ.

ಪ್ರಭುತ್ವ ಪ್ರಾಯೋಜಿತ ನರಮೇಧ

ಅಮೆರಿಕದ ಸಂಪೂರ್ಣ ಬೆಂಬಲದೊಂದಿಗೆ ಪ್ರಭುತ್ವ ಪ್ರಾಯೋಜಿತ ನರಮೇಧ ಮತ್ತು ಜನಾಂಗೀಯ ನಾಶ (ಶುದ್ಧತೆ) ನಡೆಸಲು ಇಸ್ರೇಲ್‌ಗೆ ಸಾಧ್ಯವಾಗಿದೆ. ತಕ್ಷಣವೇ ಯುದ್ಧವಿರಾಮ ಘೋಷಿಸುವಂತೆ ಆಗ್ರಹಿಸುವ ಗೊತ್ತುವಳಿಗೆ 150 ದೇಶಗಳು ವಿಶ್ವ ಸಂಸ್ಥೆ ಮಹಾಧಿವೇಶನದಲ್ಲಿ ಮತ ನೀಡಿದರೂ ಆ ನಿಟ್ಟಿನಲ್ಲಿ ಯಾವುದೇ ಕ್ರಮ ನಡೆದಿಲ್ಲ. ಭದ್ರತಾ ಮಂಡಳಿಯಲ್ಲಿ ಇಂಥ ಎಲ್ಲ ನಿರ್ಣಯಗಳಿಗೆ ಮೆರಿಕ ವಿಟೋ ಚಲಾಯಿಸಿದ್ದೇ ಇದಕ್ಕೆ ಕಾರಣವಾಗಿದೆ. ಗಾಜಾದಲ್ಲಿ ನಾಗರಿಕ ಸಾವು–ನೋವನ್ನು ಕಡಿಮೆ ಮಾಡಬೇಕೆಂದು ಅಮೆರಿಕ ಹೇಳುತ್ತಿರುವುದು ಕೇವಲ ಬೂಟಾಟಿಕೆಯಾಗಿದೆ. ಯಾಕೆಂದರೆ ಹಾಗೆ ಹೇಳುತ್ತಲೇ ಅದು ಸಾಮೂಹಿಕ ಹತ್ಯೆಗಳಿಗೆ ನೆರವಾಗಲು ಇಸ್ರೇಲ್‌ಗೆ ಮಾರಕ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ಪೂರೈಸುತ್ತಿದೆ.

ಇಸ್ರೇಲ್ ಮತ್ತು ಉಕ್ರೇನ್‌ಗೆ 106 ದಶಲಕ್ಷ ಡಾಲರ್ ನೆರವಿನ ಪ್ಯಾಕೇಜ್ ಪ್ರಸ್ತಾಪನೆ ಅಮೆರಿಕದ ಕಾಂಗ್ರೆಸ್ (ಸಂಸತ್ತು) ತಡೆಹಿಡಿದಿದ್ದಾಗ ಜೋ ಬಿಡೆನ್ ಆಡಳಿತ ಡಿಸೆಂಬರ್‌ನಲ್ಲಿ ಎರಡು ಸಲ ಇಸ್ರೇಲ್‌ಗೆ ತುರ್ತು ಶಸ್ತ್ರಾಸ್ತ್ರ ಮಾರಾಟಕ್ಕೆ ಅನುಮೋದನೆ ನೀಡಿತು. ಮೊದಲ ಸಲ ಅದು 106 ದಶಲಕ್ಷ ಡಾಲರ್ ಮೌಲ್ಯದ 14,000 ಸುತ್ತಿನ ಟ್ಯಾಂಕ್ ಮದ್ದುಗುಂಡು ಪೂರೈಸಲು ಅನುಮೋದಿಸಿತು. ಎರಡನೇ ಬಾರಿ, 147.5 ದಶಲಕ್ಷ ಡಾಲರ್ ಮೊತ್ತದ ಸಲಕರಣೆಗಳನ್ನು ಮಾರಲು ಒಪ್ಪಿತು– ಅದರಲ್ಲಿ ಫ್ಯೂಸ್, ಚಾರ್ಜ್‌ಗಳು ಮತ್ತು ಪ್ರೈಮರ್‌ಗಳು ಸೇರಿದ್ದವು. 150 ಮಿಲಿಮೀಟರ್ ಶೆಲ್‌ಗಳನ್ನು ತಯಾರಿಸಲು ಈ ಸಾಧನ ಸಲಕರಣೆಗಳು ನೆರವಾಗುತ್ತವೆ. ವಿಶ್ವ ಸಂಸ್ಥೆ ನಡೆಸುವ ಶಾಲೆಗಳು ಮತ್ತು ಆಸ್ಪತ್ರೆಗಳಲ್ಲಿ ಆಶ್ರಯ ಪಡೆದ ಮಹಿಳೆಯರು, ಮಕ್ಕಳು ಮತ್ತು ಆರೋಗ್ಯ ಕಾರ್ಯಕರ್ತರನ್ನು ಕೊಲ್ಲಲು ಇಸ್ರೇಲ್ ಈ ಶೆಲ್‌ಗಳನ್ನು ಬಳಸುತ್ತಿದೆ. ಗಾಜಾದಲ್ಲಿ ನಡೆಯುತ್ತಿರುವ ಮಹಾ ನರಮೇಧದಲ್ಲಿ ಅಮೆರಿಕ ಸಂಪೂರ್ಣವಾಗಿ ಶಾಮೀಲಾಗಿದೆ.

ಇಸ್ರೇಲ್ ಮತ್ತು ಅಮೆರಿಕ ಸಾಮ್ರಾಜ್ಯಶಾಹಿಯ ನಡುವಿನ ಸಂಬಂಧವನ್ನು ಗ್ರಹಿಸಿ ಕೊಳ್ಳದಿದ್ದರೆ ಪ್ಯಾಲೆಸ್ತೀನಿಯರ ಜನಾಂಗೀಯ ನಾಶದ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಒಂದು ನೆಲೆನಿಂತ–ವಸಾಹತುಶಾಹಿ (ಸೆಟ್ಲರ್–ಕಲೊನಿಯಲ್) ಪ್ರಭುತ್ವವಾದ ಇಸ್ರೇಲ್ ಅಮೆರಿಕ ಸಾಮ್ರಾಜ್ಯಶಾಹಿಯ ಪೂರ್ಣ ಬೆಂಬಲದ ಕಾರಣದಿಂದ ದಶಕಗಳ ಕಾಲದಿಂದ ಉಳಿದುಕೊಂಡಿದೆ ಹಾಗೂ ಬಲವಾಗುತ್ತಿದೆ. ಇಸ್ರೇಲ್‌ಗೆ ನೀಡಿದಂತೆ ಬೇರೆ ಯಾವುದೇ ಪ್ರಭುತ್ವಕ್ಕೂ ಅಮೆರಿಕ ಈ ಮಟ್ಟದಲ್ಲಿ ಹಣಕಾಸಿನ ನೆರವನ್ನು ಒದಗಿಸಿಲ್ಲ ಹಾಗೂ ಶಸ್ತ್ರಾಸ್ತ್ರಗಳೊಂದಿಗೆ ಸಜ್ಜುಗೊಳಿಸಿಲ್ಲ.

ಪ್ಯಾಲೆಸ್ತೀನಿಯರಿಗೆ ದ್ರೋಹ

ಅಮೆರಿಕದ ಮಧ್ಯಪ್ರವೇಶದ ಕಾರಣದಿಂದಾಗಿ ಈಜಿಪ್ಟ್‌ನಿಂದ ಆರಂಭಿಸಿ ಅರಬ್ ದೇಶಗಳು ಒಂದೊಂದಾಗಿಯೇ ಇಸ್ರೇಲ್‌ನೊಂದಿಗೆ ಶಾಂತಿ ಹಾಗೂ ಸಹಯೋಗ ಏರ್ಪಡಿಸಿಕೊಂಡವು. ಆ ಮೂಲಕ ಪ್ಯಾಲೆಸ್ತೀನಿಯರ ಉದ್ದೇಶಕ್ಕೆ ದ್ರೋಹ ಬಗೆದವು.

ಜಾತ್ಯತೀತ ಅರಬ್ ರಾಷ್ಟ್ರೀಯವಾದಿ ಶಕ್ತಿಗಳನ್ನು ಬಗ್ಗುಬಡಿಯಲು ಹಾಗೂ ಇಸ್ರೇಲ್‌ನೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಬೆಳೆಸಲು ಪ್ರತಿಗಾಮಿ ಸಾಮ್ರಾಜ್ಯಗಳು ಮತ್ತು ಶೇಖರನ್ನು ಅಮೆರಿಕ ಪೋಷಿಸಿದೆ. ಅಬ್ರಹಾಂ ಒಡಂಬಡಿಕೆ ಅದಕ್ಕೆ ಇತ್ತೀಚಿನ ಉದಾಹರಣೆಯಾಗಿದೆ. ಆದರೆ, ಅರಬ್ ದೇಶಗಳು ಪ್ಯಾಲೆಸ್ತೀನಿ ಜನರ ಕೈ ಬಿಟ್ಟರೂ ಅರಬ್ ಜನಸಮುದಾಯ ಪ್ಯಾಲೆಸ್ತೀನ್‌ಗೆ ತಮ್ಮ ಬೆಂಬಲ ಮತ್ತು ಸೌಹಾರ್ದವನ್ನು ಯಾವತ್ತೂ ಬಿಟ್ಟುಕೊಟ್ಟಿಲ್ಲ. ಇಡೀ ವಲಯದಲ್ಲಿ ಗಾಜಾ ಜನತೆಯ ಪರವಾಗಿ ಎದ್ದಿರುವ ಅರಬ್ ಜಗತ್ತಿನ ಜನರ ಬೆಂಬಲದ ಅಲೆಯು ಅಮೆರಿಕ–ಇಸ್ರೇಲ್ ಮೈತ್ರಿಕೂಟ ಏನೇ ಮಾಡಲಿ, ಪ್ಯಾಲೆಸ್ತೀನಿ ಜನರ ಹೋರಾಟವನ್ನು ಎಂದಿಗೂ ಪ್ರತ್ಯೇಕಿಸಲಾಗುವುದಿಲ್ಲ ಹಾಗೂ ದಮನಿಸಲು ಆಗುವುದಿಲ್ಲ ಎನ್ನುವುದನ್ನು ತೋರಿಸಿದೆ. ಇಸ್ರೇಲ್ ಪಡೆಗಳು ಮತ್ತು ಲೆಬನಾನ್ ಗಡಿಯಲ್ಲಿ ಹೆಜ್ಬುಲ್ಲಾ ಮತ್ತು ಕೆಂಪು ಸಮುದ್ರದಲ್ಲಿ ವಾಣಿಜ್ಯ ನೌಕೆಗಳ ಮೇಲೆ ಹೌತಿ ದಾಳಿ–ಇವೆಲ್ಲವೂ ಪ್ರಾದೇಶಿಕ ಸಂಘರ್ಷ ವ್ಯಾಪಕವಾಗುತ್ತಿರುವ ಸೂಚನೆಯಾಗಿದ್ದು ಅದರ ಪರಿಣಾಮವು ಈಗಿರುವ ಶಕ್ತಿಗಳ ಭೌಗೋಳಿಕ–ರಾಜಕೀಯ ಸಮತೋಲನವನ್ನು ಬುಡಮೇಲು ಮಾಡುವ ಸಾಧ್ಯತೆಯಿದೆ.

ಅನು: ವಿಶ್ವ

ಕನಸು ನನಸಾಗಿಸಿದ ಸಾವಿತ್ರಿಬಾಯಿ ಜ್ಯೋತಿರಾವ್ ಪುಲೆ

ಸಾವಿತ್ರಿಬಾಯಿ ಪುಲೆ ಮಹಿಳಾ ಶಿಕ್ಷಣಕ್ಕೆ ಅಪಾರವಾಗಿ ಇಂಬು ನೀಡಿದವರು. ಹೆಣ್ಣುಮಕ್ಕಳು ಶಿಕ್ಷಣ ಪಡೆಯಬೇಕೆಂಬ ಕನಸನ್ನು 19ನೇ ಶತಮಾನದ ಪ್ರಾರಂಭದಲ್ಲೇ ಕಂಡು ಈ ಧ್ಯೇಯೋದ್ದೇಶಕ್ಕಾಗಿ ತಮ್ಮ ಪತಿ ಜ್ಯೋತಿಬಾ ಫುಲೆ ಅವರೊಂದಿಗೆ ನಿರಂತರ ಶ್ರಮಿಸಿದ ಮಹಾನ್ ತಾಯಿ ಈಕೆ.

"ನಿಜವಾಗಿ ನೋಡಿದರೆ ಈ ಅಭಿನಂದನೆ ನಿನಗೆ ಸಲ್ಲತಕ್ಕದ್ದು. ನಾನು ಕೇವಲ ಬೇರೆ ಬೇರೆ ಕಡೆ ಶಾಲೆಗಳನ್ನು ಪ್ರಾರಂಭಿಸಲು ಕಾರಣಕರ್ತ. ಆದರೆ ನೀನು ಮಾತ್ರ ಶಾಲೆಗಳ ಬೆಳವಣಿಗೆಯ ಹಾದಿಯಲ್ಲಿ ಎದುರಾದ ಎಲ್ಲ ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸಿರುವೆ. ಅದರಿಂದಾಗಿ ಬಂದಂತಹ ಬಹುಪರಿಯ ದುಃಖಗಳನ್ನು ನುಂಗಿಕೊಳ್ಳುತ್ತಾ ಪ್ರತಿಯೊಂದು ಶಾಲೆಗೂ ಹೊಸ ರೂಪ ಮತ್ತು ಚೈತನ್ಯವನ್ನು ತುಂಬಿರುವೆ. ಅದಕ್ಕಾಗಿ ಇದೋ ನನ್ನ ಮನಃಪೂರ್ವಕ ಅಭಿನಂದನೆಗಳು" ಎನ್ನುತ್ತಾ ಸ್ವಇಚ್ಛೆಯಿಂದ ಶಿಕ್ಷಣ ಕೇಂದ್ರಗಳನ್ನು ತೆರೆದು ವಿದ್ಯಾ ದಾನ ಮಾಡಿದ ತಮಗೆ, ಬ್ರಿಟಿಷ್ ಸರ್ಕಾರ ಹೊದಿಸಿ ಗೌರವಿಸಿದ ಶಾಲನ್ನು ಮಹಾತ್ಮ ಜ್ಯೋತಿಬಾ ಫುಲೆ ಅವರು ತಮ್ಮ ಮಡದಿಗೆ ನೀಡಿದಾಗ, ಇಡೀ ಸಭೆಗೆ ಸಭೆಯೇ ಎದ್ದು ನಿಂತು ಕರತಾಡನದೊಂದಿಗೆ ಅವರಿಗೆ ಗೌರವ ಸೂಚಿಸಿತು. ಹೀಗೆ ಪತಿಯಿಂದ ಸಾಮಾಜಿಕವಾಗಿ ಪ್ರಶಂಸೆ ಮತ್ತು ಗೌರವವನ್ನು ಪಡೆದವರು ಸಾವಿತ್ರಿಬಾಯಿ ಫುಲೆ.



9ರ ವಯಸ್ಸಿನಲ್ಲೇ ಮದುವೆ

ಸಾವಿತ್ರಿಬಾಯಿ ಅವರು ಮಹಾರಾಷ್ಟ್ರದ ಸತಾರ ಜಿಲ್ಲೆಯ ನಾಯಗಾಂವ ಎಂಬ ಹಳ್ಳಿಯಲ್ಲಿ 1831ರ ಜನವರಿ 3ರಂದು ತಳಸಮುದಾಯದ ಕುಟುಂಬವೊಂದರಲ್ಲಿ ಜನಿಸಿದರು. ಸಾವಿತ್ರಿಬಾಯಿಗೆ 9 ವರ್ಷವಾಗಿದ್ದಾಗಲೇ ಜ್ಯೋತಿಬಾ ಅವರೊಂದಿಗೆ ವಿವಾಹವಾಯಿತು. ಮದುವೆಯ ನಂತರ ಅವರು ಪುಣೆಗೆ ಬಂದರು. ಹಸುಗೂಸಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡಿದ್ದ ಜ್ಯೋತಿಬಾ ಫುಲೆ ಅವರ ವಿದ್ಯಾಭ್ಯಾಸ ಕುಂಟುತ್ತಾ ಸಾಗಿತ್ತು. ತಾಯಿಯ ದೂರದ ಸಂಬಂಧಿಯಾಗಿದ್ದ ಬಾಲವಿಧವೆ ಸಗುಣಾಬಾಯಿ ಇವರ ಸಾಕುತಾಯಿ.

ಸಗುಣಾ ಅವರಿಗೆ ಶಿಕ್ಷಣದ ಬಗ್ಗೆ ಅಪರಿಮಿತ ಆಸಕ್ತಿ ಇತ್ತು. ಇವರು ಸಂಪ್ರದಾಯ, ಕಟ್ಟುಕಟ್ಟಲೆಗಳ ಕುರಿತು ಆಳದಲ್ಲಿ ಪ್ರತಿಭಟನಾತ್ಮಕ ಮನೋಭಾವ ಹೊಂದಿದ್ದರು. ಹೀಗೆಂದೇ ಸುಗುಣಾ ಅವರು ಸಾವಿತ್ರಿಬಾಯಿ ಮತ್ತು ತಮಗೆ ಪಾಠವನ್ನು ಹೇಳಿಕೊಡಲು ಜ್ಯೋತಿಬಾ ಅವರನ್ನೇ ಒಪ್ಪಿಸಿದರು! ಕಠಿಣ ಪರಿಶ್ರಮ ಹಾಗೂ ಶ್ರದ್ಧೆಯಿಂದ ವಿದ್ಯೆಯನ್ನು ದಕ್ಕಿಸಿಕೊಂಡ ಈ ಇಬ್ಬರು ಹೆಣ್ಣುಮಕ್ಕಳು ಜ್ಯೋತಿಬಾ ಅವರೊಡಗೂಡಿ, ಬಹುಜನರಿಗೆ ಅಕ್ಷರವನ್ನು ನಿರಾಕರಿಸಿದ್ದ ರೋಗಗ್ರಸ್ತ ಸಮಾಜವನ್ನು ಎದುರು ಹಾಕಿಕೊಂಡು ಹೆಣ್ಣುಮಕ್ಕಳಿಗೆ ಶಿಕ್ಷಣದ ಬಾಗಿಲನ್ನು ತೆರೆದರು!

ಮೊದಲ ಮಹಿಳಾ ಶಿಕ್ಷಕಿ

1847ರಲ್ಲಿ ನಾರ್ಮನ್ ಶಾಲೆಯಲ್ಲಿ ಕೇವಲ 17 ವರ್ಷದೊಳಗೆ ಶಿಕ್ಷಕಿ ತರಬೇತಿಯನ್ನು ಪಡೆದ ಸಾವಿತ್ರಿಬಾಯಿ ಅವರು ಮಹಾರಾಷ್ಟ್ರದಲ್ಲಿ ತರಬೇತಾದ ಮೊದಲ ಮಹಿಳಾ ಶಿಕ್ಷಕಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. 1848ರಲ್ಲಿ ಜ್ಯೋತಿಬಾ ಅವರು ಪುಣೆಯಲ್ಲಿ ತೆರೆದ ಮೊಟ್ಟಮೊದಲ ಹೆಣ್ಣುಮಕ್ಕಳ ಶಾಲೆಯಲ್ಲಿ (ಭಾರತದಲ್ಲಿ ಎರಡನೆಯದು) ಉಪಾಧ್ಯಾಯಿನಿಯಾಗಿ ಈಕೆ ಕೆಲಸ ಪ್ರಾರಂಭಿಸಿದರು. 9 ಜನ ಹೆಣ್ಣುಮಕ್ಕಳಿಂದ ಪ್ರಾರಂಭವಾದ ಶಾಲೆ, ಮುಂದೆ ಅನೇಕ ಬಾಲೆಯರಿಗೆ ವಿದ್ಯಾದಾನದ ಕೇಂದ್ರವಾಯ್ತು. ಇದಕ್ಕಾಗಿ ಸಾವಿತ್ರಿಬಾಯಿ ಅವರು ಸಮಾಜದಲ್ಲಿ ಎದುರಿಸಿದ ಕಷ್ಟ ಅಷ್ಟಿಷ್ಟಲ್ಲ. ಸಾವಿತ್ರಿಬಾಯಿಯವರು ಶಾಲೆಗೆ ಹೋಗಿ ಬರುವ ದಾರಿಯಲ್ಲಿ ಅವರನ್ನು ಕೆಟ್ಟ ಶಬ್ದಗಳಿಂದ ನಿಂದಿಸಲಾಯಿತು. ಕಲ್ಲು, ಕೆಸರು, ಸಗಣಿಗಳನ್ನೆಸೆದು ಹೆದರಿಸಿ, ಕೊಲೆ ಬೆದರಿಕೆ ಹಾಕಿದರು. ಯಾವುದಕ್ಕೂ ಬಗ್ಗದಿದ್ದಾಗ, ಇವರ ಶಾಲೆಗೆ ಸೇರಿದ್ದ ಹೆಣ್ಣುಮಕ್ಕಳಿಗೆ ಜಾತಿ ಹಾಗೂ ಸಮಾಜ ಬಹಿಷ್ಕಾರದ ಬೆದರಿಕೆಯನ್ನು ಹಾಕತೊಡಗಿದರು. ಸಾವಿತ್ರಿಬಾಯಿ ಅವರು ಮನೆ ಮನೆಗಳಿಗೆ ಹೋಗಿ ಪೋಷಕರ ಮನವೊಲಿಸಿ, ಶಿಕ್ಷಣದ ಔನ್ನತ್ಯವನ್ನು ತಿಳಿ ಹೇಳಿ ಮಕ್ಕಳನ್ನು ಮರಳಿ ಶಾಲೆಗೆ ಕರೆತಂದು ಶಿಕ್ಷಣ ನೀಡಿದರು.

ತವರಿನಿಂದ ಬಹಿಷ್ಕಾರ

ಇದೇ ಕಾರಣಕ್ಕೆ ಜ್ಯೋತಿಬಾ ತಮ್ಮ ಸ್ವಂತ ಮನೆ ತೊರೆದು ಹೊರಬೀಳಬೇಕಾದ ಮತ್ತು ಸಾವಿತ್ರಿಬಾಯಿಯವರು ತವರಿನಿಂದ ಬಹಿಷ್ಕಾರಕ್ಕೆ ಒಳಗಾಗಬೇಕಾದ ಪ್ರಸಂಗಗಳು ಎದುರಾದವು. ಇದನ್ನೆಲ್ಲಾ ಕೆಲವು ಪ್ರಗತಿಪರ

ಪುಟ 10 ಕ್ಕೆ

ಭಾರತದಲ್ಲಿ ಅಕ್ಷರ ಶಕೆ ಶುರುಮಾಡಿದ 'ಶಿಕ್ಷಣ ಮಾತೆ' ಸಾವಿತ್ರಿಬಾಯಿ ಫುಲೆ

ಸಾವಿತ್ರಿಬಾಯಿ ಫುಲೆಯವರು ನಮ್ಮ ದೇಶ ಕಂಡ ಒಬ್ಬ ಧೀಮಂತ ಮಹಿಳೆ. ದೀನ ದಲಿತರಿಗಾಗಿ, ಮೊಟ್ಟ ಮೊದಲಿಗೆ ಶಾಲೆ ತೆರೆದ ಅಕ್ಷರಮಾತೆ. ಅವರು ಈ ದೇಶದ ಪ್ರಥಮ ಶಿಕ್ಷಕಿ, ಪ್ರಥಮ ಸಮಾಜ ಸುಧಾರಕಿ, ಪ್ರಥಮ ವೈಚಾರಿಕ ಕವಯಿತ್ರಿ. ಮಹಿಳಾ ಶಿಕ್ಷಣಕ್ಕೆ ಅಪಾರವಾಗಿ ಇಂಬು ನೀಡಿದ ಸಾವಿತ್ರಿಬಾಯಿ ಫುಲೆಯವರ ಜನ್ಮ ದಿನದ ವಿಶೇಷ ಲೇಖನ.

ಅರುಣ್ ಜೋಳದ ಕೂಡ್ಲಿಗಿ

ಸಾವಿತ್ರಿಬಾಯಿ ಫುಲೆಯವರು ನಮ್ಮ ದೇಶ ಕಂಡ ಒಬ್ಬ ಧೀಮಂತ ಮಹಿಳೆ. ದೀನ ದಲಿತರಿಗಾಗಿ, ಮೊಟ್ಟ ಮೊದಲಿಗೆ ಶಾಲೆ ತೆರೆದ ಅಕ್ಷರಮಾತೆ. ಅವರು ಈ ದೇಶದ ಪ್ರಥಮ ಶಿಕ್ಷಕಿ, ಪ್ರಥಮ ಸಮಾಜ ಸುಧಾರಕಿ, ಪ್ರಥಮ ವೈಚಾರಿಕ ಕವಯಿತ್ರಿ. ಮಹಿಳಾ ಶಿಕ್ಷಣಕ್ಕೆ ಅಪಾರವಾಗಿ ಇಂಬು ನೀಡಿದವರು. ಡಿಸೆಂಬರ್ 3 ರಂದು ಸಾವಿತ್ರಿ ಬಾಫುಲೆಯವರ ಜನ್ಮ ದಿನ. ಈ ಸಂದರ್ಭದಲ್ಲಿ ಮೂರು ವಿಶೇಷ ಲೇಖನಗಳು ಇಲ್ಲಿವೆ.

ಭಾರತ 18 ನೇ ಶತಮಾನದ ಬ್ರಿಟಿಷ್ ಆಡಳಿತದ ಕಾಲಘಟ್ಟವಾಗಿತ್ತು. ಸತಿ ಸಹಗಮನ ಪದ್ಧತಿ ಜೀವಂತವಾಗಿತ್ತು. ಬ್ರಾಹ್ಮಣರನ್ನು ಹೊರತು ಪಡಿಸಿ ಬೇರೆ ಯಾರೂ ಕೂಡ ಶಿಕ್ಷಣ ಕಲಿಯಲು ಅವಕಾಶವಿಲ್ಲದ ಕಾಲಘಟ್ಟದಲ್ಲಿ, ಗೋವಿಂದರಾವ್ ತನ್ನ ಅಂಗಡಿಯ ಲೆಕ್ಕ ಬರೆಯುತ್ತಿದ್ದ ಬ್ರಾಹ್ಮಣ ಲೆಕ್ಕಿಗನ ಮಾತು ಕೇಳಿ, ಮರಾಠಿ ಓದುತ್ತಿದ್ದ ಮಗ ಏಳನೇ ವಯಸ್ಸಿನ ಜ್ಯೋತಿಬಾಫುಲೆಯನ್ನು ಶಾಲೆ ಬಿಡಿಸುತ್ತಾರೆ.

ಮುನ್ಷಿ ಗಫರ್ ಖಾನ್ ಎನ್ನುವ ಪರ್ಷಿಯನ್ ಶಿಕ್ಷಕರಿದ್ದರು. ಇವರಿಗೂ ಗೋವಿಂದರಾವ್ ರವರಿಗೂ ಇನ್ನಿಲ್ಲದ ಸ್ನೇಹ. ಇದನ್ನು ಅರಿತ ಸುಗುಣಬಾಯಿ, ಗಫರ್ ಖಾನ್ ಅವರಲ್ಲಿ ಬಂದು ಜ್ಯೋತಿಭಾ ಅವರ ಶಿಕ್ಷಣ ಮುಂದುವರಿಸುವಂತೆಯೂ, ಇಂಗ್ಲೀಷ್ ಶಿಕ್ಷಣ ಕಲಿಸುವಂತೆಯೂ ಗೋವಿಂದರಾವ್ ಅವರ ಮನವೊಲಿಸಲು ಕೇಳಿಕೊಳ್ಳುತ್ತಾಳೆ. ಗಫರ್ ಖಾನ್ ಕೂಡ ಗೋವಿಂದರಾವ್ ಅವರನ್ನು ಮನವೊಲಿಸಿ ಯಶಸ್ವಿಯಾಗುತ್ತಾರೆ. 1847 ರಲ್ಲಿ 9 ವರ್ಷದ ಸಾವಿತ್ರಿಯವರನ್ನು ಜ್ಯೋತಿ ಬಾಫುಲೆ ಮದುವೆಯಾಗುತ್ತಾರೆ. 1848 ರಲ್ಲಿ ಜೋತಿಭಾ ಇಂಗ್ಲಿಷ್ ಎಜುಕೇಷನ್ ಶುರುಮಾಡುತ್ತಾರೆ. ಆ ಕಾಲಘಟ್ಟ ಪ್ರಾನ್ಸ್ ಕ್ರಾಂತಿ(1799) ಆಗಿ 50 ವರ್ಷವಾಗಿತ್ತು. ಪಠ್ಯದಲ್ಲಿ ಪ್ರಾನ್ಸ್ ಕ್ರಾಂತಿಯ ಬಗ್ಗೆ ಜ್ಯೋತಿಬಾ ಓದಿದ್ದರು. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವವನ್ನು ಆಧರಿಸಿದ ಗಣರಾಜ್ಯದ ಅರಿವು ಜ್ಯೋತಿಭಾ ಅವರಿಗಾಯಿತು. ಈ ಅರಿವು ಪಡೆದ ಜ್ಯೋತಿಭಾ ಗೆ ತನ್ನ ಎದುರಿನ ಅಸ್ಪೃಶ್ಯತೆ, ಅಸಮಾನತೆ ಡಾಳಾಗಿ ಕಾಣತೊಡಗಿದವು.

1820 ರಲ್ಲಿ ಬ್ರಿಟಿಷ್ ಸರಕಾರ ಶಾಲೆಗಳನ್ನು ತೆರೆದಿದ್ದರೂ ಅದು ಮೇಲ್ಜಾತಿಗಳ ಕಲಿಕೆ ಪ್ರಮಾಣ ಹೆಚ್ಚಾಗಿತ್ತು. ಕಣ್ಣೆದುರು ಜೀತಪದ್ಧತಿ, ಅಮಾನುಷ ಅಸ್ಪೃಶ್ಯತೆ, ಬಾಲ್ಯವಿವಾಹ, ಮಹಿಳೆಯರ ಹೀನಾಯ ಸ್ಥಿತಿಯನ್ನು ನೋಡಿದ ಜ್ಯೋತಿಭಾ ಮಹಿಳೆಯರ ಶಿಕ್ಷಣದ ಅಗತ್ಯವನ್ನು ಕಂಡುಕೊಳ್ಳುತ್ತಾರೆ. ಜ್ಯೋತಿಭಾ ಮೊದಲನೆಯದಾಗಿ ಸಾವಿತ್ರಿಯವರಿಗೆ ಅಕ್ಷರ ಕಲಿಸುತ್ತಾರೆ. ಅಂದು ಅಸ್ಪೃಶ್ಯರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ ಕಲಿಸುವುದು ಧರ್ಮವಿರೊಧಿ ಸಂಗತಿಯಾಗುತ್ತು. ಊರಿನ ಮೇಲ್ಜಾತಿಯವರು ಬಂದು ಗೋವಿಂದರಾವ್ ಅವರಲ್ಲಿ ನಿನ್ನ ಮಗ ಜ್ಯೋತಿಭಾ ಮತ್ತು ಸಾವಿತ್ರಿ ಅಸ್ಪೃಶ್ಯರಿಗೆ, ಮಹಿಳೆಯರಿಗೆ ಅಕ್ಷರ ಕಲಿಸುತ್ತಿದ್ದಾರೆ. ಇದು ದೇಶದ್ರೋಹದ ಕೆಲಸ ಎಂದು ವಿರೋಧಿಸುತ್ತಾರೆ. ಆಗ ಗೋವಿಂದರಾವ್ ಉಟ್ಟ ಬಟ್ಟೆಯಲ್ಲಿಯೇ ಜ್ಯೋತಿಭಾ ಮತ್ತು ಸಾವಿತ್ರಿಯರನ್ನು ಮನೆಯಿಂದ ಹೊರ ಹಾಕುತ್ತಾರೆ.



ಫಾತೀಮಾ ಶೇಖ್

ಆಗ ನಿರ್ಗತಿಕರಾಗಿ ಹೊರಬಿದ್ದ ದಂಪತಿಗಳಿಗೆ ನೆರವಾಗುವುದು ಶಿಕ್ಷಕ ಮುನ್ಷಿ ಗಫರ್ ಖಾನ್. ಇವರು ಪುಣೆಯ ಜೋತಿಭಾ ಸ್ನೇಹಿತರೂ ಆಗಿದ್ದ ಉಸ್ಮಾನ್ ಶೇಖ್ ಎನ್ನುವವರಲ್ಲಿ ಸಹಾಯ ಮಾಡಲು ಕೋರುತ್ತಾರೆ.

ಆಗ ಉಸ್ಮಾನ್ ಶೇಖ್ ತಮ್ಮ ದೊಡ್ಡ ಮನೆಯ ಎರಡು ಕೋಣೆಗಳನ್ನು ಶಾಲೆಗಾಗಿ ನೀಡುತ್ತಾರೆ. ಜೊತೆಗೆ ಸಾವಿತ್ರಿ ಯ ಕೆಲಸಕ್ಕೆ ಜೊತೆಯಾಗಲು ಉಸ್ಮಾನ್ ಶೇಖ್ ತನ್ನ ತಂಗಿ ಫಾತೀಮಾ ಶೇಖ್ ಅವರನ್ನು ಪರಿಚಯಿಸುತ್ತಾರೆ. 1848 ರಲ್ಲಿ ಭುದವಾರ ಪೇಟೆಯಲ್ಲಿ ಹೆಣ್ಣುಮಕ್ಕಳಿಗೆ ಒಂದು ಶಾಲೆ ಶುರುವಾಗುತ್ತೆ. ಸಾವಿತ್ರಿ ಬಾಫುಲೆಯವರು ಈ ಶಾಲೆಯ ಮೊದಲ ಶಿಕ್ಷಕಿಯಾಗುತ್ತಾರೆ. ಅಹಮದಾಬಾದ್ ನಲ್ಲಿ ಶಿಕ್ಷಕರ ತರಬೇತಿಯನ್ನು ಪೂರೈಸಿದ ಫಾತೀಮಾ ಮತ್ತು ಸಾವಿತ್ರಿ ಬಾಫುಲೆ ಇಬ್ಬರೂ ಅಧಿಕೃತವಾಗಿ ಶಾಲಾ ಶಿಕ್ಷಕಿಯರಾಗಿ ಬದಲಾಗುತ್ತಾರೆ.

ಹೀಗೆ ಭಾರತದಲ್ಲಿ ಅಕ್ಷರದ ಶಕೆಯನ್ನು ಶುರುಮಾಡಿದ ದೇಶದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಫುಲೆಯನ್ನು ನೆನೆಯೋಣ. ಜತೆಗೆ ಜ್ಯೋತಿಭಾಫುಲೆ, ಮುನ್ಷಿ ಗಫರ್ ಖಾನ್, ಸುಗುಣಬಾಯಿ, ಉಸ್ಮಾನ್ ಶೇಖ್, ಮತ್ತು ಫಾತೀಮಾ ಶೇಖ್ ಇವರನ್ನೂ ನೆನೆಯೋಣ.



ಶಿಕ್ಷಣವು ಸಾಮಾಜಿಕ ಪ್ರಜ್ಞೆಯನ್ನು ನೀಡಬಲ್ಲದು. ಪ್ರಶ್ನಿಸುವ ಮನೋಭಾವ ಬೆಳೆಸಬಲ್ಲದು. ಸಮಾಜದಲ್ಲಿ ಹೊಸ ಉತ್ಪನ್ನಗಳ ಉತ್ಪಾದನೆಗೆ ಇದು ದಾರಿ ಮಾಡಿಕೊಡುತ್ತದೆ. ಸಾರ್ವತ್ರಿಕ, ಸಾರ್ವಜನಿಕ ಶಿಕ್ಷಣದಿಂದ ಎಲ್ಲರಿಗೂ ಶಿಕ್ಷಣ ಸಿಗಲು ಸಾಧ್ಯ. ಸರ್ಕಾರವೇ ವಹಿಸಿಕೊಳ್ಳುವುದರಿಂದ ಸಾಧ್ಯ. ಸಾವಿತ್ರಿಬಾಯಿ ಪುಲೆಯವರ ಜಯಂತಿ ಆಚರಣೆಯ ಸಂದರ್ಭದಲ್ಲಿ ಅವರ ಸಾಧನೆಗಳನ್ನು ಸ್ಮರಿಸೋಣ. ಸಾರ್ವಜನಿಕ ಶಿಕ್ಷಣ ಕ್ಷೇತ್ರವನ್ನು ಉಳಿಸಲು, ಸಾಂವಿಧಾನಿಕ ಮೌಲ್ಯಗಳನ್ನು ರಕ್ಷಿಸಲು, ಸಮಾನತೆಯ ಭಾವನೆಗಳನ್ನು ಬೆಳೆಸಿಕೊಳ್ಳಲು, ಈ ದೇಶ ಎಲ್ಲರಿಗೂ ಸೇರಿದ್ದು ಎಂಬ ಭಾವನೆಯನ್ನು ಬಲಗೊಳಿಸಲು ಪಣತೊಡೋಣ.



ಲಿಂಗ ಸಮಾನತೆ ಮತ್ತು ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣ

ಸಾವಿತ್ರಿಬಾಯಿ ಫುಲೆ ಅವರು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ, ಮಹಿಳಾ ಹಕ್ಕುಗಳಿಗಾಗಿ ತಮ್ಮ ಇಡೀ ಜೀವನವನ್ನು ತ್ಯಾಗ ಮಾಡಿದ ಮಾದರಿ ನಾಯಕಿಯಾಗಿದ್ದಾರೆ. ಮೊದಲ ಮಹಿಳಾ ಶಿಕ್ಷಕಿಯಾಗಿ, ಶಿಕ್ಷಣದ ಮೂಲಕ ಮಹಿಳೆಯರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಮತ್ತು ಮುಕ್ತ ವಾತಾವರಣದಲ್ಲಿ ಅವರ ಹಕ್ಕುಗಳನ್ನು ಪಡೆಯಲು ಸರ್ಕಾರವು ಪರಿಸ್ಥಿತಿಗಳನ್ನು ಸೃಷ್ಟಿಸಲು ಅವರು ದಿಟ್ಟತನದಿಂದ ಹೋರಾಡಿದರು. ಸಾವಿತ್ರಿಬಾಯಿ ಫುಲೆ ಜಯಂತಿಯನ್ನು ಪ್ರತಿ ವರ್ಷ ಜನವರಿ 3 ರಂದು ಆಚರಿಸಲಾಗುತ್ತದೆ. ಈ ವರ್ಷಾಚರಣೆಯ ಮೂಲಕ ಸಾವಿತ್ರಿಬಾಯಿ ಫುಲೆಯವರ ಸಾಧನೆಗಳನ್ನು ಸ್ಮರಿಸೋಣ ಮತ್ತು ಸಂವಿಧಾನವು ಒದಗಿಸಿರುವ ಸಮಾನ ಕೆಲಸಕ್ಕೆ ಸಮಾನ ವೇತನ, ಪ್ರತಿಫಲ ಮತ್ತು ಸಮಾನ ಹಕ್ಕುಗಳನ್ನು ಸಾಧಿಸಲು ಶ್ರಮಿಸೋಣ.

ಸಂವಿಧಾನದಲ್ಲಿ ಮಹಿಳೆಯರು

ಭಾರತದ ಸಂವಿಧಾನದ ಆರ್ಟಿಕಲ್–14 ರ ಪ್ರಕಾರ, ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳದ ಆಧಾರದ ಮೇಲೆ ಯಾವುದೇ ತಾರತಮ್ಯ ಇರಬಾರದು. ಕಲಂ–15ರ ಪ್ರಕಾರ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ವಿಶೇಷ ನಿಬಂಧನೆಗಳು ಇರಬೇಕು. ಸಮಾಜದಲ್ಲಿ ಘನತೆ, ಕೆಲಸದ ಸ್ಥಳ, ಯೋಗ್ಯ ಶಿಕ್ಷಣ, ಆರೋಗ್ಯ ರಕ್ಷಣೆ, ಸಮಾನ ಕೆಲಸಕ್ಕೆ ಸಮಾನ ವೇತನ, ರಾಜಕೀಯ ಭಾಗವಹಿಸುವಿಕೆ, ಕೌಟುಂಬಿಕ ದೌರ್ಜನ್ಯದ ವಿರುದ್ಧದ ಹಕ್ಕು ಇವುಗಳು ನಮ್ಮ ಸಂವಿಧಾನವು ಖಾತರಿಪಡಿಸುವ ವಿಶೇಷ ಹಕ್ಕುಗಳಾಗಿವೆ. ಇಂದಿನ ದೊರೆಗಳು ಮಾತಿನಲ್ಲಿ ಹೆಣ್ಣನ್ನು ದೇವತೆಯನ್ನಾಗಿ ಮಾಡಲು ಕಾನೂನು ರೂಪಿಸುತ್ತಿದ್ದರೂ ಆಚರಣೆಯಲ್ಲಿ ಮಹಿಳೆಯರನ್ನು ಅಡುಗೆ ಕೋಣೆಗೆ ಸೀಮಿತಗೊಳಿಸುತ್ತಿದ್ದಾರೆ. ಪ್ರತಿ ಸಂದರ್ಭದಲ್ಲೂ ತಮ್ಮ ಸರ್ಕಾರಗಳು ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಕೆಲಸ ಮಾಡುತ್ತಿವೆ ಎಂದು ಹೇಳುತ್ತಾರೆ. ಮಹಿಳೆಯರ ಮೇಲೆ ಹಲ್ಲೆ, ದೌರ್ಜನ್ಯ, ಕೊಲೆಗಳು ನಡೆದಾಗ ಆತುರದಿಂದ ಹೊಸ ಕಾನೂನನ್ನು ತಂದು ಜಾರಿ ಮಾಡದೇ ಇರುವುದು ಅವರ ಅಭ್ಯಾಸ. ಇಂದು ಸಂವಿಧಾನ ನೀಡಿರುವ ಹಕ್ಕುಗಳನ್ನು ರಕ್ಷಿಸಲು ದೊಡ್ಡ ಮಟ್ಟದ ಹೋರಾಟಗಳನ್ನು ನಡೆಸಬೇಕಾದ ಸನ್ನಿವೇಶಗಳಿವೆ. 18 ನೇ ಶತಮಾನದಲ್ಲಿ ಸಾವಿತ್ರಿಬಾಯಿ ಫುಲೆಯವರ ಹೋರಾಟಗಳು ಇಂದಿನ ಸಂವಿಧಾನದಲ್ಲಿ ಕನಿಷ್ಠ ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸಲು ಕಾರಣವಾಯಿತು.

ಮಹಿಳಾ ಸಾಕ್ಷರತೆ ಶೇ. 64 ಮಾತ್ರ

ಸಂವಿಧಾನವು ಮಹಿಳೆಯರ ಹಕ್ಕುಗಳಿಗಾಗಿ ಕಾನೂನುಗಳನ್ನು ಮಾಡಿದೆ. ಮಹಿಳೆಯರ ಮೇಲೆ ಯಾವುದಾದರು ದಾಳಿ ನಡೆದಾಗಲೆಲ್ಲ ಹೊಸ ಕಾನೂನುಗಳು ಬರುತ್ತಿವೆ. ದೇಶ ಮತ್ತು ರಾಜ್ಯದಲ್ಲಿ ಶಿಕ್ಷಣದಲ್ಲಿ ವಿವಿಧ ಪ್ರಯೋಗಗಳು ಜಾರಿಯಾಗುತ್ತಿವೆ. ಆದರೆ ಇನ್ನೂ ಮಹಿಳಾ ಸಾಕ್ಷರತೆ ಶೇಕಡಾ 64 ಕ್ಕಿಂತ ಹೆಚ್ಚಿಲ್ಲ. ಖಅ, ಖಖಿ ಮತ್ತು ಅಲ್ಪಸಂಖ್ಯಾತರ ಸಾಕ್ಷರತೆ ಶೇ. 50 ಕ್ಕಿಂತ ಕಡಿಮೆ. ಹಲವು ಸರ್ಕಾರಿ ಶಾಲೆಗಳು ಮುಚ್ಚುವ ಹಂತದಲ್ಲಿವೆ. ಅನೇಕ ಮಕ್ಕಳು ಶಾಲೆ ಬಿಡುತ್ತಿದ್ದಾರೆ. ಐದನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ಎರಡನೇ ತರಗತಿಯ ಪಠ್ಯಪುಸ್ತಕಗಳನ್ನು ಓದಲು ಮತ್ತು ಬರೆಯಲು ತಿಳಿದಿಲ್ಲ ಎಂದು ಅಸರ್ ಮತ್ತು ಅಂತರರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸಮೀಕ್ಷಾ ವರದಿಗಳು ತೋರಿಸುತ್ತವೆ.

ಸಾರ್ವಜನಿಕ ಶಿಕ್ಷಣ ಕ್ಷೇತ್ರ

ಎಲ್ಲರಿಗೂ ಶಿಕ್ಷಣ ನೀಡಬೇಕು ಮತ್ತು ಎಲ್ಲರಿಗೂ ಉದ್ಯೋಗ ನೀಡಬೇಕು ಎಂದು ಭಾರತದ ಸಂವಿಧಾನವು ಹೇಳುತ್ತದೆ. 14 ವರ್ಷದೊಳಗಿನ ಎಲ್ಲಾ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕು ಎಂದು ಸಂವಿಧಾನ ಹೇಳುತ್ತದೆ. 24ನೇ ವಿಧಿಯು ಬಾಲಕಾರ್ಮಿಕ ಪದ್ಧತಿ ಇರಬಾರದು ಎಂದು ಹೇಳುತ್ತದೆ. 29 ನೇ ವಿಧಿಯು ಅಲ್ಪಸಂಖ್ಯಾತರ ಭಾಷೆ, ಲಿಪಿ ಸಂಸ್ಕೃತಿ ಮತ್ತು ಶಿಕ್ಷಣದ ಅಭಿವೃದ್ಧಿಗೆ ವಿಶೇಷ ಸೌಲಭ್ಯಗಳು ಮತ್ತು ಸಂಸ್ಥೆಗಳು ಇರಬೇಕೆಂದು ಹೇಳುತ್ತದೆ. ಕೊಠಾರಿ ಆಯೋಗವು ಶಿಕ್ಷಣ ಸರ್ಕಾರದ ಜವಾಬ್ದಾರಿಯಾಗಬೇಕು ಎಂದು ಹೇಳಿದ್ದಲ್ಲದೆ, ಸಾಮಾನ್ಯ ಶಾಲಾ ವ್ಯವಸ್ಥೆಯನ್ನು ಶಿಫಾರಸು ಮಾಡಿದೆ. ಉನ್ನಿಕೃಷ್ಣನ್ ವರ್ಸಸ್ ಸ್ಟೇಟ್ ಆಫ್ ಆಂಧ್ರಪ್ರದೇಶ ಮತ್ತು ಮೋಹಿನ್ ಜೈನ್ ವರ್ಸಸ್ ಸ್ಟೇಟ್ ಆಫ್ ಕರ್ನಾಟಕ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಬೇಕು ಎಂದು ಹೇಳಿದೆ. 2002 ರಲ್ಲಿ, 86 ನೇ ಸಾಂವಿಧಾನಿಕ ತಿದ್ದುಪಡಿಯ ಮೂಲಕ, ಆರ್ಟಿಕಲ್ 21–ಎ ಅನ್ನು ಸಾಂವಿಧಾನಿಕ ಮೂಲಭೂತ ಹಕ್ಕುಗಳಲ್ಲಿ ಸೇರಿಸಲಾಯಿತು ಮತ್ತು ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಮಾಡಲಾಯಿತು. ಇದನ್ನು ಜಾರಿಗೆ ತರಲು ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯಿದೆಯನ್ನು 2009 ರಲ್ಲಿ ಜಾರಿಗೊಳಿಸಲಾಯಿತು ಮತ್ತು ಏಪ್ರಿಲ್ 1, 2010 ರಿಂದ ಜಾರಿಗೆ ಬಂದಿತು. ಸಂವಿಧಾನ ಜಾರಿಯಾದ 1950ರಿಂದ 1990ರವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಂಡಿವೆ. ಇದರಿಂದ ಸಮಾಜದ ಬಡವರು ಮತ್ತು ತುಳಿತಕ್ಕೊಳಗಾದ ವರ್ಗಗಳಿಗೆ ಅಧ್ಯಯನ ಮಾಡಲು ಅವಕಾಶ ಸಿಕ್ಕಿತು.

ಆರ್ಥಿಕ ಸುಧಾರಣೆಗಳು–ಶಿಕ್ಷಣದ ಖಾಸಗೀಕರಣ

1991 ರಲ್ಲಿ ಭಾರತದಲ್ಲಿ ಪ್ರಾರಂಭವಾದ ಆರ್ಥಿಕ ಸುಧಾರಣೆಗಳು–ಸರಳೀಕರಣ, ಖಾಸಗೀಕರಣ ಮತ್ತು ಜಾಗತೀಕರಣವು ಶಿಕ್ಷಣ ಕ್ಷೇತ್ರದ ಮೇಲೂ ಪ್ರಭಾವ ಬೀರಿದೆ. ಕಳೆದ ಮೂರು ದಶಕಗಳಲ್ಲಿ, ದೇಶದ ಉನ್ನತ ಮತ್ತು ಶಾಲಾ ಶಿಕ್ಷಣ ಕ್ಷೇತ್ರಗಳು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣಗೊಳ್ಳಲು ಪ್ರಾರಂಭಿಸಿವೆ. ಶಿಕ್ಷಣವನ್ನು 'ಸಾರ್ವಜನಿಕ ಒಳಿತಿಗಾಗಿ' ನೋಡುವುದಕ್ಕಿಂತ ಹೆಚ್ಚಾಗಿ 'ಖಾಸಗಿ ಸರಕು' ಎಂದು ನೋಡಲಾಗುತ್ತದೆ. ಮಾರುಕಟ್ಟೆಯ ಅಗತ್ಯಗಳಿಗೆ ಅನುಗುಣವಾಗಿ ಶಿಕ್ಷಣ ಕ್ಷೇತ್ರದ ಪ್ರವೃತ್ತಿಗಳು ನಡೆದಿವೆ. ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣ ನಡೆದಿದೆ.

90ರಷ್ಟು ಪ್ರೌಢ ಶಿಕ್ಷಣ ಕಾರ್ಪೊರೇಟ್ ಸಂಸ್ಥೆಗಳ ಕೈ ಸೇರಿದೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ, ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಖಾಸಗೀಕರಣ ಮತ್ತು ಕಾರ್ಪೊರೇಟೀಕರಣವು ಶಿಕ್ಷಣ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯದ ಕೊರತೆಯನ್ನು ಉಂಟುಮಾಡಿದೆ ಮಾತ್ರವಲ್ಲದೆ, ತೀವ್ರ ಅಸಮಾನತೆಗಳನ್ನು ಸೃಷ್ಟಿಸಿದೆ. ಶಿಕ್ಷಣ ಕ್ಷೇತ್ರದಲ್ಲಿ ಎರಡು ಸಮಾನಾಂತರ ವ್ಯವಸ್ಥೆಗಳು ಹುಟ್ಟಿಕೊಂಡಿವೆ. ಸಾರ್ವಜನಿಕ ಶಿಕ್ಷಣ ಕ್ಷೇತ್ರವನ್ನು ರಕ್ಷಿಸಲು ಯುಟಿಎಫ್ ಈ ಸುವರ್ಣ ಮಹೋತ್ಸವದ ನಿಲುವನ್ನು ತೆಗೆದುಕೊಳ್ಳುತ್ತದೆ.

10 ಲಕ್ಷ ಶಿಕ್ಷಕರ ಹುದ್ದೆಗಳು ಖಾಲಿ ಇವೆ

ಶಿಕ್ಷಣ ಸಚಿವಾಲಯದ ಸಂಸದೀಯ ಸಮಿತಿ (ಎಂಒಇ) ಅಂಕಿಅಂಶಗಳ ಪ್ರಕಾರ, 2022 ರ ಡಿಸೆಂಬರ್ 31 ರವರೆಗೆ ದೇಶದ ಎಲಿಮೆಂಟರಿ, ಪ್ರೈಮರಿ, ಸೆಕೆಂಡರಿ ಮತ್ತು ಹೈಯರ್ ಸೆಕೆಂಡರಿ ಹಂತಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ ಸುಮಾರು 10 ಲಕ್ಷ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಸಮಿತಿ ನೀಡಿರುವ ಅಂಕಿಅಂಶಗಳ ಪ್ರಕಾರ ಪ್ರಾಥಮಿಕ ಹಂತದಲ್ಲಿ 7,47,565, ಮಾಧ್ಯಮಿಕ ಹಂತದಲ್ಲಿ 1,46,334 ಮತ್ತು ಹೈಯರ್ ಸೆಕೆಂಡರಿ ಹಂತದಲ್ಲಿ 92,666 ಹುದ್ದೆಗಳು ಖಾಲಿ ಇವೆ.

ರಾಷ್ಟ್ರೀಯ ಶಿಕ್ಷಣ ನೀತಿ

ಕರೋನಾ ಉಲ್ಬಣಗೊಂಡಿರುವಾಗ ರಾಜ್ಯಗಳೊಂದಿಗೆ ಯಾವುದೇ ಸಮಾಲೋಚನೆ ನಡೆಸದೆ ನರೇಂದ್ರ ಮೋದಿ ಸರ್ಕಾರ ಏಕಪಕ್ಷೀಯವಾಗಿ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನ್ನು ಘೋಷಿಸಿತು. ಈ ಶಿಕ್ಷಣ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಸಾಂವಿಧಾನಿಕ ಉದ್ದೇಶಗಳಾದ ಫೆಡರಲಿಸಂ, ಜಾತ್ಯತೀತತೆ, ಸಾಮಾಜಿಕ ನ್ಯಾಯ, ಸಂಸದೀಯ ಪ್ರಜಾಪ್ರಭುತ್ವ ಇತ್ಯಾದಿಗಳ ಉಲ್ಲೇಖವಿಲ್ಲ. ಸಾರ್ವಜನಿಕ ಶಿಕ್ಷಣ ಕ್ಷೇತ್ರವನ್ನು ಬಲಪಡಿಸುವ ಪ್ರಸ್ತಾಪವಿಲ್ಲ. ಓಇಕ–2020 ಖಾಸಗಿ ಶಾಲೆಗಳಿಗೆ ಶುಲ್ಕವನ್ನು ನಿರ್ಧರಿಸುವ ಸ್ವಾತಂತ್ರ್ಯವನ್ನು ನೀಡುವ ಮೂಲಕ ಶಿಕ್ಷಣದ ವ್ಯವಹಾರವನ್ನು ತೆರೆಯುತ್ತದೆ. ಓಇಕ–2020 ಮುಖ್ಯ ಉದ್ದೇಶಗಳು ಶಿಕ್ಷಣದ ಗುಣಮಟ್ಟ ಮತ್ತು ಉದ್ಯೋಗ ಸೃಷ್ಟಿಗೆ ಕೌಶಲ್ಯಗಳನ್ನು ಹೆಚ್ಚಿಸುವುದು ಎಂದು ಉಲ್ಲೇಖಿಸುತ್ತದೆ, ಇದು ಮಾರುಕಟ್ಟೆ ನೀತಿಗಳಿಗೆ ಅನುಗುಣವಾಗಿ ಮಾತ್ರ. ಸಂವಿಧಾನ ಜಾರಿಗೆ ಬಂದಾಗ ಶಿಕ್ಷಣ ರಾಜ್ಯ ಪಟ್ಟಿಯಲ್ಲಿತ್ತು. 1976 ರಲ್ಲಿ ಇದನ್ನು ಸಾಮಾನ್ಯ ಪಟ್ಟಿಯಾಗಿ ಪರಿವರ್ತಿಸಲಾಯಿತು. ರಾಜ್ಯಗಳ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಓಇಕ–2020 ರಲ್ಲಿ ಕೇಂದ್ರೀಕರಣ, ವಾಣಿಜ್ಯೀಕರಣ ಮತ್ತು ಅಪನಗದೀಕರಣವು ಅಂತರ್ಗತವಾಗಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ತಿಳಿಯುತ್ತದೆ. ಈ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯು ರಾಷ್ಟ್ರದ ಹಿತಾಸಕ್ತಿ, ಬಡವರ ಹಿತಾಸಕ್ತಿ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ.

ಶೇ.33ರಷ್ಟು ಮೀಸಲಾತಿ

72ನೇ ಮತ್ತು 73ನೇ ಸಾಂವಿಧಾನಿಕ ತಿದ್ದುಪಡಿಗಳ ಮೂಲಕ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಕಾನೂನನ್ನು ಅಂಗೀಕರಿಸಲಾಯಿತು. ಸ್ಥಳೀಯ ಸಂಸ್ಥೆಗಳಲ್ಲಿ ವಾರ್ಡ್ ಸದಸ್ಯರು, ಸರಪಂಚರು, ಎಂಪಿಟಿಸಿ ಮತ್ತು ಝಡ್‌ಪಿಟಿಸಿಗಳು ಶೇ.33ರಷ್ಟು ಬಂದಿವೆ. ಮಹಿಳೆಯರಿಗಾಗಿ ಮೀಸಲಿಟ್ಟ ಈ ಕ್ಷೇತ್ರಗಳಲ್ಲಿ ಮಹಿಳೆಯರು ಆರಿಸಿ ಬಂದರು. ಆದರೆ ಪ್ರಾಯೋಗಿಕವಾಗಿ, ಅವರ ಗಂಡ ಅಥವಾ ತಂದೆ ಅವರ ಜವಾಬ್ದಾರಿಯನ್ನು ಮಾಡುತ್ತಾರೆ. ಈಗ ಶಾಸಕಾಂಗ ಸಭೆಯಲ್ಲೂ ಶೇ.33ರಷ್ಟು ಮೀಸಲಾತಿ ಕಲ್ಪಿಸಿ ಕಾನೂನು ಅಂಗೀಕರಿಸಲಾಗಿದೆ. ಆದರೆ, 2029ರ ಸಾರ್ವತ್ರಿಕ ಚುನಾವಣೆಯಿಂದಲೇ ಅನುಷ್ಠಾನಕ್ಕೆ ಬರಲಿದೆ ಎಂದು ಹೇಳಲಾಗುತ್ತಿದೆ.

ಮತ್ತೊಂದೆಡೆ, ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ಸಂವಿಧಾನದಲ್ಲಿ 30 ಕ್ಕೂ ಹೆಚ್ಚು ಕಾನೂನುಗಳನ್ನು ಮಾಡಲಾಗಿದೆ. ಮಹಿಳೆಯ ಮೇಲೆ ಹಲ್ಲೆ ನಡೆದರೆ ದಿಸಾ, ನಿರ್ಭಯಾ ಮುಂತಾದ ಕಾಯ್ದೆಗಳನ್ನು ತಕ್ಷಣವೇ ತರಲಾಯಿತು. ಆದರೆ ಈ ಎಲ್ಲಾ ಕಾನೂನುಗಳು ಕಾಗದಗಳಿಗೆ ಸೀಮಿತವಾಗಿವೆ. ಯಾವುದೇ ದಾಳಿ ನಡೆದರೂ ಅದು ಜಾತಿ, ಧಾರ್ಮಿಕ, ಪ್ರಾದೇಶಿಕ, ರಾಜಕೀಯ ಸಂಘರ್ಷ ಅಥವಾ ಜಾತಿ ಅಭಿಮಾನದ ಹತ್ಯೆ. ಇವುಗಳಲ್ಲಿ ಮಹಿಳೆಯರೇ ಮೇಲುಗೈ. ನಿನ್ನೆ ಮೊನ್ನೆ ನಾಗಾಲ್ಯಾಂಡ್ ಮತ್ತು ಹಿಮಾಚಲ ಪ್ರದೇಶದಲ್ಲಿ ಮಹಿಳೆಯರ ಮೇಲೆ ಅಮಾನುಷ ಘಟನೆಗಳು, ಜಮ್ಮು ಕಾಶ್ಮೀರದಲ್ಲಿ ಕೋಮು ಘರ್ಷಣೆಗಳು, ಪ್ರೀತಿಯ ಹೆಸರಿನಲ್ಲಿ ಲೈಂಗಿಕ ಕಿರುಕುಳಗಳು ನಡೆದಿವೆ. ಎಷ್ಟೇ ಕಾನೂನು ಜಾರಿಗೆ ತಂದರೂ ಮಹಿಳೆಯರ ಮೇಲಿನ ದಾಳಿ ನಿಂತಿಲ್ಲ. ಮಹಿಳೆಯರ ಬಗ್ಗೆ ಆಳುವವರ ಧೋರಣೆಯೇ ಮುಖ್ಯ ಕಾರಣ. ಮಹಿಳೆಯರು ಅಡುಗೆ ಮನೆಗೆ ಸೀಮಿತವಾಗಬೇಕು ಎಂಬುದು ಆಡಳಿತ ವರ್ಗದವರ ಮನಸ್ಥಿತಿ. ಈ ಕಾರಣಕ್ಕಾಗಿಯೇ ಕೇಂದ್ರ ಮಟ್ಟದಿಂದ ರಾಜ್ಯ ಮಟ್ಟದವರೆಗೂ ರಾಜಕೀಯ ನಾಯಕರು ಮಹಿಳೆಯರ ಬಟ್ಟೆ, ಆಹಾರ ಪದ್ಧತಿ, ಸ್ವಾತಂತ್ರ್ಯದ ಮೇಲೆ ನಿರ್ಬಂಧ ಹೇರುವ ಬಗ್ಗೆ ಬಹಿರಂಗವಾಗಿ ಮಾತನಾಡುತ್ತಿದ್ದಾರೆ. ಆಳುವವರ ಪ್ರಾಮಾಣಿಕತೆ ಇಲ್ಲದೆ ಎಷ್ಟೇ ಕಾನೂನುಗಳಿದ್ದರೂ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಸಾಧ್ಯವಿಲ್ಲ.

ಸಾವಿತ್ರಿಬಾಯಿ ಫುಲೆಯವರ ಕನಸನ್ನು ನನಸು ಮಾಡಲು ಎಲ್ಲರೂ ಒಟ್ಟಾಗಿ ಸಾರ್ವಜನಿಕ ಶಿಕ್ಷಣ ಕ್ಷೇತ್ರವನ್ನು ಉಳಿಸೋಣ. ಸಾಂವಿಧಾನಿಕ ಮೌಲ್ಯಗಳನ್ನು ರಕ್ಷಿಸೋಣ. ಸಮಾನತೆಯ ಭಾವನೆಗಳನ್ನು ಬೆಳೆಸಿಕೊಳ್ಳೋಣ. ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತೋಣ. ಈ ದೇಶ ಎಲ್ಲರಿಗೂ ಸೇರಿದ್ದು ಎಂಬ ಭಾವನೆಯನ್ನು ಬಲಗೊಳಿಸುವ ಪಣತೊಡೋಣ.

ಅದಾನಿ ಪ್ರಕರಣದಲ್ಲಿ ಸುಪ್ರಿಂ ಕೋರ್ಟ್ ತೀರ್ಪು ನಿರಾಶಾದಾಯಕ

ಅದಾನಿ ಪ್ರಕರಣದಲ್ಲಿ, ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಕೋರಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸುವ ಸುಪ್ರೀಂ ಕೋರ್ಟ್ ತೀರ್ಪು ನಿರಾಶಾದಾಯಕ ಮತ್ತು ಹಲವಾರು ಕಾರಣಗಳಿಗಾಗಿ ದುರದೃಷ್ಟಕರ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ. ಈ ತೀರ್ಪಿನಿಂದ ಸುಪ್ರೀಂ ಕೋರ್ಟ್ ತನ್ನ ವಿಶ್ವಾಸಾರ್ಹತೆಯನ್ನೇನೂ ಹೆಚ್ಚಿಸಿಕೊಂಡಿಲ್ಲ ಎಂದು ಅದು ಹೇಳಿದೆ.

ಸೆಬಿಯಂತಹ ಶಾಸನಬದ್ಧ ಸಂಸ್ಥೆಯು ಅದಾನಿ ಸಮೂಹದ ವಿರುದ್ಧದ ಆರೋಪಗಳ ಬಗ್ಗೆ ತ್ವರಿತವಾಗಿ ತನಿಖೆ ಮಾಡುವ ಆದೇಶವನ್ನು ಪಾಲಿಸುತ್ತಿಲ್ಲ. 2014ರಲ್ಲಿ ಡಿಆರ್‌ಐ (ಡೈರೆಕ್ಟರೇಟ್ ಆಫ್ ರೆವಿನ್ಯೂ ಇಂಟೆಲಿಜೆನ್ಸ್) ಅದಾನಿ ವಿರುದ್ಧ ಒಂದು ನೇರ ಆರೋಪವನ್ನು ಸೆಬಿಗೆ ಉಲ್ಲೇಖಿಸಿತ್ತು. 2021 ರಲ್ಲಿ, ಅದಾನಿ ವಿರುದ್ಧದ ಆರೋಪಗಳನ್ನು ಸೆಬಿ ತನಿಖೆ ನಡೆಸುತ್ತಿದೆ ಎಂದು ಸಂಸತ್ತಿಗೆ ತಿಳಿಸಲಾಗಿತ್ತು. ಆದರೆ ನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಸೆಬಿ ಅಂತಹ ತನಿಖೆ ನಡೆಸಿರುವುದನ್ನು ನಿರಾಕರಿಸಿತು. ದೂರುಗಳ ಬಗ್ಗೆ ಸೆಬಿ ಏಕೆ ಕ್ರಮಕೈಗೊಂಡಿಲ್ಲ ಎಂದು ಪ್ರಶ್ನಿಸದೆ, ಇಂತಹ ಒಂದು ನಿರಾಕರಣೆಯನ್ನು ಸುಪ್ರಿಂ ಕೋರ್ಟ್ ಮರುಮಾತಿಲ್ಲದೆ ಸ್ವೀಕರಿಸಿರುವ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಶ್ಚರ್ಯ ವ್ಯಕ್ತಪಡಿಸಿದೆ.

ಎರಡನೆಯದಾಗಿ, ಸೆಬಿ ತನ್ನದೇ ನಿಯಮಗಳನ್ನು ಹೆಚ್ಚು ಅಪಾರದರ್ಶಕವಾಗಿಸಲು, ಮತ್ತು ಅಂತಿಮ ಫಲಾನುಭವಿ ಯಾರು ಎಂಬುದನ್ನು ಮರೆಮಾಚಲು ಬದಲಾಯಿಸಿತ್ತು. "ಸೆಬಿ ತನಿಖೆಗಳನ್ನು ಕೈಗೊಂಡಿರುವುದು ಅದು 'ಕಾನೂನಿನ ಭಾವ'ವನ್ನು ಅನುಸರಿಸುತ್ತಿದೆ ಎಂಬುದನ್ನು ಆಧರಿಸಿ, ಇದು ಶಾಸನದ ಕಡೆಯಿಂದ ಸೆಬಿಯು ಮಾಡಿರುವ ಮುಂದೂಡಿದ ಪರಿಣಾಮಗಳ ಸಂಭಾವ್ಯ ತಿದ್ದುಪಡಿಗಳಿಗೆ ತದ್ವಿರುದ್ಧವಾಗಿದೆ" ಎಂದು ಸ್ವತಃ ಸುಪ್ರೀಂ ಕೋರ್ಟ್ ರಚಿಸಿರುವ ಪರಿಣಿತರ ಸಮಿತಿಯೇ ಹೇಳಿದೆ. ಆದಾಗ್ಯೂ, "ಅಂತಿಮ ಫಲಾನುಭವಿ"ಯೊಂದಿಗೆ ವಿದೇಶಿ ಹೂಡಿಕೆದಾರರ ಕೊಂಡಿಗಳ ಗುರುತುಗಳನ್ನು ಮರೆಮಾಚುವ ಗೋಡೆಯಂತೆ ಕಾರ್ಯನಿರ್ವಹಿಸುವಂತಹ ಈ ತಿದ್ದುಪಡಿಗಳಿಗೆ ಸುಪ್ರೀಂ ಕೋರ್ಟ್ ಅನುಮೋದನೆ ನೀಡಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಮೂರನೆಯದಾಗಿ, ಈ ತೀರ್ಪು ಹಿಂಡೆನ್‌ಬರ್ಗ್ ರಿಸರ್ಚ್‌ನ ಆರೋಪಗಳು "ನಿಯಮಗಳನ್ನು ನಿರ್ಲಕ್ಷಿಸಿವೆ"ಯೇ ಎಂದು ತನಿಖೆ ಮಾಡಲು ಮತ್ತು ಅದಕ್ಕೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಮುಕ್ತ ಪರವಾನಗಿಯನ್ನು ನೀಡಿರುವುದು, ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಂದೇಶ ಒದಗಿಸಿದವರನ್ನೇ ಹೊಡೆದುರುಳಿಸಲು ಅನುಮತಿ ನೀಡಿರುವುದು ಅತ್ಯಂತ ದುರದೃಷ್ಟಕರವಾಗಿದೆ, ಇದು ಹಿಂಡೆನ್‌ಬರ್ಗ್ ವರದಿಯನ್ನು ಪ್ರಕಟಿಸಿರುವ ಎಲ್ಲಾ ಮಾಧ್ಯಮಗಳಿಗೆ ಗಂಡಾಂತರಕಾರಿಯಾಗುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ತೀರ್ಪಿನಿಂದ ಸುಪ್ರೀಂ ಕೋರ್ಟ್ ತನ್ನ ವಿಶ್ವಾಸಾರ್ಹತೆಯನ್ನೇನೂ ಹೆಚ್ಚಿಸಿಕೊಂಡಿಲ್ಲ ಎಂದಿದೆ.

ಕನಸು ನನಸಾಗಿಸಿದ ಸಾವಿತ್ರಿಬಾಯಿ...........

ಪುಟ 8 ರಿಂದ

ಸ್ನೇಹಿತರೊಡಗೂಡಿ ದಿಟ್ಟವಾಗಿ ಎದುರಿಸಿದ ದಂಪತಿಗಳು 1848–1852ರವರೆಗೆ ಹದಿನೆಂಟಕ್ಕೂ ಹೆಚ್ಚು ಉಚಿತ ಶಾಲೆಗಳನ್ನು ತೆರೆದು ನೂರಾರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದ ದಾಖಲೆಗಳಿವೆ.

ಕ್ರಾಂತಿಕಾರಿ ಕವಿಯಾಗಿ ಹೋರಾಟದ ಹಾಡುಗಳನ್ನೂ ರಚಿಸಿದ ಸಾವಿತ್ರೀ ಬಾಯಿ ಫುಲೆ ಅವರ ತುಡಿತ ಎಂತದ್ದು ಎಂಬುದು ಈ ಕವಿತೆಯಲ್ಲಿ ಕಾಣಸಿಗುತ್ತದೆ:

ನಡೆ! ಶಿಕ್ಷಣ ಪಡೆ!
ನಿಲ್ಲು! ನಿನ್ನ ಕಾಲ ಮೇಲೆ ನೀನು ನಿಲ್ಲು
ಪಡೆ ವಿವೇಕ! ಪಡೆ ಸಂಪತ್ತು! ಇದಕಾಗಲಿ
ನಿನ್ನಯ ದುಡಿಮೆ
ಅರಿವಿಲ್ಲದವರಾಗಿ ನಮಗೆ ಕೈ ಜಾರಿತು ಸಕಲವೂ
ಪಶುವಾದೆವು, ಇಲ್ಲದಾಗಿ ವಿವೇಕವೂ
ಸಾಕಿನ್ನು ಈ ಜಡತೆ ಸಾಕು
ನಡೆನಡೆ ಶಿಕ್ಷಣ ಪಡೆ!
ಆಗಲಿ ಕೊನೆ, ದಮನಿತರ ಕಣ್ಣೀರ ಸಂಕಟಕ್ಕೂ
ಕೊನೆ
ಇದೊ ಇಲ್ಲಿದೆ! ನಿಮ್ಮ ಕಣ್ಮುಂದೆಯೆ ಬಿದ್ದಿದೆ
ಶಿಕ್ಷಣದ ರೂಪದಲಿ ಚಿನ್ನದ ಗಣಿಯು
ತಡವೇಕೆ? ನಡೆನಡೆ ಶಿಕ್ಷಣ
ಪಡೆ!
ಜಾತಿಯ ಸಂಕೋಲೆ ಕತ್ತರಿಸಿ ನಡೆ.
ವೈದಿಕ ಶಾಸ್ತ್ರದ ಕಾಲ್ತೊಡರ ಕಿತ್ತೆಸೆದು ನಡೆ ನಡೆ!

ಸಾಮಾಜಿಕ ಅನಿಷ್ಟಗಳ ಎದುರು

ಅನೇಕ ಸಾಮಾಜಿಕ ಅನಿಷ್ಟಗಳ ಎದುರಿಗೂ ಫುಲೆ ದಂಪತಿಗಳು ಉಗ್ರ ಹೋರಾಟ ನಡೆಸಿದರು. ವಿಧವೆಯರ ಕೇಶಮುಂಡನವನ್ನು ವಿರೋಧಿಸಿ, ಅವರ ಪುನರ್ ವಿವಾಹಗಳನ್ನು ಏರ್ಪಡಿಸಿದರು.

ಕಾಮುಕ ಪುರುಷರಿಗೆ ಬಲಿಯಾಗಿ ಗರ್ಭಧರಿಸುವ ವಿಧವೆಯರಿಗಾಗಿ, ಅವರಿಗೆ ಹುಟ್ಟುವ ಮಕ್ಕಳಿಗಾಗಿ 1863ರಲ್ಲಿ 'ಬಾಲಹತ್ಯೆ ಪ್ರತಿಬಂಧಕ ಗೃಹ'ಗಳನ್ನು ತೆರೆದರು. ಅನಾಥ ವಿಧವೆಯರ ಸುರಕ್ಷಿತ ಹೆರಿಗೆಗಾಗಿ 'ಗುಪ್ತ ಪ್ರಸೂತಿ ಗೃಹ'ಗಳನ್ನು ಸ್ಥಾಪಿಸಿದರು. ಅನೇಕ ಅನಾಥಾಶ್ರಮಗಳೂ ಸ್ಥಾಪನೆಯಾದವು.

ಸ್ವಂತ ಮಕ್ಕಳನ್ನು ಹೊಂದದೆಯೇ ಈ ದಂಪತಿಗಳು ಅನಾಥ ಮಕ್ಕಳನ್ನು ತಮ್ಮ ಮಕ್ಕಳಂತೆಯೇ ಸಾಕಿ ಬೆಳೆಸಿದರು. ಬಾಲ್ಯ ವಿವಾಹ ಪದ್ಧತಿಯನ್ನು ನಿರ್ಮೂಲನೆ ಮಾಡಲು ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿದರು. ಅವರು ರೂಪಿಸಿದ 'ಸತ್ಯಶೋಧಕ ಚಳವಳಿ' ಸಾಮಾಜಿಕ ಪಿಡುಗುಗಳ ವಿರುದ್ಧದ ಒಂದು ಅಸ್ತ್ರವೇ ಆಗಿತ್ತು. ದೇಶದಲ್ಲೇ ಪ್ರಥಮ ಬಾರಿಗೆ ಮಹಿಳಾ ಸೇವಾ ಮಂಡಳಿಯೊಂದನ್ನು ಸಾವಿತ್ರಿಬಾಯಿಯವರ ನಾಯಕತ್ವದಲ್ಲಿ ಸ್ಥಾಪಿಸಿದ್ದೂ ಒಂದು ದಾಖಲೆ.

ಜ್ಯೋತಿಬಾ ಫುಲೆಯವರು 1890 ವರ್ಷದಲ್ಲಿ ನಿಧನರಾದ ನಂತರವೂ ಸಾವಿತ್ರಿಬಾಯಿ ಅವರು 1897 ವರ್ಷದ ತಮ್ಮ ಬದುಕಿನ ಕೊನೆಯಗಳಿಗೆಯವರೆಗೆ ತಮ್ಮ ಜನಪರ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದರು.

ವ್ಯಾಪಕವಾಗಿ ಹರಡಿದ್ದ ಪ್ಲೇಗ್ ಕಾಯಿಲೆಗೆ ತುತ್ತಾದ ರೋಗಿಗಳ ಸೇವೆಯಲ್ಲಿ ಅವರು ನಿಸ್ವಾರ್ಥವಾಗಿ ತೊಡಗಿಕೊಂಡು, ನಿರ್ಗತಿಕರಿಗಾಗಿ ಗಂಜಿ ಕೇಂದ್ರಗಳನ್ನು ಸ್ಥಾಪಿಸಿದರು. ಕ್ಷಾಮದ ಸಂದರ್ಭದಲ್ಲಿ ಹೆಣ್ಣುಮಕ್ಕಳು ದೇಹ ಮಾರಿಕೊಳ್ಳುವುದನ್ನು ತಪ್ಪಿಸಿ ಘನತೆಯಿಂದ ಬದುಕಲು ದಾರಿಗಳನ್ನು ಹುಡುಕಿಕೊಟ್ಟರು. ಕೊನೆಗೆ ಈ ತಾಯಿ ಸ್ವಯಂ ತಾವೇ ತೀವ್ರ ಪ್ಲೇಗ್ ಕಾಯಿಲೆಗೆ ತುತ್ತಾಗಿ ತಮ್ಮ 66ನೇ ವಯಸ್ಸಿನಲ್ಲಿ, 1897 ವರ್ಷದ ಮಾರ್ಚ್ 10ರಂದು ಈ ಲೋಕಕ್ಕೆ ವಿದಾಯ ಹೇಳಿದರು.

ಕೃಪೆ: 'ಕನ್ನಡ ಸಂಪದ'

ಹೊಸ 'ಭಾರತೀಯ ನ್ಯಾಯ ಸಂಹಿತ'ದ ಹೊಸ ಕರಾಳ ನಿಬಂಧನೆ ವಿರುದ್ಧ ರಸ್ತೆ ಸಾರಿಗೆ ಮುಷ್ಕರ-ಸಿಐಟಿಯು ಬೆಂಬಲ



ಭಾರತೀಯ ದಂಡ ಸಂಹಿತೆ (ಇಂಡಿಯನ್ ಪೀನಲ್ ಕೋಡ್–ಐಪಿಸಿ) ಸ್ಥಾನದಲ್ಲಿ ತರಾತುರಿಯಲ್ಲಿ ಪಾಸು ಮಾಡಿಸಿಕೊಂಡ 'ಭಾರತೀಯ ನ್ಯಾಯ ಸಂಹಿತ'ವನ್ನು ಯೋಚನಾಹೀನ ರೀತಿಯಲ್ಲಿ ಜಾರಿ ಮಾಡಲು ಹೊರಟಿರುವುದರ ಮೊದಲ ಕ್ರಮಕ್ಕೆ ದೇಶದಾದ್ಯಂತ ರಸ್ತೆ ಸಾರಿಗೆ ನೌಕರರು ಸೇರಿದಂತೆ ರಸ್ತೆ ಸಾರಿಗೆ ಉದ್ದಿಮೆಯಲ್ಲಿನ ಎಲ್ಲರಿಂದಲೂ ಭಾರೀ ಪ್ರಮಾಣದಲ್ಲಿ ಸ್ವಯಂಪ್ರೇರಿತ ಪ್ರತಿಭಟನೆ ವ್ಯಕ್ತಗೊಂಡಿದೆ. ಈ ದೇಶವ್ಯಾಪಿ ಪ್ರತಿಭಟನೆ ಒಂದು ಗಂಭೀರ ಬೆಳವಣಿಗೆ ಎಂದು ಪರಿಗಣಿಸಿರುವ ಸಿಐಟಿಯು, ಸಾರಿಗೆ ಅಪಘಾತಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಅಧಿಕಾರಿಗಳು ಬೇಕಾಬಿಟ್ಟಿಯಾಗಿ ದಂಢ ವಿಧಿಸಲು, ದಂಡನಾ ಕ್ರಮಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದೆ.

ಇಂಡಿಯನ್ ಪೀನಲ್ ಕೋಡ್, ಕ್ರಿಮಿನಲ್ ಪ್ರೊಸ್ಕ್ಯೋಡ್ ಮತ್ತು ಇಂಡಿಯನ್ ಎವಿಡೆನ್ಸ್ ಆಕ್ಟ್‌ನ ಜಾಗದಲ್ಲಿ ಅನುಕ್ರಮವಾಗಿ ಭಾರತೀಯ ನ್ಯಾಯ ಸಂಹಿತ (ಬಿಎನ್‌ಎಸ್), ಭಾರತೀಯ ನಾಗರಿಕ ಸುರಕ್ಷಾ ಸಂಹಿತ (ಬಿಎನ್‌ಎಸ್‌ಎಸ್) ಮತ್ತು ಭಾರತೀಯ ಸಾಕ್ಷಿ ಸಂಹಿತಾ ಎಂಬ ಮೂರು ದಂಡ ಶಾಸನಗಳನ್ನು ಸಂಸತ್ತಿನಲ್ಲಿ ಯಾವ ಚರ್ಚೆ, ವಿಮರ್ಶೆಗೂ ಅವಕಾಶವಿಲ್ಲದಂತೆ ಈ ಸರಕಾರ ಪಾಸು ಮಾಡಿಸಿಕೊಂಡಿದೆ. ಗೃಹ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿಯ ಒಮ್ಮತದ ಶಿಫಾರಸುಗಳನ್ನು ಕೂಡ ನಿರ್ಲಜ್ಜ ನಿರಂಕುಶ ರೀತಿಯಲ್ಲಿ ನಿರ್ಲಕ್ಷಿಸಿ ಇದನ್ನು ತರಲಾಗಿದೆ. ತಮ್ಮ ಸರ್ವಾಧಿಕಾರಿ ಧೋರಣೆಗೆ ತಕ್ಕಂತೆ ಅವರು, ಅರ್ಥಪೂರ್ಣ ಸಾರ್ವಜನಿಕ ಸಮಾಲೋಚನೆ ಮತ್ತು ಸಂಬಂಧಪಟ್ಟ ಎಲ್ಲರೊಂದಿಗೆ, ವಿಶೇಷವಾಗಿ ರಸ್ತೆ ಸಾರಿಗೆ ನೌಕರರ ಜತೆಗೆ ಚರ್ಚೆಗಳಿಗೆ ಯಾವುದೇ ಅವಕಾಶವನ್ನು ನೀಡುವುದಿಲ್ಲ ಮಾತ್ರವಲ್ಲ, ಸಂಸತ್ತಿನಲ್ಲಿಯೂ ಯಾವುದೇ ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂಬುದು ಸುಸ್ಪಷ್ಟ.

ಕಾರವಾರ: ನನಸು–ಕನಸು 25 ನೇ ವರ್ಷದ ಕಾರ್ಯಕ್ರಮ

ಪುಟ 16 ರಿಂದ

ಗುಣ ಹೆಚ್ಚು ಹೆಚ್ಚು ಬೆಳೆಯಲಿ ಎಂದರು. ಪ್ರಾಸ್ತಾವಿಕವಾಗಿ ಮಾತನಾಡಿದ ಹೋರಾಟಗಾರ್ತಿ ಯಮುನಾ ಗಾಂವ್ಕರ್ ಈ ಕಾರ್ಯಕ್ರಮ ವಿಠಲ ಭಂಡಾರಿಯವರ ಕನಸಾಗಿದ್ದು 25 ವರ್ಷಗಳನ್ನು ಪೂರೈಸುತ್ತಿದೆ. ಜಡಗೊಂಡ ಸಾಮಾಜಿಕ ವ್ಯವಸ್ಥೆಯಲ್ಲಿ ಚಲನೆಯನ್ನು ಉಂಟು ಮಾಡುವಲ್ಲಿ ಇಂತಹ ಕಾರ್ಯಕ್ರಮಗಳು ಅನಿವಾರ್ಯವಾಗಿವೆ. ಜನರ ಜೀವನವನ್ನು ಛಿದ್ರಗೊಳಿಸುವ ಕ್ರಿಯೆ ಎಲ್ಲಿಂದಲೇ ನಡೆದರೂ ಧ್ವನಿ ಎತ್ತೋಣ. ನಮ್ಮೆಲ್ಲರ ಮುಂದಿರುವ ಹಲವು ತೆರನಾದ ಜವಾಬ್ದಾರಿಗಳನ್ನು ಎಲ್ಲರನ್ನು ಒಳಗೊಂಡು ನಿಭಾಯಿಸೋಣ. ಸೌಹಾರ್ದ ಕರ್ನಾಟಕ ನಮ್ಮದು ಎಂದರು. ನಿವೃತ್ತ ಪ್ರಾಧ್ಯಾಪಕ ಶ್ರೀಧರ ನಾಯಕ, ತಾಲೂಕಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಎಂ.ಎ.ಖತೀಬ, ನಿವೃತ್ತ ಅಧಿಕಾರಿ ಎನ್.ಜಿ ನಾಯ್ಕ ಸಾಂದರ್ಭಿಕವಾಗಿ ಮಾತನಾಡಿದರು. ಫ್ರಾನ್ಸಿಸ್ ಫೆರ್ನಾಂಡಿಸ್, ಪ್ರಕಾಶ್ ಕುರಿಯನ್, ವಸಂತ ಬಾಂದೇಕರ, ಸಂಧ್ಯಾ ಕದಮ, ಕೃಷ್ಣಾನಂದ ಬಾಂದೇಕರ್, ನಾಗೇಶ್ ಅಣ್ವೇಕರ, ರೇಣುಕಾ, ವಿಕ್ರಮ್ ನಾಯ್ಕ, ದ್ಯಾವಪ್ಪ ಮಾದರ, ರಾಜೇಶ ಮರಾಠೆ, ವಿದ್ಯಾ ನಾಯ್ಕ, ಪ್ರೇಮಾ ಟಿ.ಎಂ.ಆರ್, ಶ್ರೀಧರ ನಾಯಕ, ಗಣೇಶ್, ಸಾತು ಗೌಡ ಮುಂತಾದವರು ತಮ್ಮ ಕವಿತೆಗಳನ್ನು ಓದಿದರು.

ಪ್ರಾರಂಭದಲ್ಲಿ ಶ್ಯಾಮನಾಥ ನಾಯ್ಕ ಸ್ವಾಗತಿಸಿದರು. ಕಿಶೋರ್ ಆಶಯ ಗೀತೆಯನ್ನು ಹಾಡಿದರು. ಕಾವ್ಯಾ ಮತ್ತು ಸಂಗಡಿಗರು ಆರ್.ವಿ.ಭಂಡಾರಿಯವರ ರಂಗಗೀತೆಯನ್ನು ಪ್ರಸ್ತುತ ಪಡಿಸಿದರು. ಈ ವೇಳೆ ಪ್ರೀತಿಪದಗಳ ಸಾರುವ ಕವನಗಳ ಪೋಸ್ಟರ್ ಮತ್ತು ಪುಸ್ತಕ ಹಾಗೂ ಚಿತ್ರಕಲಾ ಪ್ರದರ್ಶನ ನಡೆಯಿತು. ಗಣೇಶ ರಾಠೋಡ ಕಾರ್ಯಕ್ರಮ ನಿರ್ವಹಿಸಿದರು. ಕಾರವಾರದ ಅನೇಕ ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಸಾಹಿತಿಗಳು, ಪತ್ರಕರ್ತರು ಮತ್ತು ಶ್ರಮಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಕ್ಷರದವ್ವ ಸಾವಿತ್ರಿಬಾಯಿ ಫುಲೆ ಹಾಗೂ ಖ್ಯಾತ ಸಾಹಿತಿ ಸಾರಾ ಅಬೂಬಕ್ಕರ್ ಅವರನ್ನು ಸಾಂಕೇತಿಕವಾಗಿ ನೆನೆಸಿಕೊಳ್ಳಲಾಯಿತು.





2019 ರ ಲೋಕಸಭಾ ಚುನಾವಣೆಗೆ ಕೇವಲ 3 ತಿಂಗಳು ಬಾಕಿ ಇದೆ ಎನ್ನುವಾಗ, ಜಮ್ಮು–ಕಾಶ್ಮೀರದ ಪುಲ್ವಾಮದಲ್ಲಿ ಭಯೋತ್ಪಾದಕರ ದಾಳಿ ನಡೆದು, ನಮ್ಮ 40 ಯೋಧರು ಪ್ರಾಣತೆತ್ತರು. ಈ ದಾಳಿಯ ಹೊಣೆಯನ್ನು ಮೋದಿ ಸರಕಾರವೇ ಹೊರಬೇಕಿತ್ತು. ಆದರೆ, ಸೈನಿಕರ ಸಾವನ್ನು ನಂತರದ ಲೋಕಸಭಾ ಚುನಾವಣೆಯ ಲಾಭಕ್ಕಾಗಿ ಬಿಜೆಪಿ ಮತ್ತು ಸಂಘಪರಿವಾರ ಬಳಸಿಕೊಂಡಿತು. ಅಂತಿಮವಾಗಿ, ಮೇ 2019 ರಲ್ಲಿ ನಡೆದ ಸಂಸತ್ತಿನ ಚುನಾವಣೆಯಲ್ಲಿ ಬಿಜೆಪಿ ಶೇ. 37 ಮತಗಳನ್ನಷ್ಟೇ ಪಡೆದು, ಲೋಕಸಭೆಯಲ್ಲಿ ಬಹುಮತ ಪಡೆದು ಕೇಂದ್ರದಲ್ಲಿ ಅಧಿಕಾರ ಹಿಡಿಯಿತು. ಆದರೆ, ಪುಲ್ವಾಮಾ ದಾಳಿಯ ಬಗ್ಗೆ ಉತ್ತರ ಸಿಗದ ಹಲವು ಪ್ರಶ್ನೆಗಳು ಇನ್ನೂ ಉಳಿದುಕೊಂಡಿವೆ.

ಮೋದಿ–9 ವರ್ಷಗಳು–ಭಾಗ–33

ಪುಲ್ವಾಮ ದಾಳಿಯಲ್ಲಿ 40 ಯೋಧರ ಸಾವು:

ಸಿ. ಸಿದ್ದಯ್ಯ

2019ರ ಫೆಬ್ರವರಿ 14. ಲೋಕಸಭಾ ಚುನಾವಣೆಗೆ ಕೇವಲ 3 ತಿಂಗಳಷ್ಟೇ ಬಾಕಿ ಇತ್ತು. ದೇಶದ ಪ್ರಧಾನಿ ನರೇಂದ್ರ ಮೋದಿಯವರು ಉತ್ತರಾಖಂಡದ ಕಾರ್ಪೆಟ್ ಅಭಯಾರಣ್ಯದಲ್ಲಿ ಡಿಸ್ಕವರಿ ಚಾನೆಲ್‌ಗಾಗಿ ಚಿತ್ರೀಕರಣ ನಡೆಸುತ್ತಿದ್ದರು. ಕ್ಯಾಮರಾ ಎದುರು ವಿವಿಧ ಬಣ್ಣ ಬಣ್ಣದ ಧಿರಿಸುಗಳನ್ನು ಧರಿಸುತ್ತಾ, ವಿವಿಧ ಭಂಗಿಗಳಲ್ಲಿ ಛಾಯಾಚಿತ್ರ ತೆಗೆಸಿಕೊಳ್ಳುತ್ತಿದ್ದರು. ಪ್ರಧಾನಿಯವರ ಮನರಂಜನೆಗೆ ದಕ್ಕೆಯಾಗಬಾರದು ಎಂದೋ ಏನೋ, ಫೋನ್ ಸಿಗ್ನಲ್ ಇಲ್ಲದ ಪ್ರದೇಶವನ್ನೇ ಪ್ರಧಾನಿಯವರಿಗೆ ಆಡಳಿತ ವ್ಯವಸ್ಥೆ ಆಯ್ಕೆ ಮಾಡಿತ್ತು!! ಆ ಸಮಯದಲ್ಲಿ ದೇಶದಲ್ಲಿ ಏನೇ ಘಟನೆ ನಡೆದರೂ ಪ್ರಧಾನಿಯವರಿಗೆ ತಕ್ಷಣ ತಿಳಿಯುವಂತಿರಲಿಲ್ಲ!?

ಅದೇ ಸಮಯದಲ್ಲಿ (ಫೆಬ್ರವರಿ 14) ಜಮ್ಮು ಕಾಶ್ಮೀರದ ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಸಿಬ್ಬಂದಿಯನ್ನು ಹೊತ್ತೊಯ್ಯುತ್ತಿದ್ದ ಅರೆಸೇನಾ ವಾಹನಗಳ ಮೇಲೆ ಜೈಶ್–ಎ–ಮೊಹಮ್ಮದ್ ಉಗ್ರರು ದಾಳಿ ಮಾಡಿದರು. ಉಗ್ರರ ದಾಳಿಗೆ 40 ಸೈನಿಕರು ಬಲಿಯಾದರು. ಈ ಘಟನೆ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿತು. ಕೆಲವು ಗಂಟೆಗಳ ನಂತರ ಮೋದಿಯವರು ರುದ್ರಪುರದಲ್ಲಿ ತಮ್ಮ ಪಕ್ಷದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಆಗಲೂ ಪುಲ್ವಾಮಾ ದಾಳಿಯ ಬಗ್ಗೆ ಅವರು ಮಾತೇ ಆಡಲಿಲ್ಲ!!

ಯಾರ ಬಳಿಯೂ ಮಾತನಾಡಬೇಡಿ

ಘಟನೆ ನಡೆದ ನಾಲ್ಕು ವರ್ಷಗಳ ನಂತರ, ಏಪ್ರಿಲ್ 15, 2023 ರಂದು ಹಿರಿಯ ಪತ್ರಕರ್ತ ಕರಣ್ ಥಾಪರ್ ಅವರೊಂದಿಗೆ ದಿ ವೈರ್‌ನಲ್ಲಿ ನೀಡಿದ ಸಂದರ್ಶನದಲ್ಲಿ, ಜಮ್ಮು ಮತ್ತು ಕಾಶ್ಮೀರದ ಮಾಜಿ ಗವರ್ನರ್ ಸತ್ಯಪಾಲ್ ಮಲಿಕ್ ಬಹಳ ವಿವರವಾದ ರೀತಿಯಲ್ಲಿ ಇದನ್ನು ಬಹಿರಂಗಪಡಿಸಿದ್ದಾರೆ.

ಸತ್ಯಪಾಲ್ ಮಲಿಕ್ ಮಾತುಗಳು ಹೀಗಿವೆ: "ಪುಲ್ವಾಮ ದಾಳಿಗೆ ಮುನ್ನ 'ಆ' ಕಾರು 10 ದಿನಗಳಿಂದ ಆ ಪ್ರದೇಶದಲ್ಲಿ ಓಡಾಡಿಕೊಂಡಿತ್ತು. ಯಾರಿಗೂ ಎಲ್ಲೂ ಸಿಗಲಿಲ್ಲ. ಅದನ್ನು ಎಲ್ಲಿಯೂ ತಡೆಯಲಿಲ್ಲ. ಇದು ನೂರಕ್ಕೆ ನೂರು ಗುಪ್ತಚರ ಇಲಾಖೆಯ ತಪ್ಪು. ಮತ್ತು ನಮ್ಮ ತಪ್ಪು! ನಮ್ಮ ವ್ಯವಸ್ಥೆಯ ತಪ್ಪು. ನಾನು ನನ್ನನ್ನೂ ಸೇರಿಸಿಕೊಳ್ಳುತ್ತೇನೆ. ಸರ್ಕಾರಕ್ಕೆ ಎಲ್ಲ ವಿವರ ಗೊತ್ತಿದೆ. ಆದರೆ ಅದನ್ನು ಮುಚ್ಚಿಡಲು ಸರ್ಕಾರ ನಿರ್ಧರಿಸಿದರೆ, ಅದು ಹೇಗೆ ತಾನೆ ಹೊರಬರುತ್ತದೆ?"

"ನಾನು ನಿಮಗೆ ಸತ್ಯವನ್ನು ಹೇಳುತ್ತಿದ್ದೇನೆ. ಸಿಆರ್‌ಪಿಎಫ್ ತನ್ನ ಸೈನಿಕರನ್ನು ಕರೆದೊಯ್ಯಲು ವಿಮಾನಗಳನ್ನು ಕಳುಹಿಸಿಕೊಡುವಂತೆ ಗೃಹ ಸಚಿವಾಲಯಕ್ಕೆ ಕೇಳಿತ್ತು. ಆದರೆ, ಸಿಆರ್‌ಪಿಎಫ್ ನ ಈ ಕೋರಿಕೆಯನ್ನು ತಿರಸ್ಕರಿಸಲಾಯಿತು. ಕೇಳಿದ್ದರೆ ನಾನೇ ವ್ಯವಸ್ಥೆ ಮಾಡುತ್ತಿದ್ದೆ. ಅವರಿಗೆ ಕೇವಲ 5 ವಿಮಾನಗಳು ಬೇಕಾಗಿದ್ದವು. ಅವರು ವಿಮಾನಗಳನ್ನು ಒದಗಿಸಿದ್ದರೆ ನಮ್ಮ ಸೈನಿಕರ ಪ್ರಾಣ ಉಳಿಸಬಹುದಿತ್ತು. ಇದನ್ನು ನಾನು ಪ್ರಧಾನಿಯವರಿಗೆ ಹೇಳಿದ್ದೇನೆ. ನಮ್ಮ ತಪ್ಪಿನಿಂದ ಈ ಘಟನೆ ನಡೆದಿದೆ ಎಂದು ಹೇಳಿದ್ದೇನೆ. ಈ ಮಾತನ್ನು ಹೇಳಬೇಡಿ, ಬಾಯಿ ಮುಚ್ಚಿಕೊಂಡು ಇರುವಂತೆ ಮೋದಿ ನನಗೆ ಹೇಳಿದರು. ಪ್ರಧಾನಿ ಮಾತ್ರವಲ್ಲ, ಈ ಬಗ್ಗೆ ಏನನ್ನೂ ಹೇಳಬೇಡಿ ಎಂದು ರಕ್ಷಣಾ ಸಲಹೆಗಾರ ಅಜಿತ್ ದೋವಲ್ ಹೇಳಿದರು. ನಾನು ಮತ್ತಷ್ಟು ಹೇಳಲು ಬಯಸುತ್ತೇನೆ. ಅವರು ಅದನ್ನು ನಿಭಾಯಿಸಿದ ರೀತಿ, ನಮ್ಮ ಸೈನಿಕರ ಮೇಲೆ ದಾಳಿ ಮಾಡಿದ ಈ ಘಟನೆಯಲ್ಲಿ ನಾವು ಎಲ್ಲಿ ತಪ್ಪಿದ್ದೇವೆ ಎಂದು ನೋಡುವ ಬದಲು, ಪಾಕಿಸ್ತಾನದ ವಿರುದ್ಧ ಅದನ್ನು ತಿರುಗಿಸಲು ನಿರ್ಧರಿಸಿದರು."

'ಸರ್ಕಾರ ಹೊಣೆಯಾಗಬೇಕು' ಮಾಜಿ ಸೇನಾ ಮುಖ್ಯಸ್ಥ

ಪುಲ್ವಾಮಾ ದಾಳಿಯಲ್ಲಿ 40 ಯೋಧರ ಸಾವಿಗೆ ಮೋದಿ ಸರ್ಕಾರ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಹೊಣೆಯಾಗಬೇಕು ಎಂದು ಮಾಜಿ ಸೇನಾ ಮುಖ್ಯಸ್ಥ ಶಂಕರ್ ರಾಯ್ ಚೌಧರಿ ಹೇಳಿದ್ದಾರೆ. ಸತ್ಯಪಾಲ್ ಮಲಿಕ್ ಅವರ ಹೇಳಿಕೆಗೆ ಸಂಬಂಧಿಸಿದಂತೆ ಟೆಲಿಗ್ರಾಫ್ ಪತ್ರಿಕೆಗೆ ಪ್ರತಿಕ್ರಿಯಿಸಿ "ಸದಾ ದಾಳಿಗೆ ತುತ್ತಾಗುವ ರಸ್ತೆಯಲ್ಲಿ ಸಿಆರ್‌ಪಿಎಫ್ ಸಿಬ್ಬಂದಿ ಶ್ರೀನಗರಕ್ಕೆ ತೆರಳುವ ಬದಲು ವಿಮಾನದ ಮೂಲಕ ತೆರಳಿದ್ದರೆ ದಾಳಿಯನ್ನು ತಡೆಯಬಹುದಿತ್ತು. ಪುಲ್ವಾಮಾ ಹತ್ಯಾಕಾಂಡದ ಪ್ರಾಥಮಿಕ ಹೊಣೆಗಾರಿಕೆ ಕೇಂದ್ರ ಸರ್ಕಾರದ ಮೇಲಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರರಿಂದ ಮಾರ್ಗದರ್ಶಿಸಲ್ಪಟ್ಟ ಪ್ರಧಾನಿ ನೇತೃತ್ವದ ಸರ್ಕಾರವು ಅದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ" ಎಂದಿದ್ದಾರೆ. ಜನರಲ್ ಚೌಧರಿ ಅವರು ನವೆಂಬರ್ 1994 ರಿಂದ ಸೆಪ್ಟೆಂಬರ್ 1997 ರವರೆಗೆ ಸೇನಾ ಮುಖ್ಯಸ್ಥರಾಗಿದ್ದರು.

ಉದ್ದೇಶಪೂರ್ವಕ ನಿರ್ಲಕ್ಷ್ಯವೇ ಕಾರಣ

ದಾಳಿಯ ಎರಡು ವರ್ಷಗಳ ನಂತರ 2021 ರಲ್ಲಿ ಪುಲ್ವಾಮಾ ದಾಳಿಯ ಕುರಿತು 'ಫ್ರಂಟ್ ಲೈನ್' ಪತ್ರಿಕೆ ತನಿಖೆ ನಡೆಸಿತು. ಅದರ ತನಿಖೆಯ ಫಲಿತಾಂಶಗಳು ವಿವಿಧ ಆಘಾತಕಾರಿ ಸಂಗತಿಗಳನ್ನು ಬಹಿರಂಗಪಡಿಸಿದವು. ಆ ಮಾಹಿತಿಯೊಂದಿಗೆ ಫೆಬ್ರವರಿ 14, 2021 ರಂದು ಫ್ರಂಟ್ ಲೈನ್ ಪುಸ್ತಕ ಬಿಡುಗಡೆ ಮಾಡಿದೆ. ಅದು ಮೋದಿ ಸರ್ಕಾರವನ್ನು ನಿಖರವಾಗಿ ಬಹಿರಂಗಪಡಿಸುತ್ತದೆ. ಅದರ ಒಂದಷ್ಟು ವರದಿ ಇಲ್ಲಿದೆ.



ಪುಲ್ವಾಮಾ ದಾಳಿಯ ಸಂದರ್ಭದಲ್ಲಿ ಪ್ರತಿಪಕ್ಷಗಳು ಹಲವು ಅನುಮಾನಗಳನ್ನು ಎತ್ತಿದ್ದವು. ಕಟ್ಟುನಿಟ್ಟಿನ ಕಣ್ಗಾವಲು ಹೊರತಾಗಿಯೂ ಸಿಆರ್‌ಪಿಎಫ್ ವಾಹನಗಳ ಮೇಲೆ ದಾಳಿ ಮಾಡಲು ಭಯೋತ್ಪಾದಕರು ಸಾಕಷ್ಟು ಸ್ಫೋಟಕಗಳನ್ನು ಹೇಗೆ ಪಡೆದರು? ದಾಳಿಯ ಬಗ್ಗೆ ಏನಾದರೂ ಗುಪ್ತಚರ ಮಾಹಿತಿ ದೊರೆತಿದೆಯೇ? ಅಥವಾ ಯಾವುದೇ ಗುಪ್ತಚರ ಮಾಹಿತಿಯನ್ನು ಸಂಗ್ರಹಿಸುವುದಿಲ್ಲವೇ? ಗುಪ್ತಚರ ವಿಫಲವಾಗಿದೆಯೇ? ಎಂಬ ವಿವಿಧ ಪ್ರಶ್ನೆಗಳನ್ನು ಎತ್ತಲಾಯಿತು. ಈ ಎಲ್ಲ ಪ್ರಶ್ನೆಗಳಿಗೆ ಸರ್ಕಾರದ ಬಳಿ ಉತ್ತರವಿಲ್ಲ. ಸರ್ಕಾರ ಮತ್ತು ಸರ್ಕಾರದ ಬೆಂಬಲಿತ ಸಾಮಾಜಿಕ ಮಾಧ್ಯಮಗಳು ಗುಪ್ತಚರ ವೈಫಲ್ಯವನ್ನು ಪ್ರಶ್ನಿಸಿದಾಗ, 'ದೇಶಭಕ್ತಿ' ಹೆಸರಿನಲ್ಲಿ ಉನ್ಮಾದವನ್ನು ಬೆಳೆಸಲಾಯಿತು. ಪ್ರಶ್ನೆಗಳನ್ನು ಎತ್ತುವವರನ್ನು 'ದೇಶವಿರೋಧಿಗಳು' ಎಂಬ ಹಣೆಪಟ್ಟಿ ಕಟ್ಟಲಾಯಿತು. ಕೇಂದ್ರ ಸರ್ಕಾರದಿಂದ ಯಾವುದೇ ಗುಪ್ತಚರ ವೈಫಲ್ಯವಿಲ್ಲ; ಪುಲ್ವಾಮಾ ದಾಳಿಯ ತನಿಖೆಯನ್ನು ಎನ್‌ಐಎ ನಡೆಸಲಿದೆ. ತನಿಖೆಯಲ್ಲಿ ಸಂಪೂರ್ಣ ಸತ್ಯಾಂಶ ಬಹಿರಂಗವಾಗಲಿದೆ ಎಂದು ಸಂಸತ್ತಿಗೆ ಉತ್ತರಿಸಿತು. ಪುಲ್ವಾಮಾ ದಾಳಿಯ ಮೂರು ವಾರಗಳ ನಂತರ, ಪುಲ್ವಾಮಾ ದಾಳಿಯ ಮಾಸ್ಟರ್ ಮೈಂಡ್ ಮುದಾಜಿರ್ ಅಹ್ಮದ್ ಖಾನ್ ಕೊಲ್ಲಲ್ಪಟ್ಟರು. ದಾಳಿ ನಡೆದ 100 ಗಂಟೆಗಳಲ್ಲಿ ಆತನ ಸಹಚರ ಅಬ್ದುಲ್ ರಶೀದ್ ಕೂಡ ಹತನಾದ.

ಗುಪ್ತಚರ ಮಾಹಿತಿಯ ಲೋಪ ಆಕಸ್ಮಿಕವೇ?

ಫ್ರಂಟ್‌ಲೈನ್ ನಡೆಸಿದ ತನಿಖೆಯಲ್ಲಿ, 2019ರ ಜನವರಿ 2 ರಿಂದ ಫೆಬ್ರವರಿ 13 ರವರೆಗೆ 12 ಬಾರಿ, ಭಯೋತ್ಪಾದಕ ಸಂಘಟನೆಗಳು ಪ್ರತೀಕಾರದ ಹೆಸರಿನಲ್ಲಿ ದಾಳಿ ತಯಾರಿ ಚಟುವಟಿಕೆಗಳಲ್ಲಿ ತೊಡಗಿವೆ ಎಂದು ಗುಪ್ತಚರ ಸಂಸ್ಥೆಗಳು ಸಂಬಂಧಿತ ನಿಗಾ ಸಂಸ್ಥೆಗಳಿಗೆ ನಿರಂತರವಾಗಿ ಮಾಹಿತಿ ನೀಡಿವೆ. ದಾಳಿಗೆ ಒಂದು ದಿನ ಮುಂಚೆಯೇ (ಫೆ. 13, 2019) ಭದ್ರತಾ ಪಡೆಗಳು ದಾರಿಯಲ್ಲಿ ಆತ್ಮಾಹುತಿ ದಾಳಿ ನಡೆಸಬಹುದು ಎಂದು ಎಚ್ಚರಿಕೆ ರವಾನಿಸಲಾಗಿದೆ. ಈ ಮಾಹಿತಿಯನ್ನು ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಮಹಾನಿರ್ದೇಶಕರಿಗೆ ರವಾನಿಸಲಾಗಿದೆ. ಪುಲ್ವಾಮಾ–ಅವಂತಿಪುರ ಹೆದ್ದಾರಿ ಆರು ಬಾರಿ ಅತ್ಯಂತ ಅಪಾಯಕಾರಿ ಪ್ರದೇಶ ಎಂದು ಸೂಚಿಸಿದ್ದಾರೆ. ಜೈಶ್–ಎ–ಮೊಹಮ್ಮದ್ ಉಗ್ರರ ದಾಳಿಗೆ ಇದು ಹಾಟ್‌ಸ್ಪಾಟ್ ಆಗಿದೆ ಎಂದು ಸೂಚಿಸಿದ್ದರು.

ಇದೆಲ್ಲದರ ನಂತರವೂ – ಅಸಾಮಾನ್ಯವಾಗಿ 2019ರ ಫೆ. 14 ರಂದು, 2547 ಸಿಆರ್‌ಪಿಎಫ್ ಸಿಬ್ಬಂದಿಯನ್ನು ಹೊತ್ತ 78 ವಾಹನಗಳ ಉದ್ದನೆಯ ಸಾಲು ಸಾವನ್ನು ಎದುರಿಸುವ ಪ್ರಯಾಣವನ್ನು ಪ್ರಾರಂಭಿಸಿತು. ಪುಲ್ವಾಮಾ ದಾಳಿಯ ಮಾಸ್ಟರ್ ಮೈಂಡ್ ಜೈಶ್–ಎ–ಮೊಹಮ್ಮದ್ ಭಯೋತ್ಪಾದಕ ಸಂಘಟನೆ ಮುದಾಸಿರ್ ಅಹ್ಮದ್ ಖಾನ್ ಭಾರೀ ಆತ್ಮಾಹುತಿ ದಾಳಿಗೆ ಯೋಜನೆ ರೂಪಿಸಿದ್ದ ಎಂಬುದು ಗುಪ್ತಚರ ಸಂಸ್ಥೆಗಳಿಗೆ ತಿಳಿದಿತ್ತು. ಅವನ ಚಲನವಲನಗಳ ಬಗ್ಗೆ ಸರ್ಕಾರಕ್ಕೆ ಅರಿವಿತ್ತು. ಮುದಾಸಿರ್ ಅಹ್ಮದ್ ಖಾನ್ ನ ಲಾಲ್ದಿರಾಲ್ ಪ್ರದೇಶದಲ್ಲಿನ ಸ್ಥಳವು ಭದ್ರತಾ ಪಡೆಗಳು ಮತ್ತು ಪೊಲೀಸರಿಗೂ ತಿಳಿದಿತ್ತು. ಈತ ಈಗಾಗಲೇ ಲೆತ್‌ಪುರ ಶಿಬಿರದ ದಾಳಿಯಲ್ಲಿ ಐವರು ಸಿಆರ್‌ಪಿಎಫ್ ಸಿಬ್ಬಂದಿಯನ್ನು ಹತ್ಯೆಗೈದ ವ್ಯಕ್ತಿ. ಆದರೆ ಗುಪ್ತಚರ ಮಾಹಿತಿ ಆಧರಿಸಿ ತ್ವರಿತವಾಗಿ ಕ್ರಮಕೈಗೊಳ್ಳದೆ ಸರಕಾರ ಸಂಪೂರ್ಣ ನಿರಾಸಕ್ತಿ ತಾಳಿತು.

ಗುಪ್ತಚರ ಮಾಹಿತಿಯು ಭಯೋತ್ಪಾದಕರ ಗುರುತು, ಅವರ ಉದ್ದೇಶ, ಸ್ಥಳ ಇತ್ಯಾದಿಗಳನ್ನು ನಿರ್ದಿಷ್ಟವಾಗಿ ಸೂಚಿಸಿದರೆ, ಆ ಮಾಹಿತಿಯನ್ನು 'ತಕ್ಷಣ ಕ್ರಮಕೈಗೊಳ್ಳಬೇಕಾದ ಗುಪ್ತಚರ ಮಾಹಿತಿ (actionable intelli gence)' ಎನ್ನಲಾಗುತ್ತದೆ. ಮುಂಬರುವ ಸಾವಿನ ದಾಳಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಎಲ್ಲಾ 12 ಗುಪ್ತಚರ ಸೇವೆಗಳನ್ನು ಎಲ್ಲಾ ಸರ್ಕಾರಿ ಏಜೆನ್ಸಿಗಳೊಂದಿಗೆ ಹಂಚಿಕೊಳ್ಳಲಾಗಿದೆ. ಮುದಸಿರ್ ಅಹ್ಮದ್ ಖಾನ್ ಅವರನ್ನು ಸುಲಭವಾಗಿ ಬಂಧಿಸಬಹುದಿತ್ತು ಎಂದು ಹೆಸರು ಹೇಳಲು ಇಚ್ಛಿಸದ ಗುಪ್ತಚರ ವಲಯದ ಕೆಲವರು ಹೇಳಿದ್ದಾರೆ. ಈ ಎಲ್ಲ ಮಾಹಿತಿಗಳನ್ನು ನಿರ್ಲಕ್ಷಿಸುವುದಕ್ಕೆ ಯಾರು ಹೊಣೆ ಎಂಬುದಕ್ಕೆ ಉತ್ತರವಿಲ್ಲ. ದಾಳಿ ನಡೆಯುವ ಕೆಲ ದಿನಗಳ ಹಿಂದೆ ಅವಂತಿಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ವರ್ಗಾವಣೆ ಮಾಡಲಾಗಿತ್ತು. ಗುಪ್ತಚರ ವರದಿಗಳು ಬರುತ್ತಿರುವ ಸಂದರ್ಭದಲ್ಲಿ ಅವರನ್ನು ಏಕೆ ಬದಲಾಯಿಸಲಾಯಿತು ಎಂಬುದು ನಿಗೂಢವಾಗಿದೆ.

ಮೋದಿ ಅವಕಾಶಕ್ಕಾಗಿ ಕಾಯುತ್ತಿದ್ದರು

ಮೋದಿ ಅವಕಾಶಕ್ಕಾಗಿ ಕಾಯುತ್ತಿದ್ದರು. ಆ ಅವಕಾಶ ಏಪ್ರಿಲ್–ಮೇನಲ್ಲಿ ಬಂದಿತು. ಪುಲ್ವಾಮಾ ದಾಳಿಗೂ ಮುನ್ನ ಅವರು 'ಅಭಿವೃದ್ಧಿ, ಒಳಗೊಳ್ಳುವ ಅಭಿವೃದ್ಧಿ' ಕುರಿತು ಮಾತನಾಡುತ್ತಿದ್ದರು. ಸಂಸತ್ ಚುನಾವಣೆಯ ಕುರಿತಾಗಿ ಸಮೀಕ್ಷೆಗಳು ಬಿಡುಗಡೆಗೊಳ್ಳಲು ಪ್ರಾರಂಭಿಸಿದವು. ಅತಂತ್ರ ಲೋಕಸಭೆ ಬರಬಹುದೆಂಬ ಮುನ್ಸೂಚನೆ ಹೊಂದಿತ್ತು.

ಸೆಂಟರ್ ಫಾರ್ ಸ್ಟಡಿ ಆಫ್ ಡೆವಲಪಿಂಗ್

ಪುಟ 14 ಕ್ಕೆ

ಸಿಆರ್‌ಪಿಎಫ್ ತನ್ನ ಸೈನಿಕರನ್ನು ಕರೆದೊಯ್ಯಲು ವಿಮಾನಗಳನ್ನು ಕಳುಹಿಸಿಕೊಡುವಂತೆ ಗೃಹ ಸಚಿವಾಲಯಕ್ಕೆ ಕೇಳಿತ್ತು. ಆದರೆ, ಸಿಆರ್‌ಪಿಎಫ್ ನ ಈ ಕೋರಿಕೆಯನ್ನು ತಿರಸ್ಕರಿಸಲಾಯಿತು. ಕೇಳಿದ್ದರೆ ನಾನೇ ವ್ಯವಸ್ಥೆ ಮಾಡುತ್ತಿದ್ದೆ. ಅವರಿಗೆ ಕೇವಲ 5 ವಿಮಾನಗಳು ಬೇಕಾಗಿದ್ದವು. ಅವರು ವಿಮಾನಗಳನ್ನು ಒದಗಿಸಿದ್ದರೆ ನಮ್ಮ ಸೈನಿಕರ ಪ್ರಾಣ ಉಳಿಸಬಹುದಿತ್ತು. ಇದನ್ನು ನಾನು ಪ್ರಧಾನಿಯವರಿಗೆ ಹೇಳಿದ್ದೇನೆ. ನಮ್ಮ ತಪ್ಪಿನಿಂದ ಈ ಘಟನೆ ನಡೆದಿದೆ ಎಂದು ಹೇಳಿದ್ದೇನೆ. ಈ ಮಾತನ್ನು ಹೇಳಬೇಡಿ, ಬಾಯಿ ಮುಚ್ಚಿಕೊಂಡು ಇರುವಂತೆ ಮೋದಿ ನನಗೆ ಹೇಳಿದರು.



– ಸತ್ಯಪಾಲ್ ಮಲಿಕ್

ಕಾರ್ಪೊರೇಟ್‌ಗಳ ಚುನಾವಣಾ ಬಾಂಡ್ ವ್ಯವಸ್ಥೆಯ ನಿರ್ವಹಣೆಗೆ ತೆರಿಗೆ–ಪಾವತಿದಾರರಿಂದಲೇ 13.5 ಕೋಟಿ ರೂ. ವಸೂಲಿ!

2018 ರಲ್ಲಿ ಚುನಾವಣಾ ಬಾಂಡ್‌ಗಳನ್ನು ಒಪ್ಪುವ ಶಾಸನವನ್ನು ಅಂಗೀಕರಿಸಲು ಸರ್ಕಾರಕ್ಕೆ ಸಾಧ್ಯವಾದಾಗಿನಿಂದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ)ಒಟ್ಟು 15,956.3096 ಕೋಟಿ ರೂಪಾಯಿ ಮೌಲ್ಯದ ಚುನಾವಣಾ ಬಾಂಡ್‌ಗಳನ್ನು 29 ಕಂತುಗಳಲ್ಲಿ ಮಾರಾಟ ಮಾಡಿದೆ.

ಚುನಾವಣಾ ಬಾಂಡ್‌ಗಳನ್ನು ವಿತರಿಸಲು ಅಧಿಕಾರ ಹೊಂದಿರುವ ನಿಯೋಜಿತ ಬ್ಯಾಂಕ್ ಆಗಿರುವ ಎಸ್‌ಬಿಐ, ಇದನ್ನು ನಿರ್ವಹಿಸಲು, "ಕಮಿಷನ್, ಮುದ್ರಣ ಮತ್ತು ಇತರ ವೆಚ್ಚಗಳಿಗಾಗಿ" ಸರ್ಕಾರಕ್ಕೆ 13.50 ಕೋಟಿ ರೂಪಾಯಿಗಳನ್ನು ವಿಧಿಸಿದೆ. ಇದು ನಿವೃತ್ತ ಸೇನಾಧಿಕಾರಿ ಕೊಮೊಡೊರ್ ಲೋಕೇಶ್ ಬತ್ರಾ ಆರ್.ಟಿ.ಐ. ಅಡಿಯಲ್ಲಿ ಪಡೆದಿರುವ ಮಾಹಿತಿ.

ಬತ್ರಾರವರು ಹೇಳುವಂತೆ, ಈ ಯೋಜನೆಯ ವಿಪರ್ಯಾಸವೆಂದರೆ ಚುನಾವಣಾ ಬಾಂಡ್ ಮೂಲಕ ಕೋಟಿಗಟ್ಟಲೆ 'ದಾನ' ಪಡೆಯುವವರು ಎಸ್‌ಬಿಐಗೆ ಯಾವುದೇ 'ಸೇವಾ ಶುಲ್ಕ'ವನ್ನು ಪಾವತಿಸಬೇಕಾಗಿಲ್ಲ. ಇದನ್ನು ಮತ್ತು ಬಾಂಡ್‌ಗಳ ಮುದ್ರಣ ವೆಚ್ಚವನ್ನು ಕೂಡ ಸರ್ಕಾರ, ಅಂದರೆ ಅಂತಿಮವಾಗಿ ತೆರಿಗೆ ಪಾವತಿದಾರರು ಭರಿಸುತ್ತಾರೆ.

ಮಾರಾಟವಾದ ಒಟ್ಟು ಬಾಂಡ್‌ಗಳಲ್ಲಿ 23.8874 ಕೋಟಿ ರೂ. ಮೌಲ್ಯದ 194 ಬಾಂಡ್‌ಗಳನ್ನು ನಗದೀಕರಿಸಲಾಗಿಲ್ಲ ಎಂದೂ ಈ ಉತ್ತರದಿಂದ ತಿಳಿದು ಬಂದಿದೆ. ಇದು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಗೆ (ಪಿಎಂಎನ್‌ಆರ್‌ಎಫ್) ವರ್ಗಾಯಿಸಲ್ಪಡುತ್ತದೆ.

ಈಗಾಲೇ ನಮ್ಮ ಓದುಗರಿಗೆ ತಿಳಿದಿರುವಂತೆ, ಈ ಚುನಾವಣಾ ಬಾಂಡ್ ವ್ಯವಸ್ಥೆ ಕಪ್ಪು ಹಣವನ್ನು, ಮತ್ತು ಆ ಮೂಲಕ ಭ್ರಷ್ಟಾಚಾರವನ್ನೂ ಕಾನೂನುಬದ್ಧಗೊಳಿಸಿರುವ ಒಂದು ವ್ಯವಸ್ಥೆ ಎಂಬ ಕಟು ಟೀಕೆಗೆ ಒಳಗಾಗಿದೆ. **ಈ ಹಿಂದೆ ಖಾಸಗಿ ಕಂಪನಿಗಳು ರಾಜಕೀಯ ಪಕ್ಷಗಳಿಗೆ ನೀಡಬಹುದಾದ ನಿಧಿಯ ಅನುಪಾತಕ್ಕೆ ಮಿತಿ ಇತ್ತು, ಆದರೆ ಈ ವ್ಯವಸ್ಥೆ ಜಾರಿಗೆ ಬಂದ ಮೇಲೆ ಅಂತಹ ಯಾವ ಮಿತಿಯೂ ಇಲ್ಲ. ಆದರೂ ಇದನ್ನು ಅಮೃತ ಕಾಲದ ಸರಕಾರ 'ಪಾರದರ್ಶಕತೆ' ಎನ್ನುತ್ತದೆ!**

ಇದನ್ನು ಪ್ರಶ್ನಿಸಿ ಅರ್ಜಿಗಳನ್ನು ಸಲ್ಲಿಸಿದ ನಾಲ್ಕು ವರ್ಷಗಳ ನಂತರ ಸುಪ್ರೀಂ ಕೋರ್ಟ್ ಕೊನೆಗೂ ವಿಚಾರಣೆಗಳನ್ನು ಕೈಗೆತ್ತಿಕೊಂಡಾಗ ಇದೇ ಸರ್ಕಾರವು ವಿಚಾರಣೆಯಲ್ಲಿ, ರಾಜಕೀಯ ಪಕ್ಷಗಳಿಗೆ 'ದಾನ' ನೀಡಿರುವ ದೊಡ್ಡ ಕಾರ್ಪೊರೇಟ್ ದಾನಿಗಳ ಖಾಸಗಿತನದ ಹಕ್ಕನ್ನು ರಕ್ಷಿಸಬೇಕೆಂದು ಮನವಿ ಮಾಡಿದೆ! ದಾನಿಗಳು ಅಥವ ದಾನ ಸ್ವೀಕರಿಸುವವರ ಗುರುತನ್ನು ತಿಳಿದುಕೊಳ್ಳುವ ಹಕ್ಕು ನಾಗರಿಕರಿಗೆ ಇಲ್ಲ ಎಂದು ಸರಕಾರದ ಪರವಾಗಿ ಸಾಲಿಸಿಟರ್ ಜನರಲ್ ಸುಪ್ರಿಂ ಕೋರ್ಟ್ ಮುಂದೆ ತರ್ಕ ಮಂಡಿಸಿದ್ದಾರೆ! ಈ ಬಗ್ಗೆ ಟಿಪ್ಪಣಿ ಮಾಡುತ್ತ ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಷಿ, ಈ ಹೇಳಿಕೆ ಒಂದು ಬನಾನಾ ರಿಪಬ್ಲಿಕ್‌ಗೆ ತಕ್ಕುದೆನಿಸಬಹುದು, ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವವೆನಿಸಿರುವ, ಮತ್ತು ವಿಶ್ವಗುರುವಾಗುವ ಆಶಯ ಹೊಂದಿರುವ ದೇಶಕ್ಕೆ ಶೋಭೆ ತರುವಂತದ್ದಲ್ಲ ಎಂದು ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸ್ವತಃ ಚುನಾವಣಾ ಆಯೋಗ ಆರಂಭದಲ್ಲಿ ಈ ವ್ಯವಸ್ಥೆಯನ್ನು ವಿರೋಧಿಸಿತ್ತು ಎಂಬುದನ್ನೂ ನೆನಪಿಸಿಕೊಳ್ಳಬಹುದು.

ಸುಪ್ರೀಂ ಕೋರ್ಟ್‌ವಿಚಾರಣೆಗಳನ್ನು ಮುಗಿಸಿ ನವೆಂಬರ್ 2, 2023 ರಂದು ತನ್ನ ತೀರ್ಪನ್ನು ಕಾಯ್ದಿರಿಸಿದೆ. ಅಂದರೆ ಎರಡು ತಿಂಗಳಾಗಿದೆ. ಇನ್ನೂ ತೀರ್ಪು ಪ್ರಕಟಿಸಿಲ್ಲ. 2023ರಲ್ಲಿ ದೇಶದ ಅತ್ಯುಚ್ಚ ನ್ಯಾಯಾಲಯ ವಿಚಾರಣೆಗಳ ವೇಳೆಗಳಲ್ಲಿ ಸರಕಾರದ ವರ್ತನೆಗಳ ಬಗ್ಗೆ ಕಟು ಟಿಪ್ಪಣಿ ಮಾಡಿದರೂ, ಕೇಂದ್ರ ಸರ್ಕಾರದ ವಿರುದ್ಧ ಒಂದೇ ಒಂದು ತೀರ್ಪು ನೀಡಿಲ್ಲ ಎಂದು ಪ್ರತಿಷ್ಠಿತ ನ್ಯಾಯವಾದಿಗಳೂ ಆಶ್ಚರ್ಯ ಪಡುತ್ತಿರುವ ಹಿನ್ನೆಲೆಯಲ್ಲಿ, ವಿಶೇಷವಾಗಿ ಕಲಮು 370 ಮತ್ತು ಅಡಾಣಿ ವ್ಯವಹಾರದ ಇತ್ತೀಚಿನ ತಿರ್ಪುಗಳಲ್ಲಿ ಅದರ ತೀರ್ಪುಗಳ ವೈಖರಿಯ ಹಿನ್ನೆಲೆಯಲ್ಲಿ ಹೆಚ್ಚಿನ ನಿರೀಕ್ಷೆಯನ್ನೇನೂ ಇಟ್ಟುಕೊಳ್ಳುವಂತಿಲ್ಲ ಎಂದೂ ಹಲವು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.


2018 ರಲ್ಲಿ ಚುನಾವಣಾ ಬಾಂಡ್ ಯೋಜನೆ ಪ್ರಾರಂಭವಾದಾಗಿನಿಂದ, ಇದರ ಅತಿ ದೊಡ್ಡ ಫಲಾನುಭವಿ ಆಳುವ ಪಕ್ಷ ಬಿಜೆಪಿಯೇ ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲವಲ್ಲ.

'ಚುನಾವಣಾ ಟ್ರಸ್ಟ್ ಹಣದಲ್ಲೂ ಸಿಂಹ ಪಾಲು!

ಇದಕ್ಕೆ ಮೊದಲು ಯುಪಿಎ–2 ಸರಕಾರ ತನ್ನ ಆಳ್ವಿಕೆಯ ಕೊನೆಯ ಘಟ್ಟದಲ್ಲಿ ಪರಿಚಯಿಸಿದ 'ಚುನಾವಣಾ ಟ್ರಸ್ಟ್' ವ್ಯವಸ್ಥೆಯಲ್ಲೂ ಈಗಿನ ಆಳುವ ಪಕ್ಷದ್ದೇ ಮೇಲುಗೈ ಎಂಬುದರಲ್ಲಿಯೂ ಆಶ್ಚರ್ಯವೇನಿಲ್ಲ. 2022–23ರ ಹಣಕಾಸು ವರ್ಷವೊಂದರಲ್ಲೇ 5 'ಚುನಾವಣಾ ಟ್ರಸ್ಟ್'ಗಳು ಪಡೆದ ಒಟ್ಟು 366.49 ಕೋಟಿ ರೂ.ಗಳಲ್ಲಿ ಬಿಜೆಪಿ 259.08 ಕೋಟಿ ರೂ., ಅಂದರೆ 70.69% ಪಡೆದಿದೆ.

ಇದೂ ಚುನಾವಣಾ ಬಾಂಡ್‌ನಂತೆ ಕಾರ್ಪೊರೇಟ್‌ಗಳ ವಂತಿಗೆ ಪಡೆಯಲು ರೂಪಿಸಿದ ಯೋಜನೆ. ಆದರೆ ಇದರಲ್ಲಿ ಇಂತಹ ಟ್ರಸ್ಟ್‌ಗಳು ತಾವು ಪಡೆದ ವಂತಿಗೆಗಗಳ 95% ವನ್ನು ಸಂಬಂಧಪಟ್ಟ ಹಣಕಾಸು ವರ್ಷದಲ್ಲೇ ರಾಜಕೀಯ ಪಕ್ಷಗಳಿಗೆ ನೀಡಬೇಕು. ಮತ್ತು ತಾವು ಪಡೆದ ವಂತಿಗೆಗಗಳ ವಿವರಗಳನ್ನು ಪ್ರತಿ ವರ್ಷ ಚುನಾವಣಾ ಆಯೋಗಕ್ಕೆ ತಿಳಿಸಬೇಕು. ಈ ವರ್ಷ ಈ ಟ್ರಸ್ಟ್‌ಗಳು 99.99% ನಿಧಿಗಳನ್ನು ಹಂಚಿವೆ ಎಂದು ಎ.ಡಿ.ಆರ್ ಈ ಕುರಿತು ಮಾಡಿರುವಪರಾಮರ್ಶೆಯಿಂದ ತಿಳಿದು ಬಂದಿದೆ.

ಹಿಟ್ & ರನ್ ಸರಕಾರ?



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ, ಫೇಸ್ ಬುಕ್

146 ಸಂಸದರನ್ನು ಹೊರಹಾಕಿ ಯಾವ ಚರ್ಚೆಗೂ ಅವಕಾಶವಿಲ್ಲದಂತೆ ಸಂಸತ್ತಿನಲ್ಲಿ ಪಾಸು ಮಾಡಿಸಿಕೊಂಡ ಮಸೂದೆಗಳಲ್ಲಿ ಒಂದು ಬೀದಿಗಳಲ್ಲಿ ಹಿನ್ನಡೆ ಎದುರಿಸಿದೆ. ಇಂಡಿಯನ್ ಪಿನಲ್ ಕೋಡ್ ಜಾಗದಲ್ಲಿ ಬಂದಿರುವ ಭಾರತೀಯ ನ್ಯಾಯಸಂಹಿತೆಯ 'ಹಿಟ್ ಅಂಡ್ ರನ್'ಗೆ ಬಹು ಕಠಿಣ ಶಿಕ್ಷೆ ವಿಧಿಸಿರುವ ಸೆಕ್ಷನ್ 104(1) ಮತ್ತು (2) ಜಾರಿಗೆ ತೀವ್ರ ಪತ್ರಿಭಟನೆ ವ್ಯಕ್ತವಾದ ನಂತರ ಗೃಹ ಮಂತ್ರಿಗಳು ಈ ಬಗ್ಗೆ ಚರ್ಚೆ ನಡೆಸೋಣ ಎಂದಿದ್ದಾರೆ.

ಈ ಮೊದಲು ಮೂರು ರೈತ–ವಿರೋಧಿ ಕಾನೂನುಗಳನ್ನು ಸುಗ್ರೀವಾಜ್ಞೆಗಳ ಮೂಲಕ ಹೇರಿ, ನಂತರ ಚರ್ಚೆಯಿಲ್ಲದೆ ಪಾಸು ಮಾಡಿಸಿಕೊಂಡು ಕೊನೆಗೂ ಹಿಂತೆಗೆದುಕೊಂಡಿರುವುದನ್ನು ಈ ಸಂದರ್ಭದಲ್ಲಿ ಈ ವ್ಯಂಗ್ಯಚಿತ್ರಕಾರರು ನೆನಪಿಸಿದ್ದಾರೆ.



ಹಿಟ್ & ರನ್–1 ಹಿಟ್& ರನ್–2

ವ್ಯಂಗ್ಯಚಿತ್ರ ಕೃಪೆ: ಇರ್ಫಾನ್, ನ್ಯೂಸ್‌ಕ್ಲಿಕ್

ರೈಲ್ವೆ ಆದಾಯ ಹೆಚ್ಚಿಸಿದ ಪ್ರಶಸ್ತಿ ಪಾತ್ರರಿಗೇ ಖರ್ಚಿನ ನಿಜ ಮಾಹಿತಿ ನೀಡಿದ್ದಕ್ಕೆ ವರ್ಗಾವಣೆ!

ಒಕ್ಕೂಟ ಸರಕಾರದ ಸಾಧನೆಗಳ 'ಸೆಲ್ಫಿ ಅಭಿಯಾನಕ್ಕೆ ಸೆಂಟ್ರಲ್ ರೈಲ್ವೆಯ 5 ಡಿವಿಷನ್‌ಗಳಲ್ಲಿ 50 ಸೆಲ್ಫಿ ಬೂತ್‌ಗಳ ಮೇಲೆ 1.62 ಕೋಟಿ ರೂ. ಖರ್ಚು ಮಾಡಿದೆ ಎಂದು ಆರ್‌ಟಿಐ ಮಾಹಿತಿಯ ಲೆಕ್ಕಾಚಾರದಿಂದ ತಿಳಿದು ಬಂದಿರುವ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ಈ ಸುದ್ದಿ ಪ್ರಕಟವಾದ ಮೂರು ದಿನಗಳ ಒಳಗೇ ಸೆಂಟ್ರಲ್ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ (ಸಿಪಿಆರ್‌ಒ) ಯವರನ್ನು ಯಾವ ಕಾರಣವೂ ಕೊಡದೆ, ನೋಟೀಸೂ ಕೊಡದೆ ವರ್ಗಾವಣೆ ಮಾಡಲಾಗಿದೆ, ಎಲ್ಲಿಗೆ ಎಂದೂ ಸಹ ಹೇಳಿಲ್ಲ ಎಂದು ವರದಿಯಾಗಿದೆ.

ಗಮನಾರ್ಹ ಸಂಗತಿಯೆಂದರೆ, ಇವರನ್ನು ಕೆಲವು ತಿಂಗಳ ಹಿಂದೆಯಷ್ಟೇ ಪ್ರಸಕ್ತ ಹುದ್ದೆಗೆ ವರ್ಗಾಯಿಸಲಾಗಿತ್ತು. ಅಷ್ಟೇ ಅಲ್ಲ, ಎರಡು ವಾರಗಳ ಹಿಂದೆ, ಡಿಸೆಂಬರ್ 15ರಂದಷ್ಟೇ, ಇವರಿಗೆ, ಭುಸಾವಳದಲ್ಲಿ ಸೀನಿಯರ್ ಡಿವಿಜನಲ್ ಕಮರ್ಷಿಯಲ್ ಮ್ಯಾನೇಜರ್ ಆಗಿ ರೈಲ್ವೆ ಆದಾಯವನ್ನು ಹೆಚ್ಚಿಸಲು ವಿಶೇಷ ಪ್ರಯತ್ನ ಮಾಡಿದವರು ಎಂದು ಸ್ವತಃ ರೈಲ್ವೆ ಮಂತ್ರಿಗಳೇ ಪ್ರಶಸ್ತಿ ನೀಡಿದ್ದರು. ಮತ್ತು ನೌಕರರ ನಡುವೆ ಅತ್ಯುತ್ತಮ ನಡವಳಿಕೆಗಳನ್ನು ಪ್ರೋತ್ಸಾಹಿಸಿದ ಅತ್ಯುತ್ತಮ ಕೆಲಸ ನಿರ್ವಹಿಸಿದ ರೈಲ್ವೆ ಸಿಬ್ಬಂದಿ ಎಂದೂ ಸನ್ಮಾನಿಸಲಾಗಿತ್ತು!

ಆದರೆ ಈಗ ಈ ವರ್ಗಾವಣೆ 'ಅಮೃತ ಕಾಲ'ದ ಬಗ್ಗೆ ಏನು ಹೇಳುತ್ತದೆ?


ಇದರ ಹಿಂದಿನ ದಿನ ರೈಲ್ವೆ ಮಂಡಳಿ ಆರ್‌ಟಿಐ ಅಡಿಯಲ್ಲಿ ಮಾಹಿತಿ ಕೇಳಿರುವ ಬಗ್ಗೆ ವ್ಯವಹರಿಸುವಾಗ ಜಾಗರೂಕತೆಯಿಂದ ಮುಂದುವರೆಯಬೇಕು ಎಂದು ರೈಲ್ವೆಯ ಎಲ್ಲ ವಲಯಗಳ ಜನರಲ್ ಮ್ಯಾನೇಜರುಗಳು ಮತ್ತು ಡಿವಿಜನಲ್ ರೈಲ್ವೆ ಮ್ಯಾನೇಜರುಗಳಿಗೆ ಸಲಹಾ ಪತ್ರ ಹೊರಡಿಸಿರುವುದಾಗಿಯೂ ವರದಿಯಾಗಿದೆ.

ಸೆಂಟ್ರಲ್‌ರೈಲ್ವೆ ಬಿಟ್ಟು ಬೇರೆಯಾವ ವಲಯವೂ ಇದು ವರೆಗೆ ಒಟ್ಟು ಖರ್ಚಿನ ವಿವರಗಳನ್ನು ಕೊಟ್ಟಿಲ್ಲ.

ಪ್ರಧಾನಿಗಳ ಸಂಸದ್ ಕ್ಷೇತ್ರದ ಅತ್ಯಾಚಾರ ಪ್ರಕರಣದಲ್ಲಿ ಬಿಜೆಪಿ ಐಟಿ ಸೆಲ್ ಮಂದಿಯೇ ಪ್ರಮುಖ ಆರೋಪಿಗಳು!

ವಾರಣಾಸಿಯ ಐಐಟಿ–ಬಿಹೆಚ್‌ಯು ನಲ್ಲಿ ನವಂಬರ್ 1 ರಂದು 20 ವರ್ಷದ ಬಿಟೆಕ್ ವಿದ್ಯಾರ್ಥಿನಿಯ ಮೇಲೆ ಸಾಮೂಹಿಕ ಅತ್ಯಾಚಾರದ ಪ್ರಕರಣದಲ್ಲಿ ಉತ್ತರ ಪ್ರದೇಶ ಪೊಲೀಸರು ಎರಡು ತಿಂಗಳ ನಂತರ ಮೂವರನ್ನು ಬಂಧಿಸಿದ್ದು ಇವರಲ್ಲಿ ಇಬ್ಬರು ಬಿಜೆಪಿ ಐಟಿ ಸೆಲ್ ಸದಸ್ಯರು, ಕಾಶಿ ಪೊಲೀಸರು ಅವರನ್ನು ಬಂಧಿಸುವ ಹಿಂದಿನ ದಿನದವರೆಗೂ ಸಾಮಾಜಿಕ ಮಾಧ್ಯಮದಲ್ಲಿ ಸಕ್ರಿಯರಾಗಿದ್ದರು ಎಂದು ತಿಳಿದು ಬಂದಿದೆ.

28 ವರ್ಷದ ಕುಣಾಲ್ ಪಾಂಡೆ ಎಂಬಾತ ವಾರಣಾಸಿ(ಮಹಾನಗರ) ಐಟಿ ಸೆಲ್‌ನ ಸಂಯೋಜಕ ಮತ್ತು 20 ವರ್ಷದ ಸಕ್ಷಮ್ ಪಟೇಲ್ ಎಂಬಾತ ಉಪ–ಸಂಯೋಜಕ ಎಂದು ತಮ್ಮ ಸಾಮಾಜಿಕ ಮಾಧ್ಯಮ ಪೇಜ್‌ಗಳಲ್ಲಿ ಹೇಳಿಕೊಂಡಿದ್ದರು. ಆದರೆ, ಅವರನ್ನು ಬಂಧಿಸಿದ ಕೂಡಲೇ ಅವರ ಖಾತೆಗಳನ್ನು ಅಳಿಸಲಾಗಿದೆ. ಪಾಂಡೆ ಒಬ್ಬ ಸ್ಥಳೀಯ ಬಿಜೆಪಿ ಕಾರ್ಪೊರೇಟರ್ ಮಗಳನ್ನು ಮದುವೆಯಾಗಿದ್ದಾರೆ ಎಂದೂ ಹೇಳಲಾಗಿದೆ. ಇದಲ್ಲದೆ, ಅವರು ಪ್ರಮುಖ ಬಿಜೆಪಿ ನಾಯಕರೊಂದಿಗೆ ಇರುವ ಚಿತ್ರಗಳು ಅವರ ಬಂಧನದ ನಂತರ ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಂಡಿವೆ.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಆದರೂ, ಬಿಜೆಪಿ ವಾರಣಾಸಿ(ಮಹಾನಗರ) ಅಧ್ಯಕ್ಷರು ಐಟಿ ಸೆಲ್‌ನ್ನು ನವಂಬರ್ 2023ರಲ್ಲಿ ವಿಸರ್ಜಿಸಲಾಗಿದೆ, ನಂತರ ಅದನ್ನು ಪುನರ್ರಚಿಸಲಾಗಿಲ್ಲ ಎಂದು ಸಮಜಾಯಿಷಿ ಕೊಡಲು ಪ್ರಯತ್ನಿಸಿದ್ದಾರೆ.

ಈ ಆರೋಪಿಗಳು ವಿದ್ಯಾರ್ಥಿನಿಯರನ್ನು ಲೈಂಗಿಕ ಕಿರುಕುಳಕ್ಕೆ ಗುರಿಪಡಿಸಲು ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಆಗಾಗ ಭೇಟಿ ಕೊಡುತ್ತಲೇ ಇದ್ದರು ಎಂದು ವಿಚಾರಣೆಯ ವೇಳೆಯಲ್ಲಿ ತಿಳಿದು ಬಂದಿದೆ.

ಆಪಾದಿತರ ಮನೆಗಳ ಸುತ್ತಮುತ್ತಲಿನ ಜನರು ಕೂಡ ಈ ಹುಡುಗರು ಸ್ಥಳೀಯರನ್ನು ಹೆದರಿಸಿ–ಬೆದರಿಸಿ ಸ್ಥಳೀಯ ಬಿಜೆಪಿ ನಾಯಕರೊಂದಿಗೆ ತಮ್ಮ ಸಂಪರ್ಕಗಳನ್ನು ಪ್ರದರ್ಶಿಸಿ ಪಾರಾಗುತ್ತಿದ್ದರು ಎಂದು ಹೇಳಿರುವದಾಗಿ ವರದಿಯಾಗಿದೆ.

ಪ್ರಧಾನ ಮಂತ್ರಿಗಳ ಈ ಲೋಕಸಭಾ ಕ್ಷೇತ್ರದಲ್ಲಿ ಈ ಹೀನ ಘಟನೆಯ ವಿರುದ್ಧ ವಾರಣಾಸಿಯಲ್ಲಿ ವ್ಯಾಪಕ ಪ್ರತಿಭಟನೆಗಳು ನಡೆಯುತ್ತಿವೆ. ಮುಖ್ಯವಾಗಿ ವಿದ್ಯಾರ್ಥಿಗಳು ಮತ್ತು ನಾಗರಿಕ ಸಮಾಜದ ಗಣ್ಯರು ಈ ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಘಟನೆ ನಡೆದು 60 ದಿನಗಳ ವರೆಗೆ ಪೋಲಿಸರು ಮತ್ತು ಬಿಜೆಪಿ ಏನು ಮಾಡುತ್ತಿದ್ದವು, ಈ ಅವಧಿಯಲ್ಲಿ ಅವರನ್ನು ರಕ್ಷಿಸುತ್ತಿದ್ದವರು ಯಾರು ಎಂಬ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಯೋಗಿ ಮಹಾರಾಜರ ಬುಲ್‌ಡೋಜರ್ ನ್ಯಾಯ ಏಕೆ ನಿಷ್ಕ್ರಿಯವಾಗಿದೆ ಎಂದು ಕೇಳುತ್ತಿದ್ದಾರೆ. ಗೋದಿ ಮೀಡಿಯಾದ ಮೌನವನ್ನೂ ಪ್ರಶ್ನಿಸಲಾಗುತ್ತಿದೆ.



ನವ–ಉದಾರವಾದಿ ಯುಗವು ಜಾಗತೀಕರಣಗೊಂಡ ಹಣಕಾಸು ಬಂಡವಾಳದ ನಾಯಕತ್ವವನ್ನು ಅವಶ್ಯಗೊಳಿಸಿರುವುದರಿಂದ ಮತ್ತು ಈ ಬಂಡವಾಳಕ್ಕೆ ಜಾಗತಿಕ ಮಟ್ಟದ ಅಂದರೆ ಏಕರೂಪದ ತಂತ್ರಜ್ಞರ ಅಗತ್ಯವಿರುವುದರಿಂದ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಂತಹ ತಂತ್ರಜ್ಞರನ್ನು ರೂಪಿಸುವ ಶಿಕ್ಷಣ ವ್ಯವಸ್ಥೆಯನ್ನು ಹೊಂದುವಂತೆ ಒತ್ತು ನೀಡಲಾಗುತ್ತದೆ. ಅದು ಮುಂದುವರೆದ ಬಂಡವಾಳಶಾಹೀ ದೇಶಗಳಿಂದ ಹೊಮ್ಮಿದ ವ್ಯವಸ್ಥೆಯೇ ಆಗಿರಬೇಕಾಗುತ್ತದೆ. ಎಂದರೆ, ಶಿಕ್ಷಣ ವ್ಯವಸ್ಥೆಯು ಸ್ವಾತಂತ್ರ್ಯದ ಆರಂಭದ ವರ್ಷಗಳಲ್ಲಿ ಇದ್ದಂತೆ ವಸಾಹತುಶಾಹಿ ಮನಸ್ಥಿತಿಯಿಂದ ವಿದ್ಯಾರ್ಥಿಗಳನ್ನು ಪರಿವರ್ತಿಸುವುದರ ಬದಲು ಅವರ ಮನಸ್ಸುಗಳನ್ನು ಮತ್ತೆ ವಸಾಹತೀಕರಣಗೊಳಿಸ ಬಯಸುತ್ತದೆ. ಯುಪಿಎ ಸರಕಾರ ಈ ಕಾರ್ಯವನ್ನು ಆರಂಭಿಸಿತು, ಇದನ್ನು ಎನ್‌ಡಿಎ ಸರಕಾರ ಬಹುಮಟ್ಟಿಗೆ ಮುಂದಕ್ಕೆ ಒಯ್ದಿದೆ. ಹಿಂದುತ್ವಕ್ಕೂ ಇಂತಹುದೇ ಮಾನಸಿಕತೆ ಬೇಕಾಗಿದೆ. ಆದರೆ ಇಂತಹ ಶಿಕ್ಷಣ ನೀತಿಯು ಕ್ಷಣಿಕವಷ್ಟೇ ಆಗಿರುತ್ತದೆ.. ..

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ. ನಾಗರಾಜ್**

ಮತ್ತೆ ಗುಲಾಮಗಿರಿ ಮಾನಸಿಕತೆಗೆ ಹದಗೊಳಿಸುವ ಶಿಕ್ಷಣ ನೀತಿ

ಸಾಮ್ರಾಜ್ಯಶಾಹಿಯು ಮೂರನೆಯ ಜಗತ್ತಿನ ದೇಶಗಳ ಮೇಲೆ ಯಜಮಾನಿಕೆಯನ್ನು ಕೇವಲ ಶಸ್ತ್ರಾಸ್ತ್ರಗಳು ಮತ್ತು ಆರ್ಥಿಕ ಬಲದ ಮೂಲಕವಷ್ಟೇ ಅಲ್ಲ, ಆ ದೇಶಗಳ ಜನರನ್ನು ತಾನು ಬಯಸಿದ ರೀತಿಯಲ್ಲೇ ಜಗತ್ತನ್ನು ಪರಿಗ್ರಹಿಸುವಂತೆ ಮಾಡುವ ರೀತಿಯಲ್ಲಿ ತನ್ನ ವಿಚಾರಗಳನ್ನು ಹೇರುವ ಮೂಲಕವೂ ಹೊಂದಬಯಸುತ್ತದೆ. ಆದ್ದರಿಂದ, ಮೂರನೆಯ ಜಗತ್ತಿನ ದೇಶಗಳ ಸಂದರ್ಭದಲ್ಲಿ, ವಸಾಹತುಶಾಹಿಯು ವಿರೂಪಗೊಳಿಸಿದ ಮನಸ್ಥಿತಿಯಿಂದ ಹೊರ ಬಂದು ಸತ್ಯಾನ್ವೇಷಣೆಯಲ್ಲಿ ತೊಡಗಿದಾಗ ಮಾತ್ರ ಅದು ಸ್ವಾತಂತ್ರ್ಯವಾಗುತ್ತದೆ. ವಸಾಹತುಶಾಹಿ–ವಿರೋಧಿ ಹೋರಾಟವು ಈ ಅರಿವನ್ನು ಹೊಂದಿತ್ತು ಮತ್ತು ಈ ಅರಿವಿನೊಂದಿಗೇ ಹೋರಾಟವು ವಾಸ್ತವವಾಗಿ ಆರಂಭವಾಯಿತು. ವಸಾಹತುಶಾಹಿಯ ಔಪಚಾರಿಕ ರಾಜಕೀಯ ನಿರ್ಗಮನದೊಂದಿಗೆ ಸಾಮ್ರಾಜ್ಯಶಾಹಿ ಯೋಜನೆಯು ಸಮಾಪ್ತಿಯಾಗುವುದಿಲ್ಲ. ಆದ್ದರಿಂದ, ಹೊಸದಾಗಿ ಸ್ವಾತಂತ್ರ್ಯ ಗಳಿಸಿದ ಈ ದೇಶಗಳ ಶಿಕ್ಷಣ ವ್ಯವಸ್ಥೆಯು ಸಾಮ್ರಾಜ್ಯಶಾಹಿಯ ಸುಳ್ಳುಗಳನ್ನು ಬಯಲು ಮಾಡುವ ಗುರಿಯನ್ನು ನಿರಂತರವಾಗಿ ಹೊಂದಿರಬೇಕಾಗುತ್ತದೆ.

ಈ ಉದ್ದೇಶ ಸಾಧನೆಗಾಗಿ ಭಾರತದ ಶಿಕ್ಷಣ ಸಂಸ್ಥೆಗಳ ವಿಷಯಾಧಾರಿತ ಕೋರ್ಸ್‌ಗಳು ಮತ್ತು ಪಠ್ಯಕ್ರಮಗಳು ಮೆಟ್ರೊಪಾಲಿಟನ್ (ಮುಂದುವರೆದ ಬಂಡವಾಳಶಾಹಿ) ದೇಶಗಳ ವಿದ್ಯಾಸಂಸ್ಥೆಗಳಲ್ಲಿರುವುದಕ್ಕಿಂತ ಭಿನ್ನವಾಗಿರಬೇಕಾಗುತ್ತದೆ. ದೇಶದ ವಸಾಹತುಶಾಹಿ ಭೂತಕಾಲವನ್ನು ಪರಿಗಣಿಸದೆ ಅದರ ವರ್ತಮಾನವನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ ಎಂಬುದು ಮಾನವಿಕ ಮತ್ತು ಸಾಮಾಜಿಕ ವಿಜ್ಞಾನಗಳ ವಿಷಯದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಭೂತಕಾಲ ಮತ್ತು ವರ್ತಮಾನದ ನಡುವಿನ ಈ ಸಂಪರ್ಕವನ್ನು ಮೆಟ್ರೋಪಾಲಿಟನ್ ವಿಶ್ವವಿದ್ಯಾನಿಲಯಗಳು ಜಾಗರೂಕತೆಯಿಂದ ತಪ್ಪಿಸುತ್ತವೆ. ದೇಶದ ಪ್ರಸ್ತುತ ಪರಿಸ್ಥಿತಿಗೆ ಸೋಮಾರಿತನ, ಉದ್ಯಮಶೀಲತೆಯ ಕೊರತೆ, ಮೂಢನಂಬಿಕೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಜನಸಂಖ್ಯಾ ಬಾಹುಳ್ಯದಂಥಹ ಕೆಲವು ಬಾಹ್ಯ ಅಂಶಗಳು ಕಾರಣವೆಂದು ಅವು ಹೇಳುತ್ತವೆ. ಆದರೆ ನಿಸರ್ಗ ವಿಜ್ಞಾನಗಳ ವಿಷಯದಲ್ಲಿಯೂ ಸಹ, ಮೂರನೆಯ ಜಗತ್ತಿನ ದೇಶಗಳ ವಿಶ್ವವಿದ್ಯಾನಿಲಯಗಳ ವಿಷಯಾಧಾರಿತ ಕೋರ್ಸ್‌ಗಳು ಮತ್ತು ಪಠ್ಯಕ್ರಮಗಳು ಮೆಟ್ರೋಪಾಲಿಟನ್ ದೇಶಗಳ ವಿಶ್ವವಿದ್ಯಾನಿಲಯಗಳ ತದ್ರೂಪವೇ ಆಗಿರಬೇಕಿಲ್ಲ. ಐನ್‌ಸ್ಟೈನ್ ಸಿದ್ಧಾಂತವಾಗಲಿ ಅಥವಾ ಕ್ವಾಂಟಮ್ ಭೌತಶಾಸ್ತ್ರವೇ ಆಗಲಿ ಸಾಮ್ರಾಜ್ಯಶಾಹಿ ಸಿದ್ಧಾಂತವನ್ನು ಹೊಂದಿಲ್ಲ, ನಿಜ. ಆದರೆ, ಹಿತಾಸಕ್ತಿಯ ದೃಷ್ಟಿಯಿಂದ ಮೂರನೇ ಜಗತ್ತಿನ ದೇಶಗಳ ವಿಜ್ಞಾನ ವಿಷಯ–ವ್ಯಾಪ್ತಿಯು, ಮೆಟ್ರೋಪಾಲಿಟನ್ ದೇಶಗಳಂತೆಯೇ ಇರಬೇಕೆಂದೇನೂ ಇಲ್ಲ. ವಾಸ್ತವವಾಗಿ, ಇದು ಇಪ್ಪತ್ತನೇ ಶತಮಾನದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರಾದ ಬ್ರಿಟಿಷ್ ವಿಜ್ಞಾನಿ ಮತ್ತು ಮಾರ್ಕ್ಸ್‌ವಾದಿ ಬುದ್ಧಿಜೀವಿ ಜೆ.ಡಿ. ಬರ್ನಾಲ್ ಅವರು ಹೊಂದಿದ್ದ ದೃಷ್ಟಿಕೋನವೂ ಆಗಿತ್ತು.

ಮೂರನೆಯ ಜಗತ್ತಿನ ದೇಶಗಳ ವಿಶ್ವವಿದ್ಯಾನಿಲಯಗಳ ಕೋರ್ಸ್‌ಗಳು ಮತ್ತು ಪಠ್ಯಕ್ರಮಗಳು ಮೆಟ್ರೋಪಾಲಿಟನ್ ವಿಶ್ವವಿದ್ಯಾನಿಲಯಗಳಂತೆಯೇ ಇರಬೇಕು ಎಂದು ಭಾವಿಸುವ ಕ್ರಮವೇ ಸಾಮ್ರಾಜ್ಯಶಾಹಿಯು ಹೊಂದಿರುವ ಪ್ರಭಾವದ ಲಕ್ಷಣ. ಈ ಅರಿವನ್ನು ನಿಯಂತ್ರಣಗಳ(ಡಿರಿಜಿಸ್ಟ್) ಆಳ್ವಿಕೆಯ ಅವಧಿಯ ಭಾರತದ ಶಿಕ್ಷಣ ನೀತಿಯು ಹೊಂದಿತ್ತು. ಈ ಶಿಕ್ಷಣ ವ್ಯವಸ್ಥೆಯು ಗುರಿಸಾಧಿಸುವಲ್ಲಿ ವಿಫಲವಾಯಿತಾದರೂ, ಅಂದಿನ ಶಿಕ್ಷಣ ನೀತಿಯು ಹೊಂದಿದ್ದ ಕಣ್ನೋಟದ ಬಗ್ಗೆ ದೋಷಾರೋಪಣೆ ಮಾಡಲಾಗದು.



ನವ–ಉದಾರವಾದದಲ್ಲಿ ಮನಸ್ಸುಗಳ ಮರು–ವಸಾಹತೀಕರಣದ ಅಗತ್ಯತೆ..

ನವ–ಉದಾರವಾದದ ಆಗಮನದೊಂದಿಗೆ ಅನೇಕ ಬದಲಾವಣೆಗಳಾದವು. ಭಾರತದ ಹಿರಿ ಬೂರ್ಜ್ವಾಗಳು ಜಾಗತೀಕರಣಗೊಂಡ ಹಣಕಾಸು ಬಂಡವಾಳದೊಂದಿಗೆ ಕೈಜೋಡಿಸಿದರು. ವಿದೇಶಿ ಹಣಕಾಸು ಬಂಡವಾಳವನ್ನು ಮತ್ತು ವಿದೇಶಿ ನೇರ ಹೂಡಿಕೆಯನ್ನು ಸ್ವಾಗತಿಸಲಾಯಿತು. ಭಾರತದ ಮೇಲ್–ಮಧ್ಯಮ ವರ್ಗದ ಯುವಕರು ಬಹುರಾಷ್ಟ್ರೀಯ ಸಂಸ್ಥೆಗಳ ಉದ್ಯೋಗಗಳನ್ನು ಬೆನ್ನಟ್ಟಿದರು. ದೇಶದ ಅಭಿವೃದ್ಧಿಯನ್ನು ಸರಕು–ಸೇವೆಗಳ ರಫ್ತುಗಳ ಮೇಲೆ ಅವಲಂಬಿಸುವಂತೆ ಮಾಡಲಾಯಿತು. ಈಸ್ಟ್ ಇಂಡಿಯಾ ಕಂಪನಿಯನ್ನು ಮತ್ತೊಮ್ಮೆ ಭಾರತಕ್ಕೆ ಆಹ್ವಾನಿಸುವ ಮಟ್ಟಿಗೆ ಸರ್ಕಾರದ ಉನ್ನತ ಅಧಿಕಾರಿಗಳು ಮಾತನಾಡುವ ಬದಲಾವಣೆಗಳು ಕಂಡುಬಂದವು.

ನವ–ಉದಾರವಾದಿ ಯುಗವು ಜಾಗತೀಕರಣಗೊಂಡ ಹಣಕಾಸು ಬಂಡವಾಳದ ನಾಯಕತ್ವವನ್ನು ಅವಶ್ಯಗೊಳಿಸಿರುವುದರಿಂದ ಮತ್ತು ಈ ಬಂಡವಾಳಕ್ಕೆ ಜಾಗತಿಕ ಮಟ್ಟದ (ಅಥವಾ ಕನಿಷ್ಠ ಏಕರೂಪದ) ತಂತ್ರಜ್ಞರ ಅಗತ್ಯವಿರುವುದರಿಂದ, ಅಂತಹ ತಂತ್ರಜ್ಞರನ್ನು ತರಬೇತು ಮಾಡಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಏಕರೂಪದ ಶಿಕ್ಷಣ ವ್ಯವಸ್ಥೆಯನ್ನು ಹೊಂದುವಂತೆ ಒತ್ತು ನೀಡಲಾಗುತ್ತದೆ. ಅಂಥಹ ಒಂದು ವ್ಯವಸ್ಥೆಯು ಮೆಟ್ರೋಪಾಲಿಟನ್ ದೇಶಗಳಿಂದ ಹೊರಹೊಮ್ಮಿದ ವ್ಯವಸ್ಥೆಯೇ ಆಗಿರಬೇಕಾಗುತ್ತದೆ.

ಇದು ಏನನ್ನು ಅರ್ಥೈಸುತ್ತದೆ ಎಂದರೆ, ವಸಾಹತುಶಾಹಿ ಮನಸ್ಥಿತಿಯಿಂದ ವಿದ್ಯಾರ್ಥಿಗಳನ್ನು ಪರಿವರ್ತಿಸುವುದರ ಬದಲು ಶಿಕ್ಷಣ ವ್ಯವಸ್ಥೆಯು ಅವರ ಮನಸ್ಸುಗಳನ್ನು ಮರು–ವಸಾಹತೀಕರಣಗೊಳಿಸ ಬಯಸುತ್ತದೆ ಎಂಬುದನ್ನು. ಈ ನಿಟ್ಟಿನಲ್ಲಿ, ಯುಪಿಎ ಸರ್ಕಾರವು ವಿದೇಶಗಳ ಹಲವಾರು ಪ್ರಸಿದ್ಧ ವಿಶ್ವವಿದ್ಯಾನಿಲಯಗಳನ್ನು ಭಾರತದಲ್ಲಿ ತಮ್ಮ ಶಾಖೆಗಳನ್ನು ತೆರೆಯುವಂತೆ ಆಹ್ವಾನಿಸಿತ್ತು. ಮತ್ತು, ಭಾರತದ ಕೆಲವು ವಿಶ್ವವಿದ್ಯಾನಿಲಯಗಳನ್ನು "ದತ್ತು" ಪಡೆದು ತಮ್ಮದೇ ಆದ ರೀತಿಯಲ್ಲಿ ಅವುಗಳನ್ನು ಅಭಿವೃದ್ಧಿಪಡಿಸುವಂತೆ ಆಹ್ವಾನಿಸಿತ್ತು. ಈ ಯೋಜನೆಯಡಿಯಲ್ಲಿ ಆಕ್ಸ್‌ಫರ್ಡ್, ಹಾರ್ವರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳನ್ನು, ಭಾರತದಲ್ಲಿ ಸಿದ್ಧಪಡಿಸಿದ ಪಠ್ಯಕ್ರಮವನ್ನು ಮತ್ತು ಪಠ್ಯ ವಿಷಯಗಳನ್ನು ಅನುಸರಿಸುವುದರ ಬದಲು ತಮ್ಮ ಮೂಲ ಪೀಠಗಳಲ್ಲಿ ಅನುಸರಿಸುವ ಪಠ್ಯಕ್ರಮ ಮತ್ತು ಪಠ್ಯ ವಿಷಯಗಳನ್ನೇ ಭಾರತದಲ್ಲೂ ಅನುಸರಿಸುವಂತೆ ಸೂಚಿಸಿ ಅವರನ್ನು ಆಹ್ವಾನಿಸಲಾಗಿತ್ತು ಮತ್ತು ಭಾರತದ ಮತ್ತು ಮೆಟ್ರೋಪಾಲಿಟನ್ ವಿಶ್ವವಿದ್ಯಾನಿಲಯಗಳ ನಡುವೆ ಪಠ್ಯ ವಿಷಯಗಳು ಮತ್ತು ಪಠ್ಯಕ್ರಮಗಳ ಏಕರೂಪತೆಯ ಪ್ರಕ್ರಿಯೆಯನ್ನು ಪ್ರಾರಂಭಿಸುವುದು ಉದ್ದೇಶವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅಂದರೆ, ಭಾರತದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳನ್ನು ವಸಾಹತುಶಾಹಿ ಮನಸ್ಥಿತಿಯಿಂದ ಪರಿವರ್ತಿಸಲು ಈ ಹಿಂದೆ ಮಾಡಿದ ಪ್ರಯತ್ನವನ್ನು ತ್ಯಜಿಸುವುದು. ಪ್ರಾಸಂಗಿಕವಾಗಿ ಒಂದು ವಾಸ್ತವಾಂಶವನ್ನು ಹೇಳುವುದಾದರೆ, ಭಾರತದ ವಿದ್ಯಾರ್ಥಿಗಳು ಹಾರ್ವರ್ಡ್ ಶಿಕ್ಷಣವನ್ನು ಪಡೆಯಲು ವಿದೇಶಕ್ಕೆ ಹೋಗಬೇಕಾಗಿಲ್ಲ, ಅದನ್ನು ಭಾರತದಲ್ಲಿ ಒದಗಿಸುವುದು ತಮ್ಮ ಉದ್ದೇಶವಾಗಿದೆ ಎಂಬುದಾಗಿ ಭಾರತದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಯೊಬ್ಬರು ಸಂಸತ್ತಿನಲ್ಲಿ ಬಹಿರಂಗವಾಗಿ ಹೇಳಿದ್ದರು.

‘ಹಿಂದುತ್ವ’ದ ತೆಳು ಹೊದಿಕೆ

ಯುಪಿಎ ಸರಕಾರ ಆರಂಭಿಸಿದ್ದ ಈ ಕಾರ್ಯವನ್ನು ಎನ್‌ಡಿಎ ಸರಕಾರ ಬಹುಮಟ್ಟಿಗೆ ಮುಂದಕ್ಕೆ ಒಯ್ದಿದೆ. ಅದು ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತ ಮತ್ತು ಮೆಟ್ರೊಪಾಲಿಟನ್ ದೇಶಗಳ ನಡುವಿನ ಏಕರೂಪದ ಶಿಕ್ಷಣ ವ್ಯವಸ್ಥೆಯ ಕಲ್ಪನೆಗೆ ಅನುಮತಿಯನ್ನು ಅಧಿಕೃತವಾಗಿ ನೀಡಿದೆ. ಅಂದರೆ, ಭಾರತ ಮತ್ತು ಮೆಟ್ರೋಪಾಲಿಟನ್ ವಿಶ್ವವಿದ್ಯಾಲಯಗಳ ನಡುವೆ ಒಂದು ಸಮಾನ ಪಠ್ಯಕ್ರಮ, ಕೋರ್ಸ್–ವಿಷಯಗಳು ಮತ್ತು ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗುತ್ತದೆ.

ಈ ಏಕರೂಪತೆಯನ್ನು ಸಾಧಿಸುವ ನಿಟ್ಟಿನಲ್ಲಿ ಅದು ಎರಡು ನಿರ್ಣಾಯಕ ಕ್ರಮಗಳನ್ನು ತೆಗೆದುಕೊಂಡಿದೆ: ಮೊದಲನೆಯದು, ಸಾಮ್ರಾಜ್ಯವಾದಿ ಸಂಕಥನದ ಎದುರು ಭಾರತದಲ್ಲಿ ಪ್ರತಿಸಂಕಥನವನ್ನು ಮಂಡಿಸುತ್ತಿದ್ದ ಮತ್ತು ಈ ಕಾರಣಕ್ಕಾಗಿಯೇ ವಿಶ್ವದ ಗಮನ ಸೆಳೆದ ವಿಶ್ವವಿದ್ಯಾಲಯಗಳನ್ನು ನಾಶಪಡಿಸುವುದು. ಸ್ಪಷ್ಟ ಉದಾಹರಣೆಗಳೆಂದರೆ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯ, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ, ಜಾದವ್‌ಪುರ ವಿಶ್ವವಿದ್ಯಾನಿಲಯ ಮತ್ತು ಇತರೆ.


ಎರಡನೆಯದು, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ಒತ್ತಡದ ಮೇರೆಗೆ ಭಾರತದ ವಿಶ್ವವಿದ್ಯಾಲಯಗಳು ಒಂದೊಂದೂ ಪ್ರತ್ಯೇಕವಾಗಿ ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ವಿವಿಧ ಜ್ಞಾನ–ಶಿಸ್ತುಗಳ ಕೋರ್ಸ್‌ಗಳ ಬಗ್ಗೆ ಮತ್ತು ವಿದೇಶಿ ವಿಶ್ವವಿದ್ಯಾಲಯಗಳ ಕೋರ್ಸ್–ವಿಷಯಗಳು ಹಾಗೂ ಪಠ್ಯಕ್ರಮಗಳ ತದ್ರೂಪುಗಳನ್ನು ಭಾರತದ ವಿಶ್ವವಿದ್ಯಾಲಯಗಳಲ್ಲಿ ಅಳವಡಿಕೆ ಮಾಡಿಕೊಳ್ಳುವ ಸಂಬಂಧವಾಗಿ ಮಾತುಕತೆಗಳನ್ನು ನಡೆಸುವುದು. ಇಲ್ಲಿರುವ ಏಕೈಕ ಅಡ್ಡಿ ಎಂದರೆ, ವಿದೇಶಿ ವಿಶ್ವವಿದ್ಯಾನಿಲಯಗಳು ಒಪ್ಪದಿರಬಹುದಾದ ವೈದಿಕ ಗಣಿತದಂತಹ ಕೆಲವು ವಿಷಯಗಳನ್ನು ಭಾರತದ ವಿಶ್ವವಿದ್ಯಾನಿಲಯಗಳ ಪಠ್ಯ ವಿಷಯಗಳು ಒಳಗೊಂಡಿರಬೇಕು ಎನ್ನುವ ಯುಜಿಸಿಯ ಒತ್ತಡ.

ಈ ವಿಷಯಗಳ ಬಗ್ಗೆ ಕಾಲಕ್ರಮದಲ್ಲಿ ಎಂಥದ್ದೊ ಒಂದು ಒಪ್ಪಂದಕ್ಕೆ ಬರಲಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಈ ಒಪ್ಪಂದ ಏರ್ಪಟ್ಟಾಗ ಅದರಲ್ಲಿ ಭಾರತದ ವಿಶ್ವವಿದ್ಯಾನಿಲಯಗಳು, ನವ–ಉದಾರವಾದದ ಬೇಡಿಕೆಗಳು ಮತ್ತು ಹಿಂದುತ್ವದ ಬೇಡಿಕೆಗಳನ್ನು ಪ್ರತಿನಿಧಿಸುವ ಒಂದು ಕಲಬೆರಕೆಯ ಪಠ್ಯಕ್ರಮವನ್ನು ಮತ್ತು ಪಠ್ಯ ವಿಷಯಗಳನ್ನು ಹೊಂದಿರುತ್ತವೆ. ಇದು ಮನಸುಗಳನ್ನು "ಪ್ರಾಚೀನ ಕಾಲದಲ್ಲಿ ನಮ್ಮ ದೇಶ ಎಷ್ಟು ಮಹೋನ್ನತವಾಗಿತ್ತು" ಎಂಬ ತೆಳುಹೊದಿಕೆಯೊಂದಿಗೆ ವಸಾಹತುಶಾಹಿ ಮಾನಸಿಕತೆಗೆ ಪರಿವರ್ತಿಸುವ ಕ್ರಮವಾಗುತ್ತದೆ. ಸಾಮ್ರಾಜ್ಯಶಾಹಿಗೇನೂ ಇದು ತಕರಾರಿನ ವಿಷಯವಲ್ಲ. ಬಂಡವಾಳಶಾಹಿ ಬೆಳವಣಿಗೆಯೊಂದಿಗೆ ಹೊರಹೊಮ್ಮಿದ ಆಧುನಿಕ ವಿದ್ಯಮಾನವಾಗಿರುವ ಸಾಮ್ರಾಜ್ಯಶಾಹಿಯನ್ನು ಶೋಷಣೆಯ ವ್ಯವಸ್ಥೆ ಎಂದು ಬಣ್ಣಿಸದೇ, ಭಾರತದಂತಹ ದೇಶಗಳ ಅಸಂಸ್ಕೃತರನ್ನು ತಿದ್ದಿ ತೀಡಿ ಅವರನ್ನು ಮೇಲೆತ್ತುವ ಉದ್ಧಾರಕನೆಂದು ಬಣ್ಣಿಸುತ್ತಲೇ ಇರುವವರೆಗೂ ಮತ್ತು ಇಂಥಹ ದೇಶಗಳ ಪ್ರಸ್ತುತ ಅಭಿವೃದ್ಧಿಯಾಗದ ಪರಿಸ್ಥಿತಿಗೂ ಮತ್ತು ಸಾಮ್ರಾಜ್ಯಶಾಹಿ ವಿದ್ಯಮಾನಕ್ಕೂ ಸಂಬಂಧ ಕಲ್ಪಿಸದೆ ಇರುವವರೆಗೂ, ಕಲಬೆರಕೆಯ ಪಠ್ಯಕ್ರಮ ಮತ್ತು ಪಠ್ಯ ವಿಷಯಗಳ ಬಗ್ಗೆ ಸಾಮ್ರಾಜ್ಯಶಾಹಿಗೆ ತಕರಾರಿಲ್ಲ. ವಿದೇಶಿ ಮತ್ತು ಭಾರತದ ವಿಶ್ವವಿದ್ಯಾಲಯಗಳ ಸಮಾನ ಪಠ್ಯ ವಿಷಯ ಮತ್ತು ಪಠ್ಯಕ್ರಮ ಆ ವಿದೇಶಗಳ ವಿಶ್ವವಿದ್ಯಾಲಯಗಳಂತೆಯೇ ಇದ್ದರೆ. ಇಂತಹ ಸಮಸ್ಯೆಯೂ ಇರುವುದಿಲ್ಲ. ಹಾಗಾಗಿ, ಪ್ರಾಚೀನ ಕಾಲದಲ್ಲಿ ಭಾರತ

ಪುಟ 15 ಕ್ಕೆ

ಪುಸ್ತಕ ಪರಿಚಯ

"ವಿಷವಟ್ಟಿ ಸುಡುವಲ್ಲಿ" ಶಿಕ್ಷಣದಲ್ಲಿನ ವಿಷ ಪಾಷಾಣದ ನಿಜ ದರ್ಶನ



ಇತಿಹಾಸವನ್ನು ತಿರುಚುವ, ಸಂವಿಧಾನವನ್ನು ಬದಲಾಯಿಸುವ, ರಾಷ್ಟ್ರೀಯತೆ ಮತ್ತು ಸಂಸ್ಕೃತಿಗಳ ಕುರಿತು ಹೊಸ ವ್ಯಾಖ್ಯಾನಗಳನ್ನು ಮಾಡುತ್ತಿರುವುದು ಪ್ರಸ್ತುತ ಚರ್ಚೆಯ ವಿಷಯ. ಇವೆಲ್ಲವುಗಳ ಮೂಲ ಪ್ರಾರಂಭವಾಗಿದ್ದು ಎಲ್ಲಿಂದ, ಇದರ ಹಿಂದಿರುವ ಸಿದ್ಧಾಂತ ಯಾವುದು, ಆ ಸಿದ್ಧಾಂತವನ್ನು ಜಾರಿಮಾಡಲು ಕೆಲಸ ಮಾಡುತ್ತಿರುವ ಸಂಘಟನೆಗಳು ಯಾವುವು, ಈ ಸಿದ್ಧಾಂತವನ್ನು ಪ್ರತಿಪಾದಿಸುವವರು ಅಧಿಕಾರದ ಚುಕ್ಕಾಣಿಯನ್ನು ಹಿಡಿದಾಗ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಆಡಳಿತ ಯಂತ್ರಾಂಗವನ್ನು ಬಳಸಿ, ಶಿಕ್ಷಣ ಕ್ಷೇತ್ರ ಸೇರಿದಂತೆ ಹೇಗೆ ಇಡೀ ವಾತಾವರಣವನ್ನೇ ಕಲುಷಿತಗೊಳಿಸುತ್ತಾರೆ. ಮತ್ತು ಅದರ ಮೂಲಕ ನಾವೆಲ್ಲರೂ ಒಪ್ಪಿ ಜೀವಿಸುತ್ತಿರುವ ಜಾತ್ಯಾತೀತ, ಧರ್ಮನಿರಪೇಕ್ಷ ತತ್ವಗಳಿಗೆ ಹೇಗೆ ತಿಲಾಂಜಲಿ ಇಡುತ್ತಾರೆ, ಎಂಬ ಅಂಶಗಳನ್ನು ಎಳೆ ಎಳೆಯಾಗಿ ಸಾಕ್ಷಾಧಾರಗಳ ಸಮೇತ ಸಾಬೀತುಪಡಿಸುವ ಸಂಶೋಧನಾ ಕೃತಿಯಾಗಿ "ವಿಷವಟ್ಟಿ ಸುಡವಲ್ಲಿ" ಪಠ್ಯಪುಸ್ತಕ ಮತೀಯವಾದೀಕರಣ ಮತ್ತು ಇತಿಹಾಸ ತಿರುಚುವಿಕೆ ಪುಸ್ತಕವನ್ನು ನೀಡಿದ ಬಿ.ಶ್ರೀಪಾದ ಭಟ್ ರವರನ್ನು ಮೊದಲಿಗೆ ಅಭಿನಂದಿಸುತ್ತೇನೆ.

ಪ್ರಮುಖವಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ತನ್ನ ಶಾಲಾ ಕಾಲೇಜುಗಳ ಮೂಲಕ ಎಂತಹ ವಿಷವನ್ನು ಮಕ್ಕಳಿಗೆ ಉಣಿಸುತ್ತಿದೆ ಎಂಬುದನ್ನು ಈ ಪುಸ್ತಕದಲ್ಲಿ ವಿವರವಾಗಿ ಹೇಳಲಾಗಿದೆ. ದೇಶಾದ್ಯಂತ ಆರ್‌ಎಸ್‌ಎಸ್‌ನ ವಿದ್ಯಾಭಾರತಿಯ ಸುಮಾರು 12,828 ಔಪಚಾರಿಕ ಶಾಲೆಗಳು, 1.5 ಲಕ್ಷ ಶಿಕ್ಷಕರು, 34.6 ಲಕ್ಷ ವಿದ್ಯಾರ್ಥಿಗಳಿದ್ದಾರೆ. 6 ಪದವಿ ಸಂಸ್ಥೆಗಳಿವೆ, 4,935 ಏಕಲ ವಿದ್ಯಾಲಯ, 6,418 ಸಂಸ್ಕಾರ ಕೇಂದ್ರದಂತಹ ಅನೌಪಚಾರಿಕ ಶಾಲೆಗಳಿವೆ. ಇಲ್ಲಿ 1,52,935 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಮಾತ್ರವಲ್ಲ ವಿವಿಧ ರಾಜ್ಯಗಳಲ್ಲಿ ಅಧಿಕಾರ ನಡೆಸಿದ ಮತ್ತು ಪ್ರಸ್ತುತ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರಗಳು ತಮ್ಮ ಅಧಿಕಾರವಧಿಯಲ್ಲಿ ಶೈಕ್ಷಣಿಕ ಪಠ್ಯಪುಸ್ತಕಗಳನ್ನು ರಚಿಸುವ ಎನ್‌ಸಿಆರ್‌ಟಿಯನ್ನೇ ಪುನರ್ ರಚಿಸಿ ತಮಗೆ ಬೇಕಾದವನ್ನು ನೇಮಕಮಾಡಿ, ಇಡೀ ಪಠ್ಯಪುಸ್ತಕಗಳನ್ನು ಸಂಪೂರ್ಣವಾಗಿ ತಮ್ಮ ಹಿಂದುತ್ವದ ಸಿದ್ಧಾಂತಕ್ಕೆ ಪೂರಕವಾಗಿ, ದೇಶದ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿ, ದೇಶದ ತಳಸಮುದಾಯಗಳ ಸಂಸ್ಕೃತಿಗಳಿಗೆ ಪರ್ಯಾಯವಾಗಿ ಹೊಸ ರೀತಿಯ ಪರಿಭಾಷೆಯೊಂದನ್ನು ಕಟ್ಟಲು ಪ್ರಯತ್ನಿಸುವುದರಲ್ಲಿ ಸಂಘಪರಿವಾರ ಹೇಗೆ ಯಶಸ್ವಿಯನ್ನು ಪಡೆದಿದೆ. ಎಂಬುದರ ಕುರಿತು ಹಲವು ವಿಧ್ವಾಂಸರ ವಿಶ್ಲೇಷಣೆಗಳನ್ನು ಪ್ರಸ್ತಾಪಿಸುವ ಮೂಲಕ ಸರಳವಾಗಿ ಅರ್ಥ ಮಾಡಿಸಲು ಪ್ರಯತ್ನಿಸಲಾಗಿದೆ.

ವಾಜಪೇಯಿ ಮೊದಲ ಬಾರಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ, ಮಾನವ ಸಂಪನ್ಮೂಲ ಖಾತೆ ಸಚಿವರಾಗಿದ್ದ ಮುರಳಿ ಮನೋಹರ ಜೋಷಿಯವರ ಮೂಲಕ ವಿಶ್ವವಿದ್ಯಾಲಯಗಳಲ್ಲೂ ಹಸ್ತಸಾಮುದ್ರಿಕಾ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಭಗವದ್ಗೀತೆಗಳನ್ನು ಭೋಧನೆ ಮಾಡುವ ಕೆಲಸ ಆರಂಭವಾಗಿತ್ತು. ಆದರೆ 2014 ರಲ್ಲಿ ಅಧಿಕಾರಕ್ಕೆ ಬಂದ ಮೋದಿ ನೇತೃತ್ವದ ಸಂಘಪರಿವಾರದ ಸಂಪೂರ್ಣ ಹಿಡಿತವಿರುವ ಬಿಜೆಪಿ ಸರ್ಕಾರವು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಬದಲಾವಣೆಗಳು, ಪಠ್ಯಗಳ ಪುನರಚನೆ ಐಕ್ಯ ಭಾರತಕ್ಕೆ ಅತ್ಯಂತ ಹೆಚ್ಚು ಅಪಾಯವನ್ನು ತಂದೊಡ್ಡಿದೆ. ಇದನ್ನು ಈ ಕೃತಿಯಲ್ಲಿ ಎಳೆ ಎಳೆಯಾಗಿ ಬಿಚ್ಚಿಡಲಾಗಿದೆ.

ಇಷ್ಟು ಮಾತ್ರವಲ್ಲದೆ ಕಾಂಗ್ರೆಸ್ ಹೇಗೆ ಹಂತ ಹಂತವಾಗಿ ತನ್ನ ಆಲೋಚನೆ ಮತ್ತು ನೀತಿಗಳಲ್ಲಿ ಮೃದು ಹಿಂದುತ್ವ ದೋರಣೆಯನ್ನು ಅನುಸರಿಸಿದೆ, ಅದು ಕೂಡ ಇಂದಿನ ಪ್ರಸ್ತುತ ಸ್ಥಿತಿಗೆ ಹೇಗೆ ಕೊಡುಗೆ ನೀಡಿದೆ ಎಂಬುದನ್ನು ವಿವರಿಸಲಾಗಿದೆ.

ಪಠ್ಯಪುಸ್ತಕಗಳ ಪುನರಚನೆಯಲ್ಲಿನ ಕೋಮುವಾದಿ ಅಂಶಗಳನ್ನು ಬಯಲಿಗೆಳೆಯುವ ಮೂಲಕ ಆರಂಭವಾಗುವ ಈ ಕೃತಿ ಅಲ್ಲಿಯೇ ನಿಲ್ಲದೆ ಸಮಾಜದ ಒಟ್ಟಾರೆ ಸೆಕ್ಯುಲರಿಸಂ ಪರಿಕಲ್ಪನೆಯನ್ನು ಹೊಡೆಯಲು ಹಿಂದುತ್ವ ಶಕ್ತಿಗಳು ಏನೆನೆಲ್ಲಾ ಪರಿಭಾಷೆಗಳನ್ನು ಬಳಸಿ ಹೊಸ ಇತಿಹಾಸವನ್ನು ಕಟ್ಟಲು ಹೊರಟಿದ್ದಾರೆ ಮತ್ತು ಅದರಿಂದಾಗುವ ಸಾಮಾಜಿಕ ಪರಿಣಾಮ ಹಾಗೂ ಬದಲಾವಣೆಗಳನ್ನು ಇಲ್ಲಿ ಗುರುತಿಸಲಾಗಿದೆ. ಪುಸ್ತಕದ ಕೊನೆಯ ಭಾಗದ ಅಧ್ಯಾಯಗಳು ಇಂತಹ ಅಪಾಯಕಾರಿ ಸನ್ನಿವೇಶದಲ್ಲಿ ನಮ್ಮ ಮುಂದಿರುವ ದಾರಿಗಳು ಯಾವುವು ಎಂಬ ಕುರಿತು ಸ್ಪಷ್ಟ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತದೆ. ಕೇವಲ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸಿ ವಿಮರ್ಶಿಸುವುದು ಮಾತ್ರವಲ್ಲದೆ, ಅವುಗಳಿಗೆ ಪರಿಹಾರವನ್ನು ಸೂಚಿಸುವ ಮಹತ್ತರ ಕೃತಿ ಇದಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಮತ್ತು ಶಿಕ್ಷಣ ಕ್ಷೇತ್ರದ ಬೆಳವಣಿಗೆಗಳ ಕುರಿತು ಆಸಕ್ತಿ ಇರುವವರೆಲ್ಲಾ ಈ ಪುಸ್ತಕವನ್ನು ಕಡ್ಡಾಯವಾಗಿ ಓದಬೇಕು ಮಾತ್ರವಲ್ಲ, ಈ ಸಮಾಜದ ಬಗ್ಗೆ ನೈಜ ಕಳಕಳಿ ಇರುವ ಪ್ರತಿಯೊಬ್ಬರೂ ಈ ಕೃತಿಯನ್ನು ಓದಿ ನಾವು ಎಂತಹ ವಿಷ ವರ್ತುಲದಲ್ಲಿ ಸಿಲುಕಿಕೊಂಡಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಪುಸ್ತಕಕ್ಕೆ ಮುನ್ನುಡಿ ಬರೆದಿರುವ ನಾಡಿನ ಹಿರಿಯ ಚಿಂತಕರಾದ ಪ್ರೊ.ಎಸ್.ಜಿ.ಸಿದ್ದರಾಮಯ್ಯ ರವರ ಮಾತುಗಳು ಪ್ರಸ್ತುತವೆನಿಸುತ್ತವೆ. "ಶಿಕ್ಷಣ ತಜ್ಞರು ಕೇವಲ ಅಕಾಡೆಮಿಕ್ ಶಿಸ್ತಿನಲ್ಲಿ ಶಿಕ್ಷಣದ ಬಗ್ಗೆ ಮಾತನಾಡಿದರೆ ಸಾಲದು, ಅದು ಬಹುಮುಖೀ ಸಮಾಜಗಳನ್ನು ಒಳಗೊಂಡ ಭಾರತದ ಅನಕ್ಷರತೆ ಮತ್ತು ಹಸಿವುಗಳ ಪರಿಜ್ಞಾನದಲ್ಲಿ ಶಿಕ್ಷಣದ ಅನುಷ್ಠಾನದ ಬಗ್ಗೆ ಯೋಚಿಸಬೇಕು ಎಂಬ ಹೊಣೆಗಾರಿಕೆಯಲ್ಲಿ ಶ್ರೀಪಾದರವರು ಬರಹಕ್ಕೆ ತೊಡಗಿದ್ದಾರೆ. ಆದ್ದರಿಂದಲೇ ಇದು ಕೇವಲ ಶೈಕ್ಷಣಿಕ ಅಧ್ಯಯನ ಮಾತ್ರವಾಗದೆ ನಮ್ಮ ಸಾಮಾಜಿಕ ಬದುಕಿನ ಕಟ್ಟಕಡೆಯ ಮನುಷ್ಯನನ್ನು ಕೇಂದ್ರ ಕಕ್ಷೆಗೆ ತಂದುಕೊಂಡು ನೀತಿ ನಿರೂಪಣೆಗಳ ಪ್ರಸ್ತುತತೆಯನ್ನು ಅಗತ್ಯತೆ ಅನಿವಾರ್ಯತೆಗಳ ಕಳಕಳಿಯಲ್ಲಿ ವಿಶ್ಲೇಷಣೆ ನಡೆಸಿದ್ದಾಗಿದೆ. ಹೀಗಾಗಿ ಇಡೀ ಪುಸ್ತಕ ಮಾಹಿತಿಗಳ ವರದಿ ನಿರೂಪಣೆಯಾಗಿಲ್ಲ; ಯಾವುದೇ ಆಡಳಿತಗಾರರಿಗೆ, ಆಳುವ ಪಕ್ಷಗಳಿಗೆ ಒಂದು ಮಾರ್ಗದರ್ಶಿ ಕೈಪಿಡಿಯಂತಿದೆ".

"ವಿಷವಟ್ಟಿ ಸುಡುವಲ್ಲಿ" ಪುಸ್ತಕವನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದೆ. ಪುಸ್ತಕ 160 ಪುಟಗಳು, ಬೆಲೆ 180 ರೂ.

-ಎಚ್.ಆರ್. ನವೀನ್ ಕುಮಾರ್

ಬಾಲಾಕೋಟ್ ಮೇಲಿನ ವೈಮಾನಿಕ ದಾಳಿ.......

ಪುಟ 11 ರಿಂದ

ಸೊಸೈಟೀಸ್ 19 ರಾಜ್ಯಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಮತದಾರರು ಮೋದಿಗೆ ಮತ್ತೊಮ್ಮೆ ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದರು. 2018ರಲ್ಲಿ 21 ವಿಧಾನಸಭಾ ಉಪಚುನಾವಣೆಗಳಲ್ಲಿ ಬಿಜೆಪಿ ಗೆದ್ದಿದ್ದು ಎರಡರಲ್ಲಿ ಮಾತ್ರ. ದೇಶದ ಆರ್ಥಿಕತೆ ಕುಂಠಿತ ಸ್ಥಿತಿಯಲ್ಲಿತ್ತು. ರೈತರ, ಕಾರ್ಮಿಕರ ಬೃಹತ್ ಪ್ರತಿಭಟನೆಗಳು ನಡೆದಿದ್ದವು.

ಇದೆಲ್ಲದರಿಂದ ಚಿಂತಿತರಾದಂತಿದ್ದ ಮೋದಿ, ಪುಲ್ವಾಮ ದಾಳಿಯ ಸಂದರ್ಭವನ್ನೇ ಕಾಯುತ್ತಿದ್ದರೇನೊ ಎಂಬಂತೆ, ಪುಲ್ವಾಮಾ ದಾಳಿಗೆ ಪ್ರತಿಕ್ರಿಯೆಯಾಗಿ, ಬಾಲಕೋಟ್ ವೈಮಾನಿಕ ದಾಳಿಯನ್ನು ಪಾಕಿಸ್ತಾನದ ವಿರುದ್ಧ 'ನಿರ್ಧಿಷ್ಟ ದಾಳಿ' ಹೆಸರಿನಲ್ಲಿ ನಡೆಸಲಾಯಿತು. ಇದು, 1971 ಭಾರತ-ಪಾಕಿಸ್ತಾನ ಯುದ್ಧದ ನಂತರ ವಾಯುಪಡೆಯ ದಾಳಿ. ಭಾರತೀಯ ವಿಮಾನವನ್ನು ಹೊಡೆದುರುಳಿಸಿದ ಪಾಕಿಸ್ತಾನದ ಸೇನೆಯು ವಿಂಗ್ ಕಮಾಂಡರ್ ಅಭಿನಂದನ್ ಅವರನ್ನು ಬಂಧಿಸಿತು. ಪಾಕಿಸ್ತಾನದಲ್ಲಿ ಅಡಗಿದ್ದ 300 ಭಯೋತ್ಪಾದಕರನ್ನು ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ಹತ್ಯೆ ಮಾಡಲಾಗಿದೆ ಎಂದು ಮೋದಿ ಸರ್ಕಾರ ಘೋಷಿಸಿತು.

ದಾಳಿ ಮತ್ತು ಮೋದಿಯವರ 2ನೇ ಅವಧಿಗೆ ನೇರ ಸಂಬಂಧ

ಪುಲ್ವಾಮಾ ದಾಳಿಯ ನಂತರ, ದಾಳಿಯಲ್ಲಿ ಹುತಾತ್ಮರಾದ ಯೋಧರ ಮೃತದೇಹಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ರಾಷ್ಟ್ರೀಯತೆ ಮತ್ತು ಯುದ್ಧ-ಪ್ರೇಮದ ಅಲೆಯು ದೇಶದಾದ್ಯಂತ ವ್ಯಾಪಿಸಿತು. ಅಬ್ಸರ್ವರ್ ರಿಸರ್ಚ್ ಫೌಂಡೇಶನ್‌ನ ಸಂದರ್ಶಕ ಪ್ರೊ. ಸತೀಶ್ ಮಿಶ್ರಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳಿದ್ದು ಹೀಗೆ: "ಪುಲ್ವಾಮಾ ದಾಳಿ ಮತ್ತು ಕೇಂದ್ರದಲ್ಲಿ ಮೋದಿಯವರ ಎರಡನೇ ಅವಧಿಗೆ ನೇರ ಸಂಬಂಧವಿದೆ. ಪುಲ್ವಾಮಾದಲ್ಲಿ 40 ಅರೆಸೇನಾ ಪಡೆ ಯೋಧರನ್ನು ಹತ್ಯೆಗೈದಿರುವುದು ಮೋದಿಯ ಕೊಡುಗೆಯಾಗಿದೆ. ಏಕೆಂದರೆ ಬಿಜೆಪಿ ತಲೆಕೆಳಗಾಗಿ ನಿಂತರೂ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ."

ಪುಲ್ವಾಮಾ ದಾಳಿಯ ನಂತರ ಭಯೋತ್ಪಾದನೆಯನ್ನು ಬಿಜೆಪಿ ತನ್ನ ಚುನಾವಣಾ ಘೋಷಣೆಯನ್ನಾಗಿ ಮಾಡಿಕೊಂಡಿತು. ಬಾಲಕೋಟ್ ದಾಳಿಯ ನಂತರ ಯಡಿಯೂರಪ್ಪ ಅವರು ಕರ್ನಾಟಕದ 24 ಲೋಕಸಭಾ ಕ್ಷೇತ್ರಗಳ ಪೈಕಿ 22 ಕ್ಷೇತ್ರಗಳನ್ನು ಬಿಜೆಪಿ ಗೆಲ್ಲುತ್ತದೆ ಎಂದು ಹೇಳಿದರು. 40 ಅರೆಸೇನಾ ಪಡೆ ಯೋಧರ ಸಾವನ್ನು ಬಿಜೆಪಿ ನಾಯಕರು ಪ್ರಚಾರದ ವಿಷಯವನ್ನಾಗಿ ಮಾಡಿಕೊಂಡರು. ಇದರಲ್ಲಿ ಮೋದಿ ಮುಂಚೂಣಿಯಲ್ಲಿದ್ದರು. ಅಹಮದಾಬಾದ್ ಚುನಾವಣಾ ಪ್ರಚಾರದಲ್ಲಿ, ಶತ್ರುಗಳ ಗಡಿಯಲ್ಲಿ ದಾಳಿ ಮಾಡಲು ನಾವು ಹೆಚ್ಚು ಸಮಯ ಕಾಯುವುದಿಲ್ಲ ಎಂದು ಮೋದಿ ಹೇಳಿದರು. ಮೀರತ್ ರ‍್ಯಾಲಿಯಲ್ಲಿ ಮೋದಿ ಅವರು ಪುಲ್ವಾಮಾದ ಹುತಾತ್ಮರನ್ನು 1857 ರಿಂದ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಹುತಾತ್ಮರಿಗೆ ಹೋಲಿಸಿದರು. ಯುವಕರು ತಮ್ಮ ಮೊದಲ ಸಂಬಳವನ್ನು ತಾಯಿ ಮತ್ತು ಸಹೋದರಿಯರಿಗೆ ನೀಡುವಂತೆ ಪುಲ್ವಾಮಾ ಸೈನಿಕರಿಗೆ ಯುವಕರು ತಮ್ಮ ಮೊದಲ ಮತವನ್ನು ನೀಡಬೇಕು ಎಂದು ಹೇಳಿದರು.

ಯುದ್ಧ ಪ್ರಚಾರ


"ಶತ್ರುಗಳಿಗೆ ಹೆದರಿ ಮನೆಯಲ್ಲಿ ಕುಳಿತುಕೊಳ್ಳಬೇಕೇ? ಅಥವಾ ಶತ್ರುವಿನ ಮನೆಗೆ ಹೋಗಿ ದಾಳಿ ಮಾಡುವುದೇ? ಉಗ್ರವಾದದ ವಿರುದ್ಧ ಹೋರಾಡುತ್ತಿರುವವರು ಯಾರು?" ಎನ್ನುತ್ತಾ, ಹುತಾತ್ಮ ಸೈನಿಕರು, ಮತ್ತು ಬಾಲಕೋಟ್ ಮೇಲಿನ ವಿಮಾನ ದಾಳಿ ಮೋದಿಯವರ ಚುನಾವಣಾ ಭಾಷಣದ ವಸ್ತುಗಳಾಗಿದ್ದವು.

ಬಾಲಾಕೋಟ್ ಮೇಲಿನ ಸರ್ಜಿಕಲ್ ಸ್ಟ್ರೈಕ್ ಬಗ್ಗೆ ಮಾತನಾಡುತ್ತಾ ಮೋದಿಯವರು, ತಮ್ಮ ಬಲಿಷ್ಠ ಸರ್ಕಾರ ಶತ್ರು ದೇಶದಲ್ಲಿ ಅಡಗಿರುವ ಭಯೋತ್ಪಾದಕರನ್ನು ಬೇಟೆಯಾಡುತ್ತಿದೆ. ಆದರೆ ವಿರೋಧ ಪಕ್ಷಗಳು ಪಾಕಿಸ್ತಾನದಿಂದ ಹಣ ಪಡೆಯುತ್ತಿವೆ ಎಂದು ಲೇವಡಿ ಮಾಡಿದರು. ಆಗಲೇ ವಿರೋಧ ಪಕ್ಷಗಳಿಗೆ ಆಳವಾದ ಷಡ್ಯಂತ್ರದ ಅರಿವಾಯಿತು. ಈ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಿದರು. ಆಯೋಗವು ಮೋದಿಗೆ ಅನುಕೂಲಕರವಾಗಿತ್ತು. ಮಾಧ್ಯಮಗಳು ಬಿಜೆಪಿ ಪರವಾಗಿ ರಾಷ್ಟ್ರೀಯ ಭದ್ರತೆಯ ವಿಷಯವನ್ನು ರಾಜಕೀಯಗೊಳಿಸಿದವು. ಉಗ್ರಗಾಮಿ ರಾಷ್ಟ್ರೀಯತೆ ಮೇಲುಗೈ ಸಾಧಿಸಿತು ಮತ್ತು ಅಂತಿಮವಾಗಿ ಬಿಜೆಪಿ ಮೊದಲಿಗಿಂತ ಹೆಚ್ಚು ಸ್ಥಾನಗಳನ್ನು ಗೆದ್ದು ಮತ್ತೆ ಅಧಿಕಾರಕ್ಕೆ ಬಂದಿತು.

ಮತ್ತೊಮ್ಮೆ ಚುನಾವಣೆ ಬಂದಿದೆ

ಈಗ ಮತ್ತೊಮ್ಮೆ 2024ರ ಲೋಕಸಭಾ ಚುನಾವಣೆ ಸಮೀಪಿಸುತ್ತಿದೆ. ಜನರಲ್ಲಿನ ಧಾರ್ಮಿಕ ನಂಬಿಕೆಗಳನ್ನು ರಾಮನ ಹೆಸರಿನಲ್ಲಿ ಉನ್ಮಾದವನ್ನು ಬೆಳೆಸಿ, ಅದನ್ನು ತಮ್ಮ ಮತಗಳನ್ನಾಗಿ ಪರಿವರ್ತಿಸುವ ಪ್ರಯತ್ನವಾಗಿ, ಅಯೋಧ್ಯೆಯ ರಾಮ ಮಂದಿರ ಉದ್ಘಾಟನೆಯನ್ನೇ ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳತೊಡಗಿದ್ದಾರೆ. ಇದರಿಂದಲೇ ಬಿಜೆಪಿ ಜನರ ಮನಗೆದ್ದು ಮತ ಗಳಿಸುತ್ತದೆ ಎಂಬ ನಂಬಿಕೆ ಅವರಿಗೂ ಇಲ್ಲ. ಏಕೆಂದರೆ, ತಮ್ಮ 10 ವರ್ಷಗಳ ಆಡಳಿತದಲ್ಲಿ ಬಿಜೆಪಿ ಅನುಸರಿಸಿದ ಸ್ವದೇಶಿ ಮತ್ತು ವಿದೇಶಿ ಬಂಡವಾಳಗಾರರ ಪರವಾದ ನವ ಉದಾರವಾದಿ ನೀತಿಗಳು, ಸಾರ್ವಜನಿಕ ಕಲ್ಯಾಣ ಯೋಜನೆಗಳ ನಾಶ, ನಿರುದ್ಯೋಗ, ತೆರಿಗೆ ಹೆಚ್ಚಳ, ಅಗತ್ಯ ವಸ್ತುಗಳ ಬೆಲೆ ಏರಿಕೆ, ದುಬಾರಿಯಾದ ಜೀವನ ವೆಚ್ಚ ಇವೆಲ್ಲವೂ ಜನರ ಬದುಕನ್ನು ಸಂಕಷ್ಟಗಳಿಗೆ ದೂಡಿವೆ. ಹೀಗಾಗಿ, ಮತ್ತೆ ಚುನಾವಣೆ ಗೆಲ್ಲಲು ಬಿಜೆಪಿ, ಸಂಘಪರಿವಾರ ಮತ್ತು ಆಳುವ ವರ್ಗ ಮತ್ತೆ ಯಾವ ಭಯಾನಕ ಹಾದಿ ಹಿಡಿಯುತ್ತದೆಯೋ ಎಂದು ದೇಶದ ಕೆಲವು ಗಣ್ಯರು ಈಗಾಗಲೇ ಆತಂಕ ವ್ಯಕ್ತಪಡಿಸಿದ್ದಾರೆ. ಇವೆಲ್ಲವನ್ನು ಎದುರಿಸಲು ಜನತೆ ಸಿದ್ಧರಾಗಿರಬೇಕಷ್ಟೆ.





ಪತ್ರಕರ್ತರಿಗೆ ಅತ್ಯಂತ ಮಾರಕ ವರ್ಷ 2023

ಎನ್.ಕೆ. ವಸಂತ್‌ರಾಜ್

ಹತ್ತು ವರ್ಷಗಳಲ್ಲಿ ಮಾಧ್ಯಮ ಕಾರ್ಯಕರ್ತರಿಗೆ 2023 ಅತ್ಯಂತ ಮಾರಕ ವರ್ಷವಾಗಿತ್ತು. 2023ರಲ್ಲಿ 140 ಪತ್ರಕರ್ತರು ಕೊಲ್ಲಲ್ಪಟ್ಟಿದ್ದಾರೆ ಎಂದು ಜಿನೀವಾ ಮೂಲದ ಪ್ರೆಸ್ ಲಾಂಛನ ಅಭಿಯಾನ (ಪಿಇಸಿ) ಪ್ರಕಟಿಸಿದೆ. ಇದು 2022ರಲ್ಲಿ ಕೊಲ್ಲಲ್ಪಟ್ಟ ಪತ್ರಕರ್ತರ ಸಂಖ್ಯೆಗಿಂತ ಶೇ.20ರಷ್ಟು ಹೆಚ್ಚು. ಇದು ಕಳೆದ 10 ವರ್ಷಗಳಲ್ಲಿ ಗರಿಷ್ಠ ಸಂಖ್ಯೆ. ಇದರಲ್ಲಿ ಸಿಂಹಪಾಲು ಗಾಜಾ ಪಟ್ಟಿ ಪಡೆದಿರುವುದು ಅಚ್ಚರಿಯೇನಲ್ಲ. 28 ರಾಷ್ಟ್ರಗಳ 140 ಮಾಧ್ಯಮ ವೃತ್ತಿಪರರಲ್ಲಿ ಕನಿಷ್ಠ 81 ಮಂದಿ (106, ಗಾಜಾ ಮಾಧ್ಯಮ ಕಚೇರಿಯ ಪ್ರಕಾರ) ಗಾಜಾ ಪ್ರದೇಶದಲ್ಲಿ ಸಾವನ್ನಪ್ಪಿದ್ದಾರೆ. ಗಾಜಾ ಪತ್ರಕರ್ತರ ಕಗ್ಗೊಲೆ ಇಲ್ಲದಿದ್ದರೆ ಈ ವರ್ಷದ ಸಂಖ್ಯೆ ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿರುತ್ತಿತ್ತು.

ಪ್ಯಾಲೇಸ್ಟಿನಿಯನ್ ಪತ್ರಕರ್ತರಲ್ಲಿ ಹೆಚ್ಚಿನವರು ಅಂತರರಾಷ್ಟ್ರೀಯ ಮಾಧ್ಯಮಗಳು ಸೇರಿದಂತೆ ಅನೇಕ ಮಾಧ್ಯಮಗಳಿಂದ ಉದ್ಯೋಗದಲ್ಲಿದ್ದರು. ಅವರ ಕುಟುಂಬಗಳ ಸದಸ್ಯರೊಂದಿಗೆ, ಅವರು ತಮ್ಮ ಮನೆಗಳಲ್ಲಿ ಇಸ್ರೇಲಿ ದಾಳಿಗಳಲ್ಲಿ ಸತ್ತಿದ್ದಾರೆ. ಭದ್ರತಾ ಪರಿಸ್ಥಿತಿಗಳಿಂದಾಗಿ ವಿದೇಶಿ ಮಾಧ್ಯಮಗಳು ಗಾಜಾದಲ್ಲಿ ತಮ್ಮ ಸ್ವತಂತ್ರ ವರದಿಯನ್ನು ಕೈಗೊಳ್ಳುವುದು ಅಪ್ರಾಯೋಗಿಕವಾಗಿದೆ ಎಂದು ಪಿಇಸಿ ವರದಿಯಲ್ಲಿ ತಿಳಿಸಲಾಗಿದೆ.

ಇಷ್ಟು ಕಡಿಮೆ ಸಮಯದ ಯುದ್ಧಕಾಲದಲ್ಲಿ ಇದು ಅತಿ ಹೆಚ್ಚು ಮಾಧ್ಯಮ ಸಾವಿನ ಸಂಖ್ಯೆ ಎನ್ನಲಾಗಿದೆ. ಇಸ್ರೇಲ್–ಗಾಜಾ ಯುದ್ಧದ ಮೊದಲ 10 ವಾರಗಳಲ್ಲಿ, ಹಿಂದೆ ಯಾವುದೇ ಒಂದೇ ದೇಶದಲ್ಲಿ ಕೊಲ್ಲಲ್ಪಟ್ಟಿದ್ದಕ್ಕಿಂತ ಹೆಚ್ಚಿನ ಪತ್ರಕರ್ತರು ಕೊಲ್ಲಲ್ಪಟ್ಟಿದ್ದಾರೆ. ಎಂದು ಸಿಪಿಜೆ (ಕಮಿಟಿ ಫಾರ್ ಪ್ರೊಟೆಕ್ಟಿಂಗ್ ಜರ್ನಲಿಸ್ಟ್ಸ್) ಹೇಳಿದೆ.

ಅರ್ಧಕ್ಕಿಂತ ಹೆಚ್ಚು ಗಾಜಾ ಪತ್ರಕರ್ತರ ಸಾವುಗಳು ಯುದ್ಧದ ಮೊದಲ ತಿಂಗಳಲ್ಲಿ ಸಂಭವಿಸಿದವು, ಇದು 1992 ರಲ್ಲಿ ದತ್ತಾಂಶವನ್ನು ಸಂಗ್ರಹಿಸಲು ಪ್ರಾರಂಭಿಸಿದಾಗಿನಿಂದ ಸಿಪಿಜೆ ದಾಖಲಿಸಿದ ಮಾರಕ ಏಕ ತಿಂಗಳು. ಒಂದೇ ವರ್ಷದಲ್ಲಿ ಈ ಸಂಖ್ಯೆಯನ್ನು ಸಮೀಪಿಸಿದ ಏಕೈಕ ದೇಶವಾದ ಇರಾಕ್ ನಲ್ಲಿ 2006 ರಲ್ಲಿ 56 ಪತ್ರಕರ್ತರು ಕೊಲ್ಲಲ್ಪಟ್ಟರು.

ಇಸ್ರೇಲಿ ಯುದ್ಧಾಪರಾದ ಮರೆಮಾಚಲು ಪತ್ರಕರ್ತರ ಬಲಿ

ಇಸ್ರೇಲಿ ಮಿಲಿಟರಿಯಿಂದ ಪತ್ರಕರ್ತರು ಮತ್ತು ಅವರ ಕುಟುಂಬಗಳನ್ನು ಗುರಿಯಾಗಿಸುವ ಸ್ಪಷ್ಟ ಮಾದರಿ ಕಂಡು ಬಂದಿದೆ, ಕನಿಷ್ಠ ಒಂದು ಪ್ರಕರಣದಲ್ಲಿ, ಯಾವುದೇ ಹೋರಾಟ ನಡೆಯದ ಸ್ಥಳದಲ್ಲಿ ಪತ್ರಿಕಾ ಚಿಹ್ನೆಗಳನ್ನು ಸ್ಪಷ್ಟವಾಗಿ ಧರಿಸಿದಾಗ ಪತ್ರಕರ್ತನನ್ನು ಕೊಲ್ಲಲಾಯಿತು. ಕನಿಷ್ಠ ಎರಡು ಪ್ರಕರಣಗಳಲ್ಲಿ, ಪತ್ರಕರ್ತರು ತಮ್ಮ ಕುಟುಂಬ ಸದಸ್ಯರನ್ನು ಕೊಲ್ಲುವ ಮೊದಲು ಇಸ್ರೇಲಿ ಅಧಿಕಾರಿಗಳು ಮತ್ತು ಐಡಿಎಫ್ ಅಧಿಕಾರಿಗಳಿಂದ ಬೆದರಿಕೆಗಳನ್ನು ಸ್ವೀಕರಿಸಿದ್ದಾರೆಂದು ಸಿಪಿಜೆ ವರದಿ ಮಾಡಿದೆ. ಅಲ್ ಜಝೀರಾದ ಗಾಜಾ ವರದಿಗಾರನ ಇಡೀ ಕುಟುಂಬ ಇಸ್ರೇಲಿ ದಾಳಿಯಲ್ಲಿ ಸತ್ತ ಹೃದಯವಿದ್ರಾವಕ ವರದಿ ಪತ್ರಕರ್ತರು ತಮ್ಮ ಕೆಲಸದಲ್ಲಿ ಎದುರಿಸುತ್ತಿರುವ ಭೀಕರ ಪರಿಸ್ಥಿತಿಯ ಚಿತ್ರಣ ನೀಡುತ್ತದೆ.

ಎಲ್ಲಾ ಗಾಜಾ ಪತ್ರಕರ್ತರ ಸಾವುಗಳ ಸಂದರ್ಭಗಳನ್ನು ಸಿಪಿಜೆ ಹೆಚ್ಚು ವಿವರವಾಗಿ ಪರಿಶೀಲಿಸುತ್ತಿದೆ. ಈ ಸಂಶೋಧನೆಯು ಗಾಜಾದಲ್ಲಿ ವ್ಯಾಪಕವಾದ ವಿನಾಶದಿಂದ ಅಡ್ಡಿಯಾಗಿದೆ, ಮತ್ತು ಹಲವಾರು ಸಂದರ್ಭಗಳಲ್ಲಿ, ಅಂತಹ ಮಾಹಿತಿಯ ಮೂಲಗಳಾಗಿರುವ ಕುಟುಂಬ ಸದಸ್ಯರೊಂದಿಗೆ ಪತ್ರಕರ್ತರನ್ನು ಕೊಲ್ಲಲಾಯಿತು. ಕನಿಷ್ಠ 20 ಬಂಧನಗಳು ಮತ್ತು ಪತ್ರಕರ್ತರ ದೈಹಿಕ ಮತ್ತು ಆನ್ ಲೈನ್ ಕಿರುಕುಳ ಸೇರಿದಂತೆ ಈ ಪ್ರದೇಶದಲ್ಲಿ ಮಾಧ್ಯಮಗಳ ಸೆನ್ಸಾರ್ ಶಿಪ್ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇಸ್ರೇಲ್–ಗಾಜಾ ಯುದ್ಧ ಸಾವುಗಳು ಸಂಭವಿಸಿವೆ. ಮಾಧ್ಯಮ ಸೌಲಭ್ಯಗಳು ಸಹ ಹಾನಿಗೊಳಗಾದವು ಅಥವಾ ನಾಶವಾಗಿವೆ ಎಂದಿದೆ ಸಿಪಿಜೆ. ಗಾಜಾದಲ್ಲಿ ಇಸ್ರೇಲಿ ನರಮೇಧ ಮತ್ತು ಯುದ್ಧಾಪರಾಧಗಳು ಜಗತ್ತಿಗೆ ತಿಳಿಯದಂತೆ ಇಸ್ರೇಲ್ ಇವೆಲ್ಲವನ್ನು ಮಾಡುತ್ತಿದೆ ಎಂಬುದು ಸ್ಪಷ್ಟ.

ಪುನರಾವರ್ತಿತ ಫೋನ್–ನೆಟ್ ಸಂವಹನ ಕಡಿತಗಳು ಮತ್ತು ಬಾಂಬ್ ಸ್ಫೋಟ ಮತ್ತು ಸೀಮಿತ ಮಾನವೀಯ ನೆರವಿನಿಂದಾಗಿ ಇಂಧನ, ಆಹಾರ ಮತ್ತು ವಸತಿ ಕೊರತೆಯು ಗಾಜಾದಲ್ಲಿ ಪತ್ರಕರ್ತರು ತಮ್ಮ ಕೆಲಸ ನಿರ್ವಹಿಸಲು ತೀವ್ರ ಸವಾಲನ್ನು ಒಡ್ಡಿದೆ. ಪ್ಯಾಲೇಸ್ಟಿನಿಯನ್ ಪತ್ರಕರ್ತರು ವರದಿಗಾರಿಕೆಯನ್ನು ಮುಂದುವರಿಸಲು ಸಹಾಯದ ಅಗತ್ಯವನ್ನು ಹತಾಶೆಯಿಂದ ತೋಡಿಕೊಳ್ಳುತ್ತಿದ್ದಾರೆ.

ಗಾಜಾದ ಹೊರಗೆ

ಇತರ 27 ರಾಷ್ಟ್ರಗಳಲ್ಲಿ ಗಾಜಾ ಪ್ರದೇಶದ ಹೊರಗೆ ಕನಿಷ್ಠ 59 ಪತ್ರಕರ್ತರು ಕೊಲ್ಲಲ್ಪಟ್ಟರು. ಗ್ವಾಟೆಮಾಲಾದಲ್ಲಿ ಪರಿಸ್ಥಿತಿ ಹದಗೆಟ್ಟಿತು, ಮೆಕ್ಸಿಕೊದಲ್ಲಿ ಐದು ಪತ್ರಕರ್ತರು ಕೊಲ್ಲಲ್ಪಟ್ಟರು, ಒಂಬತ್ತು ಪತ್ರಕರ್ತರು ಸಾವನ್ನಪ್ಪಿದ್ದಾರೆ ಎಂದು ಪಿಇಸಿ ವರದಿ ತಿಳಿಸಿದೆ.

ಉಕ್ರೇನ್ ನಲ್ಲಿನ ಸಂಘರ್ಷದಲ್ಲಿ, ನಾಲ್ಕು ವಿದೇಶೀ ಪತ್ರಕರ್ತರು (ಇಟಾಲಿಯನ್, ಫ್ರೆಂಚ್, ಮತ್ತು ರಷ್ಯನ್) ತಮ್ಮ ಪ್ರಾಣವನ್ನು ಕಳೆದುಕೊಂಡರು. ಇಸ್ರೇಲ್ ನಲ್ಲಿ ಅಕ್ಟೋಬರ್ 7 ರ ಹಮಾಸ್ ದಾಳಿಯಲ್ಲಿ ನಾಲ್ವರು ಪತ್ರಕರ್ತರು ಮೃತಪಟ್ಟರು.

ಪಾಕಿಸ್ತಾನ, ಭಾರತ, ಲೆಬನಾನ್ ಮತ್ತು ಕ್ಯಾಮರೂನ್ ನಲ್ಲಿ ತಲಾ ಮೂವರು ಪತ್ರಕರ್ತರು ಬಲಿಯಾಗಿದ್ದಾರೆ. ಅಫ್ಘಾನಿಸ್ತಾನ, ಬಾಂಗ್ಲಾದೇಶ, ಹೈಟಿ, ನೈಜೀರಿಯಾ, ಫಿಲಿಪೈನ್ಸ್ ಮತ್ತು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ರಾಷ್ಟ್ರಗಳಲ್ಲಿ ತಲಾ ಇಬ್ಬರು ಪತ್ರಕರ್ತರು ಬಲಿಯಾಗಿದ್ದಾರೆ.

ಅಂತಿಮವಾಗಿ, ಪಿಇಸಿ ಪ್ರಕಾರ ಮುಂದಿನ ದೇಶಗಳಲ್ಲಿ ಒಬ್ಬ ಪತ್ರಕರ್ತ ಮೃತಪಟ್ಟಿದ್ದಾನೆ ಎಂದು ವರದಿಯಾಗಿದೆ: ಈಜಿಪ್ಟ್, ಹೊಂಡುರಾಸ್, ಲೆಸೊಥೊ, ಮಾಲಿ, ಮೊಜಾಂಬಿಕ್, ಪರಾಗ್ವೆ, ರುವಾಂಡಾ, ಸೊಮಾಲಿಯಾ, ಸುಡಾನ್ ಮತ್ತು ಸಿರಿಯಾ.

ಆಜಾ ಪಟ್ಟಿಯಿರುವ ಪಶ್ಚಿಮ ಏಶ್ಯಾವು 64% ಪ್ರಕರಣಗಳು ಮತ್ತು 90 ಸಾವುಗಳೊಂದಿಗೆ, ಪತ್ರಕರ್ತರಿಗೆ ಅತ್ಯಂತ ಮಾರಕ ಪ್ರದೇಶವಾಗಿತ್ತು. ಏಷ್ಯಾ 12 ರೊಂದಿಗೆ ಎರಡನೇ ಸ್ಥಾನದಲ್ಲಿದೆ, ಆಫ್ರಿಕಾ 11 ರೊಂದಿಗೆ ಮೂರನೇ ಸ್ಥಾನದಲ್ಲಿದೆ, ಯುರೋಪ್ 4 ರೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ ಮತ್ತು ಉತ್ತರ ಅಮೇರಿಕಾ 3 ರೊಂದಿಗೆ ಐದನೇ ಸ್ಥಾನದಲ್ಲಿದೆ.

ಮತ್ತೆ ಗುಲಾಮಗಿರಿ ಮಾನಸಿಕತೆಗೆ ಹದಗೊಳಿಸುವ ಶಿಕ್ಷಣ ನೀತಿ..............

ಪುಟ 13 ರಿಂದ

ಮಹೋನ್ನತವಾಗಿತ್ತು ಎಂಬುದು ಬಿಳಿಯರೇ ಶ್ರೇಷ್ಠರು ಉಗ್ರ ಬಲ ಪಂಥದವರಿಗೆ ಹಿಡಿಸಲಿಕ್ಕಿಲ್ಲ. ಆದರೆ ಉದಾರ–ಸಾಮ್ರಾಜ್ಯವಾದಿ ದೃಷ್ಟಿಕೋನಕ್ಕೆ ಇದುತಲೆ ಕೆಡಿಸಿಕೊಳ್ಳುವ ವಿಷಯವಲ್ಲ.

ಕಾರ್ಪೊರೇಟ್–ಹಿಂದುತ್ವ ಮೈತ್ರಿಯ ಪ್ರತಿರೂಪ

ಮತ್ತೆ ವಸಾಹತುಶಾಹಿ ಮಾನಸಿಕತೆಗೆ ಪರಿವರ್ತಿಸುವ ಪರಿಣಾಮ ಹೊಂದಿರುವ ಒಂದು ಪರ್ಯಾಯ ಪ್ರವೃತ್ತಿಯೆಂದರೆ, ಸಮಾಜ ವಿಜ್ಞಾನ ಮತ್ತು ಮಾನವಿಕ ವಿಷಯ–ಪಾಠಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವುದು ಅಥವಾ ಅವುಗಳ ಪಾಠ–ವಿಷಯಗಳನ್ನು ನಗಣ್ಯ ಮಟ್ಟಕ್ಕೆ ಇಳಿಸುವುದು ಮತ್ತು ಅವುಗಳ ಬದಲಿಗೆ ಸಮಾಜದ ಬಗ್ಗೆ ಪ್ರಶ್ನೆಗಳನ್ನು ಕೇಳದ ಎಂಬಿಎ ಮತ್ತು ಬಿ.ಕಾಂ. ನಂತಹ "ಉದ್ಯೋಗೋನ್ಮುಖಿ" ಕೋರ್ಸ್‌ಗಳನ್ನಷ್ಟೇ ತರುವುದು. ಈ ಬದಲಾವಣೆಯ ವಿಷಯದಲ್ಲಿ ಹಿಂದುತ್ವ ಪರಿವಾರ ಮತ್ತು ಕಾರ್ಪೊರೇಟ್‌ಗಳು ಸಮಾನ ಪಟ್ಟಭದ್ರ ಹಿತಾಸಕ್ತಿಯನ್ನು ಹೊಂದಿವೆ. ಸಾಮಾಜಿಕ ಅಭಿವೃದ್ಧಿಯ ದಿಕ್ಪಥದ ಬಗ್ಗೆ ಪ್ರಶ್ನೆಗಳನ್ನು ಕೇಳದ ಮತ್ತು ಸಂಪೂರ್ಣವಾಗಿ ಸ್ವಾರ್ಥ ಸಾಧನೆಯನ್ನೇ ಗುರಿಯಾಗಿ ಹೊಂದಿರುವ ವಿದ್ಯಾರ್ಥಿಗಳನ್ನು ಹೊಂದಲು ಈ ಇಬ್ಬರೂ ಉತ್ಸುಕರಾಗಿದ್ದಾರೆ. ಈ ಪ್ರವೃತ್ತಿಯೂ ಈಗ ವೇಗ ಪಡೆಯುತ್ತಿದೆ.

ಮತ್ತೆ ವಸಾಹತುಶಾಹಿ ಮಾನಸಿಕತೆಗೆ ಪರಿವರ್ತಿಸುವ ಶಿಕ್ಷಣ ವ್ಯವಸ್ಥೆಯು ದೇಶದಲ್ಲಿ ರಾಜಕೀಯ ಪ್ರಾಬಲ್ಯವನ್ನು ಹೊಂದಿರುವ ಕಾರ್ಪೊರೇಟ್– ಹಿಂದುತ್ವ ಮೈತ್ರಿಯ ಪ್ರತಿರೂಪವೇ ಆಗಿದೆ. ಮಾನಸಿಕತೆಯ ಇಂಥಹ ಪರಿವರ್ತನೆಯನ್ನೇ ಕಾರ್ಪೊರೇಟ್‌ಗಳು ಬಯಸುವುದು. ವಸಾಹತುಶಾಹಿ –ವಿರೋಧಿ ಹೋರಾಟದೊಂದಿಗೆ ಎಂದೂ ಸಂಬಂಧ ಹೊಂದಿಲ್ಲದ, ರಾಷ್ಟ್ರ ನಿರ್ಮಾಣದ ಅರ್ಥವನ್ನು ಎಂದೂ ಸರಿಯಾಗಿ ಅರ್ಥಮಾಡಿಕೊಳ್ಳದ, ದೇಶ ದೇಶಗಳನ್ನು ಗುಲಾಮಗಿರಿಗೆ ತಳ್ಳಿ ಅವುಗಳ ಸಂಪತ್ತನ್ನು ಕೊಳ್ಳೆ ಹೊಡೆದ ಸಾಮ್ರಾಜ್ಯಶಾಹಿಯ ಪಾತ್ರವನ್ನು ಮತ್ತು ಅದರ ಮರ್ಮವನ್ನು ಅರ್ಥಮಾಡಿಕೊಳ್ಳದ ಹಿಂದುತ್ವವು ಬಯಸುವುದು ಗುಲಾಮಗಿರಿಯ ಮಾನಸಿಕತೆಯನ್ನೇ. ಪ್ರಾಚೀನ ಭಾರತದ ಶ್ರೇಷ್ಠತೆಯ ಬಗ್ಗೆ ಬಾಯುಪಚಾರದ ಮಾತುಗಳಲ್ಲೇ ಅದು ಸಂತೃಪ್ತ. ಸಾಮ್ರಾಜ್ಯಶಾಹಿ ಸಿದ್ಧಾಂತವನ್ನು ಒಂದಿಷ್ಟು ವೈದಿಕ ಒಗ್ಗರಣೆಯೊಂದಿಗೆ ಸರಬರಾಜು ಮಾಡುವ ಶಿಕ್ಷಣ ವ್ಯವಸ್ಥೆಯು ಅವರಿಗೆ ಸಾಕಷ್ಟು ತೃಪ್ತಿಕರವಾಗಿದೆ. ದೇಶವು ಈಗ ರೂಪಿಸುತ್ತಿರುವ ಶಿಕ್ಷಣ ವ್ಯವಸ್ಥೆ ಎಂದರೆ, ಇದೇ.

ಕಾರ್ಪೊರೇಟ್– ಹಿಂದುತ್ವ ಮೈತ್ರಿಯು ನವ–ಉದಾರವಾದದ ಬಿಕ್ಕಟ್ಟಿಗೆ ಒಂದು ಸ್ಪಂದನೆಯೇ ಸರಿ. ಬಿಕ್ಕಟ್ಟಿನ ಸಂದರ್ಭದಲ್ಲಿ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಹಿಂದುತ್ವದೊಂದಿಗೆ ಮೈತ್ರಿ ಮಾಡಿಕೊಳ್ಳುವ ಅಗತ್ಯವನ್ನು ಕಾರ್ಪೊರೇಟ್ ಬಂಡವಾಳವು ಕಂಡುಕೊಳ್ಳುತ್ತದೆ. ಅದೇ ರೀತಿಯಲ್ಲಿ, ರಾಷ್ಟ್ರೀಯ ಶಿಕ್ಷಣ ನೀತಿಯು ರಾಷ್ಟ್ರವನ್ನು ಮುಂದಕ್ಕೆ ಕೊಂಡೊಯ್ಯುವುದರ ಬದಲು, ಪ್ರಶ್ನೆಗಳನ್ನು ಕೇಳುವುದನ್ನು ಮತ್ತು ಸತ್ಯ ಶೋಧನೆಯನ್ನು ಅಡ್ಡಿಪಡಿಸುವ ಮೂಲಕ ಮತ್ತು ವಿಚಾರಗಳನ್ನು ನಾಶಪಡಿಸುವ ಮೂಲಕ ಬಿಕ್ಕಟ್ಟನ್ನು ನಿರ್ವಹಿಸುತ್ತದೆ. ಹೆಮ್ಮೆಪಡುವ "ಉದ್ಯೋಗ–ಪ್ರಧಾನ" ನೀತಿಯು ಬೆರಳೆಣಿಕೆಯಷ್ಟು ವ್ಯಕ್ತಿಗಳಿಗೆ ಮಾತ್ರ ಪ್ರಯೋಜನಕಾರಿಯಾಗಿದೆ. ನವ–ಉದಾರವಾದದ ಬಿಕ್ಕಟ್ಟು ಎಂದರೆ, ಉದ್ಯೋಗಗಳು ಒಟ್ಟಾರೆಯಾಗಿ ಕಡಿಮೆಯಾಗುವ ವಾಸ್ತವವೇ ಅಲ್ಲದೆ ಮತ್ತೇನೂ ಅಲ್ಲ. ಅದರ ಆಶಯಗಳಿಗನುಗುಣವಾಗಿ, ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳನ್ನು ಶಿಕ್ಷಣ ವ್ಯವಸ್ಥೆಯ ವ್ಯಾಪ್ತಿಯಿಂದ ಹೊರಗಿಡಲಾಗುತ್ತದೆ. ಈ ಶಿಕ್ಷಣ ವಂಚಿತರ ಮನಸ್ಸನ್ನು ಕೋಮು ವಿಷದಿಂದ ತುಂಬಿಸಿ, ಒಂದು ಮಾರ್ಪಡಿಸಿದ ಕಥನದೊಂದಿಗೆ ಅವರ ಲೌಕಿಕ ಜೀವನದ ಸಮಸ್ಯೆಗಳನ್ನು ಪಕ್ಕಕ್ಕೆ ತಳ್ಳಲಾಗುತ್ತದೆ. ಪರಿಣಾಮವಾಗಿ ಅವರು ಫ್ಯಾಸಿಸ್ಟ್ ತೆರನ ಕೊಲೆಗಡುಕ–ತಂಡಗಳಿಗೆ ಮೂರು ಕಾಸಿನ ಕೂಲಿಗೆ ನಿಯೋಜನೆಗೊಳ್ಳುತ್ತಾರೆ.

ಆದ್ದರಿಂದ ಈ ಶಿಕ್ಷಣ ನೀತಿಯು ಕ್ಷಣಿಕವಷ್ಟೇ ಆಗಿರುತ್ತದೆ, ನಿರುದ್ಯೋಗ ಮತ್ತು ಅದರಿಂದ ಉಂಟಾಗುವ ಸಂಕಷ್ಟಗಳ ಬಗ್ಗೆ ಯುವಕರು ಪ್ರಶ್ನೆಗಳನ್ನು ಕೇಳಲು ಆರಂಭಿಸುವ ತನಕ ಅದು ಇರುತ್ತದೆ. ನವ–ಉದಾರವಾದಿ ಬಂಡವಾಳಶಾಹಿಯನ್ನು ಮೀರಿದ ಪರ್ಯಾಯ ಅಭಿವೃದ್ಧಿ ದಿಕ್ಪಥದ ಅನ್ವೇಷಣೆ ಆಗುತ್ತಿರುವಂತೆಯೇ, ಎನ್‌ಡಿಎ ಸರ್ಕಾರವು ಪರಿಚಯಿಸ ಬಯಸುವ ಶಿಕ್ಷಣ ವ್ಯವಸ್ಥೆಯ ಆಚೆಗಿನ ಶಿಕ್ಷಣ ವ್ಯವಸ್ಥೆಯ ಅನ್ವೇಷಣೆಯೂ ಆರಂಭವಾಗುತ್ತದೆ. ವಸಾಹತುಶಾಹಿ–ವಿರೋಧಿ ಹೋರಾಟದ ಸಮಯದಲ್ಲಿ ಆಗಿದ್ದಂತೆ ವಸಾಹತುಶಾಹಿ ಮಾನಸಿಕತೆಯಿಂದ ಮನಸ್ಸುಗಳನ್ನು ಹೊರತರುವ ಕಾರ್ಯವು ಮತ್ತೊಮ್ಮೆ ಕಾರ್ಯಸೂಚಿಗೆ ಬರುತ್ತದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE January 8-14, 2024 Price: Rs. 10/- Date of Publication: 5 January 2023 RNI No. KARKAN /2006/17926 Posted on 06-01-2024
Posted at BG PSO, BG - 560026 **Posted at Periodical Rate -** Rs. 2

'ಕಾಟೇರ' ಪಾಳೇಗಾರಿ ಮತ್ತು ಜಾತಿ ವ್ಯವಸ್ಥೆ ವಿರುದ್ಧದ ಧ್ವನಿ

ನಾಯಕ ನಟನಾಗಿ ದರ್ಶನ್, ನಾಯಕಿ ನಟಿಯಾಗಿ ಆರಾಧನಾ ಅಭಿನಯದ, ತರುಣ್ ಸುಧೀರ್ ನಿರ್ದೇಶನದ, ರಾಕ್ ಲೈನ್ ಪ್ರೊಡಕ್ಷನ್ ಗಟ್ಟಿ ಕಥಾಹಂದರವನ್ನು ಹೊಂದಿರುವ ಅಪರೂಪದ ಕನ್ನಡ ಸಿನಿಮಾ ಕಾಟೇರ.

ಎಚ್.ಆರ್. ನವೀನ್ ಕುಮಾರ್



ನಾಯಕ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರ ಅಭಿಮಾನಿಗಳನ್ನು ಗಮನದಲ್ಲಿಟ್ಟುಕೊಂಡು ಕಮರ್ಷಿಯಲ್ ಸಿನಿಮಾದ ಎಲ್ಲಾ ಜಲಕ್ ಗಳನ್ನು, ಸ್ವಲ್ಪ ಅತಿಯಾದ ಫೈಟ್ ಗಳನ್ನು ಹೊಂದಿದ್ದರೂ ಇಡೀ ಚಿತ್ರದ ಚಿತ್ರಕತೆ, ಸಂಭಾಷಣೆ ಮತ್ತು ಅದರಲ್ಲಿ ಬರುವ ರೈತರ ಬವಣೆ-ಭೂಮಿಯ ಪ್ರಶ್ನೆ ಹಾಗು ಜಾತಿ ಅಸ್ಪೃಶ್ಯತೆ-ಮರ್ಯಾದೆ ಹತ್ಯೆಗಳ ಕರಾಳತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರೇಕ್ಷಕರಿಗೆ ಮುಟ್ಟಿಸುವಲ್ಲಿ ನಿರ್ದೇಶಕ ತರುಣ್ ಸುಧೀರ್ ಯಶಸ್ವಿಯಾಗಿದ್ದಾರೆ.

ಸೈರಾಟ್, ಜೈ ಭೀಮ್, ಅಸುರನ್, ಫಂಡ್ರಿ, ಸರಪಟ್ಟ ಅಂತಹ ಸಿನಿಮಾಗಳು ತಮಿಳು, ಮಲೆಯಾಳಂ ಮತ್ತಿತರೆ ಭಾಷೆಗಳಲ್ಲಿ ಬಂದಾಗೆಲ್ಲಾ ಕನ್ನಡ ಚಿತ್ರರಂಗಕ್ಕೆ ಏನಾಗಿದೆ. ಅಬ್ಬರದ ಸಿನಿಮಾಗಳನ್ನು ಕೇವಲ ಕೆಟ್ಟ ಮನೋರಂಜನೆಗೆ ಮಾತ್ರ ಬಳಕೆ ಮಾಡುತ್ತಿದ್ದು, ಸಾಮಾಜಿಕ ಕಳಕಳಿ ಇರುವ ಸಿನಿಮಾ ಮಾಡುವವರು ಯಾರೂ ಇಲ್ಲವಾ ಎಂದು ಹಲವು ಬಾರಿ ಅನಿಸಿದ್ದುಂಟು. ಅದರಲ್ಲೂ ಸ್ಟಾರ್ ನಟನಟಿಯರೇ ಇಂತಹ ಚಿತ್ರಕತೆಗಳನ್ನು ಒಪ್ಪಿ ಅಭಿನಯಿಸಿದರೆ ಜನರಿಗೆ ಸುಲಭವಾಗಿ ವಿಚಾರಗಳು ಮನಮುಟ್ಟುತ್ತವೆ ಎಂದು ಅನಿಸಿತ್ತು. ಈಗ ನನ್ನ ಎಲ್ಲಾ ಪ್ರಶ್ನೆಗಳಿಗೆ ಕಾಟೇರ ಉತ್ತರವಾಗಿ ನಿಂತಿದೆ.

ಭೂಮಿ ಇಲ್ಲದೆ ರೈತರು ಭೂಮಾಲಕರ ಜಮೀನುಗಳಲ್ಲಿ ಗೇಣಿಗೆ ದುಡಿದು ಬಂದ ಫಸಲನ್ನೆಲ್ಲಾ ಗೇಣಿ ಮೂಲಕ ಭೂಮಾಲಕನಿಗೆ ಕೊಟ್ಟು ಉಪವಾಸ ಸಾಯಬೇಕಾದಂತಹ ಅತ್ಯಂತ ಕಠೋರ ಪರಿಸ್ಥಿತಿ ಭೂಮಾಲಕ, ಪಾಳೇಗಾರಿ ವ್ಯವಸ್ಥೆಯದ್ದು.

ಸ್ವತಂತ್ರ ಪೂರ್ವ ಮತ್ತು ನಂತರ ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗಳಿಂದ ಕೂಡಿದ್ದ ಭೂಮಾಲಕ ವ್ಯವಸ್ಥೆ, ಗೇಣಿ ಪದ್ದತಿಯ ವಿರುದ್ಧ, ಉಳುವವನಿಗೆ ಭೂಮಿ ಎಂಬ ಹಲವು ರೈತ ಹೋರಾಟಗಳು ದೇಶದ ಹಲವು ಭಾಗಗಳಲ್ಲಿ ನಡೆದಿವೆ. ಅದರಲ್ಲಿ ನಮ್ಮ ಗಡಿರಾಜ್ಯಗಳಾದ ತೆಲಂಗಾಣ ರೈತರ ಸಶಸ್ತ್ರ ಹೋರಾಟ, ಕೇರಳದ ಕಯ್ಯೂರು, ಪುನ್ನಪ್ಪ ವೈಯಲಾರ್ ರೈತ ಹೋರಾಟ, ಮಹಾರಾಷ್ಟ್ರದ ವಾರಲಿ ಆದಿವಾಸಿಗಳ ಹೋರಾಟ. ಇಷ್ಟು ಮಾತ್ರವಲ್ಲದೆ ಅದೇ ಕಾಲಘಟ್ಟದಲ್ಲಿ ದೇಶಾದ್ಯಂತ ಹತ್ತು ಹಲವು ರೈತ ಹೋರಾಟಗಳು ಭೂಮಿಯ ಪ್ರಶ್ನೆಯನ್ನು ಪ್ರಧಾನ ಪ್ರಶ್ನೆಯನ್ನಾಗಿ ಎತ್ತಿಕೊಂಡು ಸಮರಧೀರ ಚಳುವಳಿಯನ್ನು ನಡೆಸಿವೆ.



ಇವುಗಳ ಪ್ರತಿಫಲವಾಗಿಯೇ 1957 ರಲ್ಲಿ ಕೇರಳದಲ್ಲಿ ಅಧಿಕಾರಕ್ಕೆ ಬಂದ ಇಎಂಎಸ್ ನಂಬೂದಿರಿ ಪಾಡ್ ರವರ ನೇತೃತ್ವದ ಮೊದಲ ಎಡರಂಗ ಸರ್ಕಾರ, ನಂತರ ಪಶ್ಚಿಮ ಬಂಗಾಳ ಮತ್ತು ತ್ರಿಪುರಾಗಳಲ್ಲಿ ಅಧಿಕಾರಕ್ಕೆ ಬಂದ ಎಡರಂಗ ಸರ್ಕಾರಗಳು ಭೂಸುಧಾರಣಾ ಕಾನೂನುಗಳನ್ನು ಜಾರಿಗೆ ತಂದು ಭೂಹೀನ ಬಡವರಿಗೆ ಮತ್ತು ದಲಿತರಿಗೆ ಲಕ್ಷಾಂತರ ಎಕ್ಕರೆ ಭೂಮಿಯನ್ನು ಉಚಿತವಾಗಿ ಹಂಚಿಕೆ ಮಾಡಲಾಯಿತು.

ಇವೆಲ್ಲವುಗಳ ಫಲಶೃತಿಯಾಗಿ ದೇಶದಲ್ಲಿ ಇಂದಿರಾಗಾಂಧಿ ಭೂಸುಧಾರಣಾ ಕಾನೂನು ಜಾರಿಗೆ ಬಂದು ಕರ್ನಾಟಕದಲ್ಲಿ ಮುಖ್ಯಮಂತ್ರಿ ದೇವರಾಜು ಅರಸುರವರು ಇದನ್ನು ಜಾರಿಗೆ ತಂದರು.


ಈ ಸಂದರ್ಭದಲ್ಲಿನ ಭೂಮಾಲಕ, ಪಾಳೇಗಾರರ ದೌರ್ಜನ್ಯ, ಮತ್ತು ಶೋಷಣೆಯನ್ನು ಸಿನಿಮಾ ಅತ್ಯುತ್ತಮವಾಗಿ ಹಿಡಿದಿಟ್ಟಿದೆ. ಭೂಸುಧಾರಣಾ ಕಾನೂನು ಜಾರಿಯಾದ ಸುದ್ದಿ ತಿಳಿದ ಗೇಣಿದಾರ ರೈತರು ಸಂಘಟಿತರಾಗಿ ರೈತ ಸಂಘದ ಮೂಲಕ ಒಗ್ಗಟ್ಟಿನಿಂದ ತಮ್ಮ ಭೂಮಿಯ ಹಕ್ಕನ್ನು ಪಡೆಯಲು ಮುಂದಾಗುತ್ತಾರೆ. ಇದನ್ನು ತಡೆಯಲು ಭೂಮಾಲಕರು ತಮ್ಮ ಹಣ ಬಲ, ತೋಳ್ಬಲ ಮತ್ತು ಅಧಿಕಾರ ಬಲ, ರಾಜಕೀಯ ಬಲವನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ.

ಸಿನಿಮಾದ ಪ್ರತಿ ದೃಶ್ಯದಲ್ಲಿರುವ ಒಂದೊಂದು ಡೌಲಾಗ್ ಗಳು ಪ್ರೇಕ್ಷಕರಿಂದ ಕೇಕೆ ಮತ್ತು ಶಿಳ್ಳೆಗಳನ್ನು ಗಳಿಸುತ್ತಿದ್ದರೂ ಒಂದು ಗಂಭೀರ ಚಿಂತನೆಗೆ ಒಡ್ಡುತ್ತಿತ್ತು.

ಜಮೀನ್ದಾರಿ ವಿರುದ್ಧ, ಜಾತಿ ವ್ಯವಸ್ಥೆ ವಿರುದ್ಧ ನಾಯಕ ನಟ ಆಡುವ ಮಾತು, "ವ್ಯವಸ್ಥೆ ಬದಲಾಗಬೇಕು ಅಂದ್ರೆ ಹೋರಾಟ ಆಗಲೇ ಬೇಕು" ಈ ಮಾತುಗಳು ಕಥೆಯನ್ನು ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗಿ ಹೆಣೆಯದೆ ಒಂದು ಸಾಮೂಹಿಕ ಪ್ರಯತ್ನದ ಭಾಗವಾಗಿ ಎಲ್ಲವನ್ನು ಗಳಿಸಿಕೊಳ್ಳಬಹುದೆಂಬ ಸಂದೇಶವನ್ನು ನೀಡಲು ಪ್ರಯತ್ನಿಸಲಾಗಿದೆ.

ಇಡೀ ಸಿನಿಮಾದಲ್ಲಿ ಮತ್ತೊಂದು ಪ್ರಧಾನ ಅಂಶ ಎಂದರೆ ಅದು ಜಾತಿ ಅಸ್ಪೃಶ್ಯತೆ, ತಾರತಮ್ಯ ಮತ್ತು ಮರ್ಯಾದೆ ಹತ್ಯೆಗಳು. ಇವುಗಳನ್ನು ನಿರ್ದೇಶಕ ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಡಲು ಶ್ರಮಿಸಿದ್ದಾರೆ. ಅದಕ್ಕೆ ದರ್ಶನ್ ಆದಿಯಾಗಿ ಎಲ್ಲಾ ಕಲಾವಿದರೂ ಸಾತ್ ನೀಡಿದ್ದಾರೆ. ಕೆಲವು ದೃಷ್ಯಗಳನ್ನು ನೋಡುತ್ತಿದ್ದರೆ ಇವು ನಮ್ಮ ಊರಲ್ಲೇ ನಡೆದಂತಹವು, ಈ ಘಟನೆಯನ್ನು ನಾನು ಪತ್ರಿಕೆಯಲ್ಲಿ ಓದಿ, ಟಿವಿಯಲ್ಲಿ ನೋಡಿದ್ದೇವೆ ಎಂದೆನಿಸುವುದು ಮಾತ್ರವಲ್ಲ ಸಿನಿಮಾ ಮುಗಿದ ನಂತರವೂ ಈ ದೃಶ್ಯಗಳು ನಮ್ಮನ್ನು ಕಾಡುತ್ತವೆ.

ತನ್ನೆಲ್ಲಾ ಅಂತಸ್ತು, ಹೀರೋನ ಇಮೇಜ್ ಗಳನ್ನೆಲ್ಲಾ ಲೆಕ್ಕಿಸದೆ ಸಮಾಜಕ್ಕೆ ಒಂದು ಪರಿಣಾಮಕಾರಿ ಸಂದೇಶ ನೀಡುವ ಇಂತಹ ಚಿತ್ರವನ್ನು ಒಪ್ಪಿಕೊಂಡಿದ್ದಕ್ಕೆ ಧರ್ಶನ್ ಸೆಲಬ್ರಿಟಿಗಳ ಹೃದಯದಲ್ಲಿ ಇನ್ನೂ ಎತ್ತರಕ್ಕೆ ಬೆಳೆದಿದ್ದಾರೆ. ಅದೇ ರೀತಿ ಇಂತಹ ಒಬ್ಬ ಕಮರ್ಷಿಯಲ್ ಹೀರೋಗೆ ಇಂತಹದೊಂದು ಚಿತ್ರಕತೆಯನ್ನು



ಹೆಣೆದು ಸಿನಿಮಾವನ್ನು ಗೆಲ್ಲಿಸಬಹುದು ಎಂದು ಯೋಚಿಸಿ ಕೈ ಹಾಕಿದ ನಿರ್ದೇಶಕ ತರುಣ್ ಸುಧೀರ್ ಅವರಿಗೆ, ಇಂತಹ ಕಥೆಗೆ ಹಣ ಹೂಡಿಕೆ ಮಾಡುವ ಧೈರ್ಯ ಮಾಡಿದ ರಾಕಲೈನ್ ಪ್ರೊಡಕ್ಷನ್ ವೆಂಕಟೇಶ್ ಈ ಮೂವರು ಅಭಿನಂದನಾರ್ಹರು.

ಅಂತಿಮವಾಗಿ ಸಿನಿಮಾದ ಇತರೆ ಕಲಾವಿದರು, ತಂತ್ರಜ್ಞರ ಜೊತೆಗೆ ಈ ಸಿನಿಮಾವನ್ನ ತಲೆಯ ಮೇಲೆ ಹೊತ್ತು ಸಾಗಿಸುತ್ತಿರುವ ಕನ್ನಡದ ಮನಸುಗಳಿಗೆ ಕೋಟಿ ಕೋಟಿ ವಂದನೆಗಳನ್ನು ಹೇಳುತ್ತಾ, ಸಿನಿಮಾವನ್ನು ಕೇವಲ ಮನೋರಂಜನೆಗೆ ಮಾತ್ರ ನೋಡಿ ಮರೆಯದೆ, ಅದರ ಅಂಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಅನಿಷ್ಟ ಜಾತಿಪದ್ದತಿ ಮತ್ತು ಪಾಳೇಗಾರಿ ವ್ಯವಸ್ಥೆ ವಿರುದ್ಧ ದನಿ ಎತ್ತಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಎಲ್ಲರೂ ಕುಟುಂಬ ಸಮೇತರಾಗಿ ಮನೆ ಮಂದಿಯೆಲ್ಲಾ ಚಿತ್ರಮಂದಿರಕ್ಕೆ ಬಂದು ಕಾಟೇರ ಸಿನಿಮಾ ನೋಡಿ.

ಕಾರವಾರ: ನನಸು-ಕನಸು 25 ನೇ ವರ್ಷದ ಕಾರ್ಯಕ್ರಮ

ಹೊಸವರ್ಷ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಿ, ಶಾಂತಿ-ಸೌಹಾರ್ದತೆಯನ್ನು ಬೆಳೆಸುವ ಛಲವನ್ನು ನೀಡಲಿ, ನಾಡಿನ ಒಳಿತಿಗಾಗಿ ಭಿನ್ನಬೇಧವಿಲ್ಲದೇ ಶ್ರಮಿಸೋಣ ಎಂದು ಜಿಲ್ಲೆಯ ಹಿರಿಯ ಸಹಕಾರಿ ಧುರೀಣ ಜಾರ್ಜ್ ಫರ್ನಾಂಡೀಸ್ ಕರೆ ನೀಡಿದರು. ಅವರು ಚಿಂತನ ಉತ್ತರ ಕನ್ನಡ, ಸಹಯಾನ ಕೆರೆಕೋಣ, ಕಾರವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಪ್ರೀತಿಪದ ಮತ್ತು ಸಮಾನ ಮನಸ್ಸಿನ ಪ್ರಗತಿಪರ ಸಂಘಟನೆಗಳು ಕಾರವಾರದ ಕಡಲತಡಿಯ ಯುದ್ಧನೌಕೆಯ ಎದುರು ಏರ್ಪಡಿಸಿದ್ದ ಹಳೆಯ ವರ್ಷಕ್ಕೆ ವಿದಾಯ-ಹೊಸವರ್ಷಕ್ಕೆ ಸ್ವಾಗತ ನನಸು-ಕನಸು 25 ನೇ ವರ್ಷದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ನಮಗೆ ಬೇಕಾದ ಸೌಕರ್ಯಗಳನ್ನು ಹೋರಾಟ ಮಾಡಿಯೇ ಪಡೆದು ಕೊಳ್ಳಬೇಕಾದ ಅನಿವಾರ್ಯತೆಗಳಿರುವದರಿಂದ ಹೋರಾಟವನ್ನು ನಿರಂತರವಾಗಿ ಮುನ್ನಡೆಸುವ ಛಲ ಹೊಂದಿರಬೇಕು ಎಂದರು. ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ನಿವೃತ್ತ ಪ್ರಾಚಾರ್ಯ ಜಿ.ಡಿ.ಮನೋಜೆಯವರು ಅಸ್ಪೃಶ್ಯತೆ, ಅಸಮಾನತೆಗಳು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಮುಂದುವರೆದಿರುವುದು ಮನುಕುಲದ ದುರಂತ ಎಂದು ವಿಷಾದಿಸಿ, ಅವುಗಳ ನಿವಾರಣೆಗೆ ನಿರಂತರ ಹೋರಾಟ ಮುಂದುವರಿಯಬೇಕಾಗಿದೆ ಎಂದರು. ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ರಾಮಾ ನಾಯ್ಕ ಅವರು ಹಿಂದಿನ ವರ್ಷಗಳಲ್ಲಿ ಹಲವು ಸಂಘರ್ಷಗಳನ್ನು ದಾಟಿ ಬಂದಿದ್ದು, ಶಾಂತಿ ಸೌಹಾರ್ದತೆಯ ಸಮಾಜದ ಕನಸನ್ನು ನನಸು ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಲೇ ಇರಬೇಕಾಗಿದೆ. ನಮ್ಮ ಸುತ್ತಲಿನ ವಿದ್ಯಮಾನಗಳಿಗೆ ಸ್ಪಂದಿಸುವ ಸ್ವಾಭಿಮಾನದ **ಪುಟ 10 ಕ್ಕೆ**



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**